

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 20 ಮಂಗಳವಾರ 2026

ಸಂಪುಟ: 46 | ಸಂಚಿಕೆ: 272 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಹುಣಸೂರು ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ದರೋಡೆ ಪ್ರಕರಣ ಭೇದಿಸಿದ ಮೈಸೂರು ಜಿಲ್ಲಾ ಪೊಲೀಸರು

ಬಿಹಾರದಲ್ಲಿ ಖತರ್ನಾಕ್ ಖದೀಮರ ಗ್ಯಾಂಗ್‌ನ ಇಬ್ಬರ ಬಂಧನ

■ ಮೈಸೂರು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ■ ಪಂಕಜ್‌ಕುಮಾರ್ ದರೋಡೆಯ ಮಾಸ್ಟರ್‌ಮೈಂಡ್ ■ ದರೋಡೆಗೆ ಮೈಸೂರು, ಕೊಡಗು, ಹಾಸನದಲ್ಲೂ ಸ್ಕೆಚ್ ■ ಲೂಟಿ ಬಳಿಕ ವಿವಿಧ ಗುಂಪುಗಳಾಗಿ ಪ್ರತ್ಯೇಕ ಪರಾರಿ ■ ಆರೋಪಿಗಳಿಂದ ಬೈಕ್, 92 ಸಾವಿರ ನಗದು; 12.5 ಗ್ರಾಂ ಚಿನ್ನ ವಶ

ಮೈಸೂರು, ಜ.19(ಬಿಎಲ್‌ಯು)– ಹುಣಸೂರಿನ ಸ್ಕೈ ಗೋಲ್ಡ್ & ಡೈಮಂಡ್ಸ್ ಆಭರಣ ಮಳಿಗೆಯಲ್ಲಿ 10 ಕೋಟಿ ರೂ. ಮೌಲ್ಯದ ಚಿನ್ನಾಭರಣ ದೋಚಿದ ಪ್ರಕರಣವನ್ನು ಭೇದಿಸುವಲ್ಲಿ ಮೈಸೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ಪ್ರಕರಣದ ಮಾಸ್ಟರ್‌ಮೈಂಡ್ ಸೇರಿದಂತೆ ಬಿಹಾರ ಮೂಲದ ಇಬ್ಬರು ನಟೋರಿಯಸ್ ಖದೀಮರನ್ನು ಬಂಧಿಸಿದ್ದಾರೆ. ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಮಗ್ರ ಮಾಹಿತಿ ನೀಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಳೆದ 15 ದಿನಗಳ ನಿರಂತರ ಕಾರ್ಯಾಚರಣೆಯಲ್ಲಿ ಆಧುನಿಕ ತಾಂತ್ರಿಕ ವಿಧಾನಗಳ ಮೂಲಕ ಪ್ರಕರಣ ಭೇದಿಸಿ, ಇಬ್ಬರು ಆರೋಪಿಗಳ ಹೆಡೆಮುರಿ ಕಟ್ಟಿದ್ದೇವೆ ಎಂದರು.



ಮೈಸೂರು ಎಸ್‌ಪಿ ಕಚೇರಿ ಸಭಾಂಗಣದಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಅಡಿಷನಲ್ ಎಸ್ಪಿ ನಾಗೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೂಲತಃ ಬಿಹಾರದ ಬಾಗಲ್ಪುರ್ ಜಿಲ್ಲೆಯ ಪಂಕಜ್‌ಕುಮಾರ್ ಹಾಗೂ ದೆಹಲಿಯ ಜೇತ್‌ಪುರ್‌ನ ಹರಿಹರನಗರ ಬಡಾವಣೆಯ ರಿಷಿಕೇಶ್ ಕುಮಾರ್ ಸಿಂಗ್ ಬಂಧಿತ ಆರೋಪಿಗಳಾಗಿದ್ದಾರೆ. ಇವರಲ್ಲಿ ಪಂಕಜ್‌ಕುಮಾರ್ ದರೋಡೆ ಪ್ರಕರಣದ ಮಾಸ್ಟರ್‌ಮೈಂಡ್ ಎಂದು ಹೇಳಿದರು.

ಆರೋಪಿಗಳನ್ನು ದರ್ಬಾಂಗ್ ಜಿಲ್ಲೆಯಲ್ಲಿ ಬಂಧಿಸಿದ್ದು, 92 ಸಾವಿರ ರೂ. ನಗದು, ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ಚಿಹ್ನೆ ಇರುವ 12.5 ಗ್ರಾಂ ಚಿನ್ನ, ಹಾಗೂ ಕೃತ್ಯಕ್ಕೆ ಬಳಸಿದ್ದ ರಾಯಲ್ ಎನ್‌ಫೀಲ್ಡ್ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವಿವರಿಸಿದರು. ▶ 6ನೇ ಪುಟಕ್ಕೆ

ದೋಚಿದ್ದು 8 ಕೆ.ಜಿ. ಚಿನ್ನ, ಈಗ ಸಿಕ್ಕಿದ್ದು 12 ಗ್ರಾಂ ಚಿನ್ನ!

ಹುಣಸೂರಿನ ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ಶಾಪ್‌ನಲ್ಲಿ ದರೋಡೆ ಆಗಿರುವುದು 10 ಕೋಟಿ ಮೌಲ್ಯದ 8.34 ಕೆ.ಜಿ. ಚಿನ್ನವಾದರೂ ಈಗ ಪತ್ತೆಯಾಗಿರುವುದು ಕೇವಲ 12.5 ಗ್ರಾಂ ಚಿನ್ನ ಮಾತ್ರ.

ಆರೋಪಿಗಳು ಚಿನ್ನಾಭರಣವನ್ನು ಎಲ್ಲಿ ಹೊತ್ತೊಯ್ದಿದ್ದಾರೆ, ಅದನ್ನು ಎಲ್ಲಿ ಬಚ್ಚಿಟ್ಟಿದ್ದಾರೆ ಎಂಬ ಮಾಹಿತಿ ಕಲೆ ಹಾಕುವಲ್ಲಿ ಮೈಸೂರು ಪೊಲೀಸರು ನಿರತರಾಗಿದ್ದಾರೆ. ಇದು ವೃತ್ತಿಪರ ನಟೋರಿಯಸ್ ಗ್ಯಾಂಗ್ ಆಗಿದ್ದು, ಇಬ್ಬರನ್ನು ಹೊರತುಪಡಿಸಿ ಉಳಿದವರು ಪೊಲೀಸರ ಬಲೆಗೆ ಬೀಳದೆ ಚಳ್ಳೆಹಣ್ಣು ತಿನ್ನಿಸುತ್ತಿದ್ದಾರೆ. ಅಲ್ಲದೆ ಚಿನ್ನಾಭರಣ ಎಲ್ಲಿ ಬಚ್ಚಿಟ್ಟಿದ್ದಾರೆ ಎಂಬ ಸಣ್ಣ ಸುಳಿವನ್ನು ಕೂಡ ಬಿಟ್ಟು ಕೊಡುತ್ತಿಲ್ಲ. ಆದರೆ ಪೊಲೀಸರು ಮಾತ್ರ ವಿಶ್ವಾಸ ಕಳೆದುಕೊಳ್ಳದೆ ಆರೋಪಿಗಳಿಗೆ ಕೋಳ ತೊಡಿಸಲು ಟೊಂಕ ಕಟ್ಟಿ ಬಿಹಾರದಲ್ಲಿ ಬಿರುಸಿನ ಕಾರ್ಯಾಚಾರಣೆ ನಡೆಸುತ್ತಿದ್ದಾರೆ.

ಮೊಬೈಲ್ ಬಳಸುತ್ತಿರಲಿಲ್ಲ; ಸದ್ಯ ಒಂದು ಸುಳಿವಿಂದ ಸಿಕ್ಕರು!

ಪೊಲೀಸರಿಗೆ ಸಿಕ್ಕಿ ಬೀಳುವ ಕಾರಣಕ್ಕೆ ಕಿಲಾಡಿ ಗ್ಯಾಂಗ್‌ನ ಯಾರೂ ಮೊಬೈಲ್ ಫೋನ್ ಬಳಸುತ್ತಿರಲಿಲ್ಲ. ಮೊಬೈಲ್ ಫೋನ್ ಬಳಸಿದರೆ ಲೋಕೇಷನ್ ಟ್ರೇಸ್ ಮಾಡಿ, ಅದರ ಆಧಾರದ ಮೇಲೆ ನಮ್ಮ ಮೊಬೈಲ್ ಸಂಖ್ಯೆಯನ್ನು ಪೊಲೀಸರು ಪತ್ತೆ ಮಾಡುತ್ತಾರೆ. ಇದರ ಆಧಾರದ ಮೇಲೆ ಆಧಾರ್ ಕಾರ್ಡ್ ಆಧರಿಸಿ, ನಮ್ಮ ಮೂಲ ಸ್ಥಾನ ಹುಡುಕುತ್ತಾರೆ ಎಂದು ಮೊಬೈಲ್ ಫೋನ್ ಮುಟ್ಟಿರಲಿಲ್ಲ. ಅಲ್ಲದೆ ದರೋಡೆ ಮಾಡುವ ಮುನ್ನ ಹುಣಸೂರು ಹಾಗೂ ಪಿರಿಯಾಪಟ್ಟಣದಲ್ಲಿ ವಾಸ್ತವ್ಯ ಹೂಡಿದ್ದ ಲಾಡ್ಜ್‌ಗೆ ನಕಲಿ ಆಧಾರ್ ಕಾರ್ಡ್ ನೀಡಿದ್ದರು.

ಆದರೆ ಎಂತಹ ಚಾಲಾಕಿಗಳಾದರೂ ಅಪರಾಧ ಕೃತ್ಯ ಎಸಗುವ ವೇಳೆ ಒಂದಲ್ಲಾ ಒಂದು ಸಣ್ಣ ಸುಳಿವು ಬಿಟ್ಟು ಹೋಗಿರುತ್ತಾನೆ. ಅದರಂತೆ ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ದರೋಡೆ ಮಾಡಲು ಬಂದ ಪಂಕಜ್ ಕುಮಾರ್ ಗ್ಯಾಂಗ್‌ನ ಮೂವರ ಮುಖ ಚಹರೆ ಸಿಸಿಟಿವಿಯಲ್ಲಿ ಸ್ಪಷ್ಟವಾಗಿ ಸೆರೆಯಾಗಿತ್ತು. ಇದೇ ಪೊಲೀಸರಿಗೆ ದೊಡ್ಡ ಸುಳಿವಾಗಿತ್ತು. ▶ 6ನೇ ಪುಟಕ್ಕೆ

ಕಾರ್ಯಾಚರಣೆ ಕ್ಲಿಷ್ಟಕರವಾಗಿತ್ತು

ಬಿಹಾರದ ಬಾಗಲ್ಪುರ್‌ನ ಪಂಕಜ್ ಕುಮಾರ್ ಮನೆ ಮೇಲೆ ದಾಳಿ ನಡೆಸುವುದು ಮೈಸೂರು ಪೊಲೀಸರಿಗೆ ದೊಡ್ಡ ಸವಾಲಾಗಿತ್ತು. ಬಿಹಾರವನ್ನು ಗೂಂಡಾ ರಾಜ್ಯ ಎಂಬ ಹೆಸರಿಂದ ಈಗಲೂ ಕರೆಯಲಾಗುತ್ತದೆ. ನಟೋರಿಯಸ್‌ಗಳು ಜನ ಸಾಮಾನ್ಯರಿರಲಿ, ಪೊಲೀಸರ ಮೇಲೆಯೇ ಅಟ್ಯಾಕ್ ಮಾಡುವಷ್ಟು ಕುಖ್ಯಾತರು. ಪಂಕಜ್‌ಕುಮಾರ್ ನೆಲೆಯಲ್ಲಿ ಅವನ ಬೆಂಬಲಿಗರು ಇರುವುದು ಖಾತ್ರಿಯಾಗಿತ್ತು. ಇದರಿಂದ ತಾವು ಆತನ ಮನೆಗೆ ನೇರವಾಗಿ ಹೋಗುವುದು ಕಷ್ಟಕರ ಎಂದು ತಿಳಿದ ಮೈಸೂರು ಪೊಲೀಸರು ಸ್ಥಳೀಯ ಪೊಲೀಸರ ಸಹಕಾರ ಪಡೆದು ಕಾರ್ಯಾಚರಣೆ ನಡೆಸಿದ್ದಾರೆ.

ಬಿಜೆಪಿ ರಾಷ್ಟ್ರಾಧ್ಯಕ್ಷರಾಗಿ ನಿತಿನ್ ನಬಿನ್ ಇಂದು ಅಧಿಕಾರ ಸ್ವೀಕಾರ

ನವದೆಹಲಿ,ಜ.19–ಯಾವುದೇ ಚುನಾವಣೆಯಿಲ್ಲದೆ ನಿತಿನ್ ನಬಿನ್ ಅವರನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದ ನಿರ್ಣಯದಲ್ಲಿ ಆಯ್ಕೆ ಮಾಡಲಾಗಿದೆ. ನಿತಿನ್ ಅವರ ಪರವಾಗಿ 37 ಸೆಟ್ ನಾಮಪತ್ರಗಳು ಸಲ್ಲಿಕೆಯಾಗಿವೆ. ಈ ಸ್ಥಾನಕ್ಕೆ ಬೇರೆ ಯಾವುದೇ ಅಭ್ಯರ್ಥಿಗಳ ಹೆಸರನ್ನು ಪ್ರಸ್ತಾಪಿಸಲಾಗಿಲ್ಲ. ಹೀಗಾಗಿ, ನಿತಿನ್ ನಬಿನ್ ಅವಿರೋಧವಾಗಿ ಬಿಜೆಪಿ ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜೆ.ಪಿ.ನಡ್ಡಾ ಅವರ ಅಧಿಕಾರಾವಧಿ ಕೊನೆಗೊಂಡ ಹಿನ್ನೆಲೆಯಲ್ಲಿ ಬಿಜೆಪಿಗೆ ನೂತನ ರಾಷ್ಟ್ರಾಧ್ಯಕ್ಷರ ಆಯ್ಕೆಯಾಗಿದೆ.



ನಿತಿನ್ ನಬಿನ್

ಬಿಹಾರದ ಬಿಜೆಪಿ ಹಿರಿಯ ನಾಯಕ ನಿತಿನ್ ನಬಿನ್, ಬಿಹಾರದ ರಾಜಕೀಯದಲ್ಲಿ ಬಹಳ ಪ್ರಸಿದ್ಧರಾಗಿದ್ದಾರೆ. ಪಾಟ್ನಾದಲ್ಲಿ ಜನಿಸಿದ ಅವರು ಹಿರಿಯ ಬಿಜೆಪಿ ನಾಯಕ ಮತ್ತು ಮಾಜಿ ಶಾಸಕ ದಿವಂಗತ ನಬಿನ್ ಕಿಶೋರ್ ಪ್ರಸಾದ್ ಸಿನ್ಹಾ ಅವರ ಮಗ. ತಮ್ಮ ತಂದೆಯ ಅಕಾಲಿಕ ಮರಣದ ನಂತರ ನಿತಿನ್ ನಬಿನ್ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದರು. ಆರ್‌ಎಸ್‌ಎಸ್ ಹಿನ್ನೆಲೆಯೂ ಇರುವ ಅವರು ಕ್ರಮೇಣ ಪಕ್ಷದೊಳಗೆ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಂಡರು. ನಿತಿನ್ ನಬಿನ್ ನಿತೀಶ್‌ಕುಮಾರ್ ▶ 6ನೇ ಪುಟಕ್ಕೆ

ಬಲಾಬಲ ಪ್ರದರ್ಶನಕ್ಕೆ ಡಿಕೆಶಿ ಬಣ ನಿರ್ಧಾರ

ನಾಳೆ ಬೆಂಬಲಿತ ಶಾಸಕರ ಸಭೆ

ವರಿಷ್ಠರಿಗೆ ಡಿಕೆಶಿಗೆ ಅಧಿಕಾರ ಹಸ್ತಾಂತರ ಅನಿವಾರ್ಯ ಸಂದೇಶ ರವಾನಿಸಲು ತೀರ್ಮಾನ

ಬೆಂಗಳೂರು,ಜ.19(ಕೆಎಂಶಿ)– ಅಧಿಕಾರ ಹಸ್ತಾಂತರ ತೀರ್ಮಾನ ಕೈಗೊಳ್ಳುವಲ್ಲಿ ವರಿಷ್ಠರ ವಿಳಂಬ ಧೋರಣೆಯಿಂದ ತಾಳ್ಮೆ ಕಳೆದುಕೊಂಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿಗ ಶಾಸಕರು ಬುಧವಾರವೇ ಸಭೆ ಸೇರಿ ಬಂಡಾಯ ಬಾವುಟ ಹಾರಿಸಲಿದ್ದಾರೆ.

ಗುರುವಾರದಿಂದ ವಿಧಾನಮಂಡಲದ ಜಂಟಿ ಅಧಿವೇಶನ ಪ್ರಾರಂಭವಾಗುತ್ತಿದ್ದು, ಅದಕ್ಕೂ ಮುನ್ನಾ ದಿನವೇ ಸಭೆ ಸೇರಿ ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರಿಸುವಂತೆ ಒತ್ತಾಯಿಸಿ ವರಿಷ್ಠರಿಗೆ ಸಂದೇಶ ರವಾನಿಸಲಿದ್ದಾರೆ. ಬೆಂಬಲಿಗ ಶಾಸಕರು ಒತ್ತಾಯಕ್ಕೆ ಮಣಿದಿರುವ ಶಿವಕುಮಾರ್ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್, ಬಂಡಾಯ ಬಣಕ್ಕೆ ವೇದಿಕೆ ಸಿದ್ಧಪಡಿಸುತ್ತಿದ್ದಾರೆ.

ಆದರೆ, ಅಂದಿನ ಸಭೆಯಲ್ಲಿ ಸಹೋದರರಿಬ್ಬರ ಅನುಪಸ್ಥಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗುತ್ತಿದೆ. ಬೆಂಗಳೂರು ಮತ್ತು ದೆಹಲಿಯಲ್ಲಿ ಕಾರ್ಯಕ್ರಮ ಇರುವುದರಿಂದ ತಾವು ದಾವೋಸ್ ಪ್ರವಾಸ ರದ್ದುಗೊಳಿಸುತ್ತಿರುವುದಾಗಿ ಹೇಳಿಕೆ ನೀಡಿದ್ದ ಡಿ.ಕೆ.ಶಿವಕುಮಾರ್, ಹಠಾತ್ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆ ದಾವೋಸ್ ಪ್ರವಾಸ ಕೈಗೊಳ್ಳುತ್ತಿದ್ದಾರೆ. ತಮ್ಮ ಬೆಂಬಲಿತ ಶಾಸಕರ ಸಭೆ ಸಂದರ್ಭದಲ್ಲಿ ತಾವು ನಗರದಲ್ಲೇ ಉಳಿದರೆ ಇದರ ಹಿಂದೆ ತಾವಿದ್ದೇವೆ ಎಂಬ ಸಂದೇಶ ಹೋಗುವುದೆಂಬ ಕಾರಣಕ್ಕೆ ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ.

ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ನೇತೃತ್ವದಲ್ಲಿ ಕಾಂಗ್ರೆಸ್‌ನ ಸುಮಾರು 40ರಿಂದ 50 ಮಂದಿ ವಿಧಾನಸಭಾ ಸದಸ್ಯರು ನಗರದ ಖಾಸಗಿ ಹೋಟೆಲ್ ಒಂದರಲ್ಲಿ ಸಭೆ ಸೇರಿ ಒಂದು ಸಾಲಿನ ನಿರ್ಣಯ ಕೈಗೊಳ್ಳಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನಮಗೆ ಯಾವುದೇ ▶ 2ನೇ ಪುಟಕ್ಕೆ

ನನಗೆ 140 ಶಾಸಕರ ಬೆಂಬಲವೂ ಇದೆ

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಸಿಎಂ ಹುದ್ದೆ ಚರ್ಚೆ ಶುರುವಾಗಿದೆ. ಕಾಂಗ್ರೆಸ್ ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ. ನಮ್ಮ ನಡುವೆ ಏನು ಚರ್ಚೆಯಾಗಿದೆ ಎಂದು ನಮಗೆ ಮಾತ್ರ ಗೊತ್ತು. ಇದನ್ನೆಲ್ಲಾ ಸಾರ್ವಜನಿಕವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.



ಡಿ.ಕೆ.ಶಿವಕುಮಾರ್

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ 140 ಶಾಸಕರು ನನ್ನ ಬೆಂಬಲಕ್ಕಿದ್ದಾರೆ. ನಾನು ಹಾಗೂ ಸಿಎಂ ಅವರು ಏನು ಮಾತನಾಡಿದ್ದೇವೆ ಎಂದು ನಿಮಗೆ ಗೊತ್ತಿದೆ. ಹೈಕಮಾಂಡ್ ಸಮ್ಮುಖದಲ್ಲಿ ಏನು ಮಾತನಾಡಿದ್ದೇವೆ, ಎಲ್ಲ ಕೂತು ಏನು ತೀರ್ಮಾನ ಮಾಡಿದ್ದೇವೆ ಎಂದು ನಮಗೆ ಗೊತ್ತಿದೆ. ಈ ವಿಚಾರವನ್ನು ನಿಮ್ಮ ಮುಂದೆ ಬಹಿರಂಗವಾಗಿ ಚರ್ಚೆ ಮಾಡಲು ಸಾಧ್ಯವಿಲ್ಲ. ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದರು. ನಾವು ದೆಹಲಿಗೆ ಹೋಗುವುದೇ ರಾಜಕೀಯ, ಪಕ್ಷ ಹಾಗೂ ಸರ್ಕಾರದ ಕೆಲಸಗಳಿಗೆ. ಇದರ ಹೊರತಾಗಿ ನಾನು ಬೇರೆ ವಿಚಾರ ಚರ್ಚೆ ಮಾಡುವುದಿಲ್ಲ ಎಂದರು.

ಕಚೇರಿಯಲ್ಲೇ ಡಿಜಿಪಿ ರಾಮಚಂದ್ರರಾವ್ ರಾಸಲೀಲೆ

● ವರದಿ ನೀಡುವಂತೆ ಗೃಹ ಇಲಾಖೆಗೆ ಸಿಎಂ ಸೂಚನೆ ● ಗೃಹಸಚಿವರ ಭೇಟಿಗೆ ಸಿಗದ ಅವಕಾಶ; ಅಜ್ಞಾತ ಸ್ಥಳಕ್ಕೆ ದೌಡು

ಬೆಳಗಾವಿ: ಹಿರಿಯ ಐಪಿಎಸ್ ಅಧಿಕಾರಿ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ರಾಮಚಂದ್ರರಾವ್ ಅವರು ಕಚೇರಿಯಲ್ಲೇ ಮಹಿಳೆಯೊಂದಿಗೆ ರಾಸಲೀಲೆ ನಡೆಸಿದ್ದಾರೆ ಎನ್ನಲಾದ ವೀಡಿಯೊ ವೈರಲ್ ಆಗಿದ್ದು, ಈ ಬಗ್ಗೆ ವರದಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಇಲಾಖೆಗೆ ಸೂಚನೆ ನೀಡಿದ್ದಾರೆ.





ರಾಮಚಂದ್ರರಾವ್

ರಾಮಚಂದ್ರರಾವ್ ಅವರು ಸಮವಸ್ತ್ರದಲ್ಲಿರುವಾಗಲೇ ತಮ್ಮ ಕಚೇರಿಯ ಒಳಗಡೆಯೇ ಮಹಿಳೆಯನ್ನು ತಬ್ಬಿ ಮುದ್ದಾಡುವ ವೀಡಿಯೊ ಈಗ ವೈರಲ್ ಆಗಿದ್ದು, ▶ 6ನೇ ಪುಟಕ್ಕೆ

ಕಾಂಗ್ರೆಸ್‌ನ ವೋಟ್ ಚೋರಿ ಹೋರಾಟದ ವೇಳೆಯೇ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯಲ್ಲಿ ಇವಿಎಂ ಬದಲು ಬ್ಯಾಲೆಟ್ ಪೇಪರ್ ಬಳಕೆ ನಿರ್ಧಾರ

ವರದಿ ಪುಟ–3

ರಾಜ್ಯ ಮಾತ್ರವಲ್ಲ ದೇಶದಲ್ಲೇ ಪ್ರಪ್ರಥಮ...!

ಮೈಸೂರು ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು

ವಿದ್ಯಾರ್ಥಿನಿಯರಿಗೆ ಮಧ್ಯಾಹ್ನ ಬಿಸಿಯೂಟ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮಹದಾಸೆಗೆ ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಶನ್ ಸಹಾಯಹಸ್ತ



ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಧ್ಯಾಹ್ನದ ಬಿಸಿಯೂಟ ವಿತರಣಾ ಕಾರ್ಯಕ್ರಮಕ್ಕೆ ಇಸ್ಕಾನ್ ಸಂಸ್ಥೆಯ ಮೈಸೂರು ವಿಭಾಗದ ಅಧ್ಯಕ್ಷರಾದ ಶ್ರೀ ಸ್ತೋಕ ಕೃಷ್ಣಸ್ವಾಮಿ, ಶಾಸಕ ಜಿ.ಟಿ.ದೇವೇಗೌಡ ಸೋಮವಾರ ಚಾಲನೆ ನೀಡಿದರು.

ಮೈಸೂರು, ಜ.19(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರ ನೇತೃತ್ವದಲ್ಲಿ ಇಸ್ಕಾನ್ ಸಂಸ್ಥೆಯ ಅಕ್ಷಯಪಾತ್ರ ಫೌಂಡೇಶನ್ ಸಹಯೋಗದೊಂದಿಗೆ ಕಾಲೇಜು ವಿದ್ಯಾರ್ಥಿಗಳಿಗೂ 'ಮಧ್ಯಾಹ್ನದ ಬಿಸಿಯೂಟ ವಿತರಣೆ' ಮಾಡುವ ಮಾದರಿ ಕಾರ್ಯಕ್ರಮಕ್ಕೆ ಸೋಮವಾರ ವಿದ್ಯುಕ್ತವಾಗಿ ಚಾಲನೆ ದೊರೆಯಿತು.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಬಿಸಿಯೂಟ ವಿತರಿಸುವ ಮೂಲಕ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಕಾಲೇಜು ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ▶ 6ನೇ ಪುಟಕ್ಕೆ

ರಾಜ್ಯಾದ್ಯಂತ ವಿಸ್ತರಣೆಗೆ ಆಗ್ರಹ...!

ಮೈಸೂರಿಂದ ಆರಂಭವಾದ ಜನಪ್ರಿಯ ಕಾರ್ಯಕ್ರಮಗಳು ರಾಜ್ಯದೆಲ್ಲೆಡೆ ವಿಸ್ತರಣೆಯಾಗಿವೆ. ಅದೇ ರೀತಿ ನಾನು ಸಚಿವನಾಗಿದ್ದಾಗ 1.25 ಲಕ್ಷ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮವನ್ನು ಮೈಸೂರಿನಿಂದಲೇ ಆರಂಭಿಸಿದ್ದು, ನಂತರ ಅದೇ ಕಾರ್ಯಕ್ರಮ ರಾಜ್ಯಕ್ಕೆ ವಿಸ್ತರಣೆಯಾಯಿತು. ಕೊರೊನಾ ಸಂದರ್ಭದಲ್ಲಿ ವರ್ಕ್ ಫ್ರಂ ಹೋಂಗೆ ಇಂತಹ ಲ್ಯಾಪ್‌ಟಾಪ್‌ಗಳು ಅನುಕೂಲವಾಯಿತು. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯರ ಆಳ್ವಿಕೆಯ ಕಾಲದಲ್ಲಿ ಯಾವುದೇ ಕಾರ್ಯಕ್ರಮ ಆರಂಭವಾದರೂ ಆ ಕಾರ್ಯಕ್ರಮಗಳು ಜಗತ್ತಿಗೆ ಮಾದರಿಯಾಗುತಿದ್ದವು. ಹಾಗೆಯೇ ಈಗ ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ ದೇಶದಲ್ಲೆ ಪ್ರಪ್ರಥಮವಾಗಿ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಣೆ ಮಾಡಬೇಕು ಎಂದು ಸರ್ಕಾರಕ್ಕೆ ಆಗ್ರಹಪಡಿಸಲಾಗುವುದು.

–ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ

ಜೆಡಿಎಸ್‌ನಲ್ಲಿದ್ದೇನೆ; ಮುಂದೆ ಜೆಡಿಎಸ್‌ನಿಂದಲೇ ಸ್ಪರ್ಧಿಸ್ತೇನೆ!

ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟನೆ

ಮೈಸೂರು, ಜ.19(ಎಂಕೆ)– ನಾನು ಜೆಡಿಎಸ್‌ನಲ್ಲೇ ಇದ್ದೇನೆ. ಜೆಡಿಎಸ್‌ನಿಂದ ಒಂದು ಹೆಜ್ಜೆಯನ್ನೂ ಆಚೆಗೆ ಇಟ್ಟಿಲ್ಲ. ಮುಂದೆಯೂ ಜೆಡಿಎಸ್‌ನಿಂದಲೇ ಚುನಾವಣೆಗೆ ನಿಲ್ಲುತ್ತೇನೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದರು.

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವ ಮಾತುಗಳು ಹರಿದಾಡುತ್ತಿರುವ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನೀಗ ಜೆಡಿಎಸ್ ಶಾಸಕನಾಗಿದ್ದು, ಮುಂದಿನ ಚುನಾವಣೆಯಲ್ಲೂ ಜೆಡಿಎಸ್ ಅಭ್ಯರ್ಥಿಯಾಗಿಯೇ ಸ್ಪರ್ಧಿಸುತ್ತೇನೆ ಎಂದರು.

ಹೆಚ್.ಡಿ.ದೇವೇಗೌಡರ ಆಶೀರ್ವಾದದಿಂದ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಬೇಕು ಎಂಬ ಕನಸು ಕಂಡು ಅವರ ಜೊತೆಯಲ್ಲಿ ಸಾಗಿ ಬಂದಿದ್ದೇನೆ. ಕುಮಾರಸ್ವಾಮಿ ಅವರನ್ನ ದಲಿತರ ಮನೆಯಲ್ಲಿ ವಾಸ್ತವ್ಯ ಹೂಡಿಸಿದ್ದು ನಾನೇ. ಹಲವು ವರ್ಷಗಳ ಕಾಲ ಜೆಡಿಎಸ್ ಪಕ್ಷದಲ್ಲಿದ್ದುಕೊಂಡು ಅನೇಕ ಜವಾಬ್ದಾರಿ ನಿಭಾಯಿಸಿದ್ದೇನೆ. ಈಗಲೂ ಅವರಿಗೆ ಬೆಂಬಲ ಕೊಟ್ಟು ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆಯೇ ಹೊರತು ಪಕ್ಷದ ಹಿರಿಯ ನಾಯಕರ ವಿರುದ್ಧ ಮಾತನಾಡಿಲ್ಲ. ಟೀಕೆ ಮಾಡಿಲ್ಲ. ಚಾಮುಂಡೇಶ್ವರಿ ಕ್ಷೇತ್ರದ ಜನತೆ ಹಾಗೂ ಯಾವುದೇ ನಾಯಕರಿಗೆ ದ್ರೋಹ ಮಾಡೋ ಬುದ್ಧಿ ನನಗಿಲ್ಲ. ನಾನು ನಾಯಕತ್ವ ನೋಡಿ ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ಮಂಗಳವಾರ 20 ಜನವರಿ 2026

ಸಂವಹನ ಪ್ರಕಾಶನದ ಕನ್ನಡ ಅಂಕಿಗಳ ದಿನದರ್ಶಿಕೆ ಬಿಡುಗಡೆ



ಸಂವಹನ ಪ್ರಕಾಶಕರು, ಶ್ರೀ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್‌ನ ಕನ್ನಡ ಅಂಕಿಗಳ ದಿನದರ್ಶಿಕೆಯನ್ನು ಅಂಶಿ ಪ್ರಸನ್ನ ಕುಮಾರ್ ಬಿಡುಗಡೆ ಮಾಡಿದರು. ಪ್ರಕಾಶಕ ಡಿ.ಎನ್. ಲೋಕಪ್ಪ, ಚಂದ್ರಶೇಖರ್ ಈ ವೇಳೆ ಉಪಸ್ಥಿತರಿದ್ದರು.

ಮೈಸೂರು,ಜ.19–ಸಂವಹನ ಪ್ರಕಾಶಕರು, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಹೊರತಂದಿರುವ ಕನ್ನಡ ಅಂಕಿಗಳ ದಿನದರ್ಶಿಕೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು.

ಪ್ರಕಾಶಕ ಡಿ.ಎನ್.ಲೋಕಪ್ಪ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಉಪಸ್ಥಿತರಿದ್ದರು.

ದಿನದರ್ಶಿಕೆಯಲ್ಲಿ ಕನ್ನಡದಲ್ಲಿ ಗ್ರಂಥ ಸಂಪಾದನಾ ಶಾಸ್ತ್ರ ಬೆಳೆಸಿದ ಶಿ.ಶಿ. ಬಸವನಾಳ, ಕನ್ನಡ ನಾಡು– ನುಡಿಗೆ ಅಪಾರವಾದ ಸೇವೆ ಸಲ್ಲಿಸಿರುವ ಜಯದೇವಿತಾಯಿ ಲಿಗಾಡೆ, ಭಾಷಾವಾರು ಪ್ರಾಂತ್ಯ ರಚನೆಗೆ ಒತ್ತಡ ಹೇರಿದ್ದ ಸಿದ್ದಪ್ಪ ಕಂಬಳಿ, ರಾಜ್ಯದಲ್ಲಿ ಶಿಕ್ಷಣ, ಗ್ರಂಥ ಸಂಪಾದನೆ, ಶಾಸನಗಳ ಸಂಗ್ರಹ, ಮುದ್ರಣ, ಪ್ರಾಚ್ಯವಸ್ತು ಸಂಶೋಧನಾ ಕ್ಷೇತ್ರದಲ್ಲಿ ಅದ್ಭುತ ಸೇವೆ ಸಲ್ಲಿಸಿದ್ದ ಬಿ.ಎಲ್. ರೈಸ್, ಕನ್ನಡ–ಇಂಗ್ಲಿಷ್ ನಿಘಂಟು ರಚಿಸಿದ್ದ ರೆ.ಫಕಿಟೆಲ್ ಬಗ್ಗೆ ಮಾಹಿತಿ ನೀಡಲಾಗಿದೆ.

ಪುಸ್ತಕ ಸಂಸ್ಕೃತಿಯನ್ನು ಉತ್ತೇಜಿಸುವ ಸಲುವಾಗಿ 'ಪುಸ್ತಕ ಸಂಸ್ಕೃತಿ ಭುವನದ ಭಾಗ್ಯ' ಎಂದು ಹಿರಿಯ ಸಾಹಿತಿ ಡಾ.ಸಿಪಿಕೆ ಅವರು ಬರೆದಿರುವ ಕಿರು ಮಾಹಿತಿ ಪ್ರಕಟಿಸಲಾಗಿದೆ. ಅದೇ ರೀತಿ ಪುಸ್ತಕ ಸಂಸ್ಕೃತಿ ಕುರಿತು ಟಿ.ಎಲ್.ನರಸಿಂಹಾಚಾರ್, ಜಿ.ಎಸ್.ಶಿವರುದ್ರಪ್ಪ, ಮಹಾತ್ಮ ಗಾಂಧೀಜಿ, ಡಾ.ಹಾ.ಮಾ.ನಾಯಕ, ಡಾ.ದೇಜಗೌ ಅವರ ಅನಿಸಿಕೆಗಳನ್ನು ಪ್ರಕಟಿಸಲಾಗಿದೆ.

ಆರೋಗ್ಯ ಸಚಿವರಿಗೆ ಸ್ವಾಗತ...



ಸೋಮವಾರ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ನಿಮಿತ್ತ ಮೈಸೂರಿಗೆ ಆಗಮಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸ್ವಾಗತಿಸಿದರು. ಈ ವೇಳೆ ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ.ಸೋಮಶೇಖರ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿದ್ಯಾರ್ಥಿಗಳಿಗೆ ದುಬೈನಲ್ಲಿ ಅಕೋಲೇಡ್ಸ್ ಪ್ರಶಸ್ತಿ ಪ್ರದಾನ

ಮೈಸೂರು, ಜ. 19– ಮೈಸೂರಿನ ಡಿಪಾಲ್ ಇಂಟರ್‌ನ್ಯಾಷನಲ್ ವಸತಿ ಶಾಲೆ



ವಿದ್ಯಾರ್ಥಿ ಮಾಸ್ಟರ್ ಆಸ್ಟಿನ್ ಜೆನಿಸ್ ದುಬೈನಲ್ಲಿ ನಡೆದ ಹೆಚ್‌ಎಂಯುಎನ್ ಇಂಟರ್ ನ್ಯಾಷನಲ್ ಕಾನ್ಫರೆನ್ಸ್‌ನಲ್ಲಿ ಪ್ರತಿಷ್ಠಿತ ಹೆಚ್‌ಎಂಯುಎನ್ ಎಕ್ಸ್ 2026 ಬೆಸ್ಟ್ ಸ್ಪೀಕರ್ ಪ್ರಶಸ್ತಿ ಪಡೆದುಕೊಂಡರು. ದುಬೈನಲ್ಲಿ ನಡೆದ ಯೂನಿಟಿ ಕಮಿಟಿ ಕಾರ್ಯಕ್ರಮದಲ್ಲಿ ಅಲಿಟಾ ರೋಸ್ (ಐ ಐಎಎಲ್) ಅವರು ತಮ್ಮ ಸಂಶೋಧನಾ ಮತ್ತು ರಾಜ ತಾಂತ್ರಿಕತೆಗಾಗಿ ಗುರುತಿಸಿ ಡಿಪ್ಲೋಮ್ಯಾಟಿಕ್ ಕಮೆಂಡೇಷನ್ ಪ್ರಶಸ್ತಿ ಸ್ವೀಕರಿಸಿದರು. ಅಲ್ಲದೆ, ಡಿಪಿಐ ಆರ್‌ಎಸ್‌ನ ಶ್ರೀಯಾ ಸುದರ್ಶನ್ ಇಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ ಭಾರತದ ಟಾಪರ್ ಆಗಿ ಅತ್ಯುತ್ತಮ ಪಿಯರ್‌ಸನ್ ಲರ್ನರ್ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ನೇಮಕ



ಮೈಸೂರು: ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ (ಹಿಂದುಳಿದ ವರ್ಗ ಪ್ರವರ್ಗ–1) ಜನಾಂಗಗಳ ಒಕ್ಕೂಟದ ಜಿಲ್ಲಾಧ್ಯಕ್ಷರಾಗಿ ಡಾ.ಎಸ್.ನಾಗೇಶ್ ಯಾದವ್ ಅವರನ್ನು ನೇಮಿಸಲಾಗಿದೆ.

ನಿಧನ

ಕುಪ್ಪಂಡ ಜರಿನಾ

ಮೈಸೂರು, ಜ. 19–ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಪರ್ಲ್ ಹ್ಯಾಬಿಟೇಟ್ ಬಡಾವಣೆ ನಿವಾಸಿ ಅಣ್ಣಿ ಮಾದಪ್ಪ ಅವರ ಪತ್ನಿ ಕುಪ್ಪಂಡ ಜರಿನಾ ಪಾರ್ವತಿ (ಅಮ್ಮತ್ತಿ ಕುಟ್ಟಂಡ) ಸೋಮವಾರ ಬೆಳಗ್ಗೆ ನಿಧನರಾದರು. ಅವರಿಗೆ 57 ವರ್ಷ ವಯಸ್ಸಾಗಿತ್ತು. ಮೂಲತಃ ಕೊಡಗು ಜಿಲ್ಲೆ ಗೋಣಿಕೊಪ್ಪ ಸಮೀಪದ ಕೈಕೇರಿ ಗ್ರಾಮದವರಾದ ಇವರು ಪತ್ನಿ, ಪುತ್ರ ಅರ್ಜುನ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ನಾಳೆ ಬೆಂಬಲಿತ ಶಾಸಕರ ಸಭೆ

ವೈಯಕ್ತಿಕ ದ್ವೇಷ ಇಲ್ಲ. ಆದರೆ, ಕರ್ನಾಟಕದಲ್ಲಿ ಸರ್ಕಾರ ರಚನೆ ಸಂದರ್ಭದಲ್ಲಿ ನಡೆದ ಒಪ್ಪಂದದಂತೆ ಸಿದ್ದರಾಮಯ್ಯ ಎರಡೂವರೆ ವರ್ಷ ಆಡಳಿತ ಪೂರ್ಣಗೊಂಡಿದೆ. ಉಳಿದ ಅವಧಿಗೆ ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕು ಎಂಬುದೇ ನಮ್ಮ ಒತ್ತಾಯ ಎಂದು ತಿಳಿಸಲಿದ್ದಾರೆ. ಕಳೆದ ನ.20ಕ್ಕೆ ಸಿದ್ದರಾಮಯ್ಯ ಅವಧಿ ಪೂರ್ಣಗೊಂಡ ನಂತರವೂ ಅಧಿಕಾರ ಹಸ್ತಾಂತರ ಮಾಡಲು ಮುಂದಾಗುತ್ತಿಲ್ಲ. ಈ ಬಗ್ಗೆ ಶಿವಕುಮಾರ್ ಅವರೇ ಎಐಸಿಸಿಯ ಎಲ್ಲಾ ಮುಖಂಡರ ಗಮನಕ್ಕೆ ತಂದರೂ ಆಗಿರುವ ಒಪ್ಪಂದ ಜಾರಿ ಮಾಡುತ್ತಿಲ್ಲ. ಸಿದ್ದರಾಮಯ್ಯ ಅವರಷ್ಟೇ ಶಿವಕುಮಾರ್ ಸಹಾ ವಿಧಾನಸಭಾ ಚುನಾವಣೆಯಲ್ಲಿ ಶ್ರಮಿಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಪ್ರತಿಫಲ ದೊರೆಯಲೇಬೇಕು. ಶಿವಕುಮಾರ್ ಅವರಿಗೆ ಸಾಕಷ್ಟು ಶಾಸಕರ ಬೆಂಬಲ ಇದೆ ಎಂಬುದನ್ನು ತೋರಿಸಲು ನಾವು ಸೇರಿದ್ದೇವೆಯೇ ಹೊರತು ಪಕ್ಷದ ವಿರುದ್ಧವಲ್ಲ. ಅಗತ್ಯಬಿದ್ದರೆ ಈ ಅಧಿವೇಶನದಲ್ಲೇ ಬಲ ಪ್ರದರ್ಶನಕ್ಕೂ ಸಿದ್ಧ ಎಂದು ಶಿವಕುಮಾರ್ ಬಣ ವರಿಷ್ಠರಿಗೆ ಪರೋಕ್ಷ ಎಚ್ಚರಿಕೆ ನೀಡಲಿದೆ. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನ ವೇಳೆ ಸಿದ್ದರಾಮಯ್ಯ ಪೂರ್ಣಾವಧಿ ಆಡಳಿತ ನಡೆಸುವುದಾಗಿ ಸಂದೇಶ ರವಾನಿಸಿದ್ದರು. ಹಠಾತ್ತಾಗಿ ಸದನದಲ್ಲಿ ಸಿದ್ದರಾಮಯ್ಯ ನೀಡಿದ ಹೇಳಿಕೆ ಶಿವಕುಮಾರ್ ಅವರಿಗೆ ಬೇಸರ ತರಿಸಿದ ಹಿನ್ನೆಲೆಯಲ್ಲಿ ಇದೀಗ, ವಿಧಾನಮಂಡಲ ಅಧಿವೇಶನದಲ್ಲೇ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ದಿಢೀರ್ ಸುರ್ಜೇವಾಲಾ ಭೇಟಿಯಾದ ಜಮೀರ್: ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬುಲಾವ್ ಹಿನ್ನೆಲೆಯಲ್ಲಿ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ದಿಢೀರ್ ಹರಿಯಾಣಗೆ ತೆರಳಿ ಸಮಾಲೋಚನೆ ನಡೆಸಿದ್ದು, ಈ ಮಾತುಕತೆ ಕುತೂಹಲ ಹೆಚ್ಚಾಗುವಂತೆ ಮಾಡಿದೆ. ಹುಬ್ಬಳ್ಳಿಯಲ್ಲಿದ್ದ ಜಮೀರ್ ಅವರು ಸುರ್ಜೇವಾಲಾ ಕರೆ ಬಂದ ಕೂಡಲೇ ಅಲ್ಲಿಂದಲೇ ಶನಿವಾರ ಸಂಜೆಯೇ ದೆಹಲಿಗೆ ತೆರಳಿದರು ಎಂದು ಹೇಳಲಾಗುತ್ತಿದೆ. ಭಾನುವಾರ ಮುಂಜಾನೆ ದೆಹಲಿಯಿಂದ ಹರಿಯಾಣಕ್ಕೆ ತೆರಳಿ ಕೈತಾಲ್‌ನಲ್ಲಿದ್ದ ಸುರ್ಜೇವಾಲಾ ಅವರೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದ್ದಾರೆನ್ನಲಾಗಿದ್ದು, ಈ ಮಾತುಕತೆ ಕುತೂಹಲವನ್ನು ಹುಟ್ಟುಹಾಕಿಸಿದೆ.

ಸುರ್ಜೇವಾಲಾ ಭೇಟಿ ನಂತರ ಜಮೀರ್ ಅಹ್ಮದ್ ಖಾನ್ ಅವರು ಮತ್ತೆ ದೆಹಲಿ ಮಾರ್ಗವಾಗಿ ಹುಬ್ಬಳ್ಳಿಗೆ ವಾಪಸ್ಸಾಗಿದ್ದಾರೆ. ಈ ನಡುವೆ ಭೇಟಿ ವೇಳೆ ಜಮೀರ್ ಅವರು, ಜನವರಿ 24ರಂದು ಹುಬ್ಬಳ್ಳಿಯಲ್ಲಿ ನಡೆಯುವ ವಸತಿ ಇಲಾಖೆಯ ಮನೆ ಹಂಚಿಕೆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆಂದು ತಿಳಿದುಬಂದಿದೆ.

ಔಷಧಿಗಳ ಪ್ಯಾಕ್ ಮೇಲೆ ಕ್ಯೂಆರ್ ಕೋಡ್ ಮುದ್ರಣ ಸಂಬಂಧ ಶೀಘ್ರವೇ ನಿರ್ಧಾರ

ದುಂಡುಮೇಜಿನ ಸಭೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ





ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಔಷಧಿ ಪ್ಯಾಕ್ ಮೇಲೆ ಕ್ಯುಆರ್ ಕೋಡ್ ಮುದ್ರಿಸುವ ಸಂಬಂಧ ಚರ್ಚೆಗೆ ಆಗಮಿಸಿದ್ದ ಜಪಾನಿನ ತಜ್ಞರ ತಂಡಕ್ಕೆ ಅಭಿನಂದಿಸಿದರು. (ಬಲಚಿತ್ರ) ಸಭೆಯಲ್ಲಿ ಪಾಲ್ಗೊಂಡಿರುವ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ದೃಷ್ಟಿಹೀನ ವಿಶೇಷ ಪ್ರತಿನಿಧಿಗಳು.

ಮೈಸೂರು,ಜ.19(ಎಂಟಿವೈ)–ಔಷಧಿಗಳ ಪ್ಯಾಕೆಟ್ ಮೇಲೆ ಕ್ಯೂಆರ್ ಕೋಡ್ ತಂತ್ರಜ್ಞಾನ ಮುದ್ರಿಸುವುದರಿಂದ ದೃಷ್ಟಿದೋಷವುಳ್ಳವರು ಸೇರಿದಂತೆ ಅನೇಕರಿಗೆ ನೆರವಾಗಲಿದೆ. ಈ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಔಷಧಿ ಕಂಪನಿಗಳೊಂದಿಗೆ ಚರ್ಚಿಸುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ಐಹೆಚ್‌ಎಆರ್ ಹಾಗೂ ಎಕ್ಸ್ ಪೋರ್ಟ್ ಜಪಾನ್ ಸಂಸ್ಥೆ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ಔಷಧಿ ಪ್ಯಾಕ್ ಮೇಲೆ ಅದರ ಮಾಹಿತಿಯುಳ್ಳ ಕ್ಯೂಆರ್ ಕೋಡ್ ಮುದ್ರಿಸುವ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಆಗುತ್ತಿರುವ ಚರ್ಚೆ ಮಹತ್ವಪೂರ್ಣದ್ದಾಗಿದೆ. ಪ್ರಸ್ತುತ ದಿನಮಾನದಲ್ಲಿ ಎಲ್ಲೆಡೆ ಕ್ಯುಆರ್ ಕೋಡ್ ತಂತ್ರಜ್ಞಾನ ಪ್ರಚಲಿತದಲ್ಲಿದೆ. ಹೋಟೆಲ್, ರೆಸ್ಟೋರೆಂಟ್, ಪ್ರವಾಸಿ ತಾಣ, ಸರ್ಕಾರಿ ಕಚೇರಿ ಸೇರಿದಂತೆ ವಿವಿಧೆಡೆ ಅಳವಡಿಸಿರುವ ಕುಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆದುಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಅದೇ ತಂತ್ರಜ್ಞಾನವನ್ನು ಔಷಧಿಗಳ ಮೇಲೂ ಅಳವಡಿಸುವುದು ಮಹತ್ವದ್ದಾಗಿದೆ ಎಂದರು.

ಈಗಾಗಲೇ ಜಪಾನ್‌ನಲ್ಲಿ ಕ್ಯೂಆರ್ ಕೋಡ್ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದ್ದು, ಅಲ್ಲಿನ ಔಷಧಿಗಳ ಪ್ಯಾಕ್ ಮೇಲೆ ಕ್ಯುಆರ್ ಕೋಡ್ ಮುದ್ರಿಸಲಾಗಿದೆ. ದೃಷ್ಟಿದೋಷವುಳ್ಳವರ ಅನುಕೂಲಕ್ಕಾಗಿ ಈ ತಂತ್ರಜ್ಞಾನ ಬಳಕೆ ಮುಂದಾಗಿರುವುದು ಉತ್ತಮ ಬೆಳವಣಿಗೆ. ಭಾರತದಲ್ಲೂ ಕ್ಯೂಆರ್ ಕೋಡ್ ಬಳಕೆಗೆ ಜಪಾನ್ ಹಾಗೂ ಜೆಎಸ್‌ಎಸ್ ಸಂಸ್ಥೆ ಸಹಯೋಗದಲ್ಲಿ ಅಧ್ಯಯನ ನಡೆದಿದೆ. ಈ ವ್ಯವಸ್ಥೆ ಜಾರಿಗೆ ಬಂದಲ್ಲಿ ಔಷಧ, ಅದರ ಬಳಕೆ, ಬೆಲೆ, ಅವಧಿ ಸೇರಿದಂತೆ ಇನ್ನಿತರ ವಿಷಯವನ್ನು ಕ್ಯುಆರ್ ಕೋಡ್‌ನಲ್ಲಿ ಸ್ಕ್ಯಾನ್ ಮಾಡಿ ಪಡೆಯಬಹುದಾಗಿದೆ. ಇದರಿಂದ ದೃಷ್ಟಿದೋಷವುಳ್ಳವರೂ ಸೇರಿದಂತೆ ಅನೇಕರಿಗೆ ನೆರವಾಗುತ್ತದೆ. ಔಷಧಿ ಸೇವನೆಗೆ ಇನ್ನೊಬ್ಬರ ಮೇಲೆ ಅವಲಂಬಿತರಾಗುವುದು ತಪ್ಪಲಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ ಎಂದು ತಿಳಿಸಿದರು.

ಕೇವಲ ಅಂಧರು ಮಾತ್ರವಲ್ಲದೆ ಭಾಷೆ ಸಮಸ್ಯೆವುಳ್ಳವರು, ಹಿರಿಯ ನಾಗರಿಕರಿಗೂ ಅನುಕೂಲ ಆಗಲಿದೆ. ಎಲ್ಲ ಮಾಹಿತಿ ಅಂಗೈಯಲ್ಲೇ ಸಿಗಲಿದೆ. ರೆಗ್ಯುಲೇಟರಿ ವ್ಯವಸ್ಥೆ ಇದನ್ನು ನಿಯಂತ್ರಿಸಲು ಸಾಧ್ಯ ಆಗಲಿದೆ. ಔಷಧಗಳ ಮೇಲೆ ಕ್ಯೂಆರ್ ಕೋಡ್ ನಮ್ಮಲ್ಲೂ ಕಡ್ಡಾಯ ಮಾಡುವ ಬಗ್ಗೆ ಪರಿಶೀಲಿಸಲಾಗುವುದು. ಫಾರ್ಮಾ ಕಂಪನಿಗಳ ಜೊತೆ ಈ ಬಗ್ಗೆ ಮಾತುಕತೆ ನಡೆಸಲಾಗುವುದು. ಇದರಿಂದ ಕಂಪನಿಗಳಿಗೆ ಯಾವುದೇ ಹೆಚ್ಚುವರಿ ವೆಚ್ಚ ಬೀಳುವುದಿಲ್ಲ. ಔಷಧ ಕಂಪನಿಗಳು ಮುಂದೆ ಬಂದಲ್ಲಿ ಅವರಿಗೆ ನೆರವು ಒದಗಿಸಲಾಗುವುದು ಎಂದು ಹೇಳಿದರು.

ಹಲವರಿಗೆ ಔಷಧಿಗಳ ಮೇಲಿನ ಮಾಹಿತಿ ಓದುವುದಕ್ಕೆ ಕಷ್ಟ, ಆದರೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಸಾಕು ಪೂರ್ಣ ಮಾಹಿತಿ ದೊರೆಯುತ್ತದೆ. ಈ ತಂತ್ರಜ್ಞಾನ ಅಳವಡಿಕೆಯಿಂದ ಹಿರಿಯ ನಾಗರಿಕರಿಗೂ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಕ್ಯೂಆರ್ ಕೋಡ್ ಬಳಕೆ ಕಡ್ಡಾಯಗೊಳಿಸಬೇಕಾದ ಅಗತ್ಯವಿದೆ. ಆರೋಗ್ಯ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಗಳೂ ಗಮನ ಹರಿಸಬೇಕು. ಈ ಸಂಬಂಧ ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಲಿದೆ. ಅಲ್ಲದೆ, ಔಷಧಿ ಕಂಪನಿಗಳೊಂದಿಗೆ ಚರ್ಚಿಸಲು ಕ್ರಮ ಕೈಗೊಳ್ಳುತ್ತದೆ ಎಂದರು.

ಸಭೆಯಲ್ಲಿ ಜೆಎಸ್‌ಎಸ್ ಎಹೆಚ್‌ಇಆರ್ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಡಾ.ಬಿ.ಮಂಜುನಾಥ್, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಜಪಾನಿನ ತಜ್ಞರಾದ ಟೊಕುಹಿರೊ ಅರಕಾವಾ, ಬ್ರಿಟನಿ ಪಾರ್ಟಿನ್, ಡೆಲಾಯಿತ್ ತೊಮಾತ್ಸು, ಹಣಕಾಸು ಸಲಹೆಗಾರ ಪ್ರತಿನಿಧಿಗಳಾದ ಜಪಟಾರೋ ಸುನಹಾರ, ಕೆಂಟಾ ಮಿಯಾಮೋಟೋ, ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು. ಇದೇ ವೇಳೆ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ವಿವಿಧೆಡೆಯಿಂದ 500ಕ್ಕೂ ಹೆಚ್ಚು ದೃಷ್ಟಿಹೀನರು ಆಗಮಿಸಿ, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ಧ್ವಜಕ್ಕೆ ಅಪಮಾನ ಮಾಡಿದ್ದ ತಮಿಳುನಾಡಿನ ಸಿಲಂಬರಸನ್ ಬಂಧನ!

ಮಂಡಿಯೂರಿ ಕೈ ಮುಗಿದು ಕ್ಷಮೆ ಕೇಳಿದ ಆರೋಪಿ!

ಚೆನ್ನೈ: ಕರ್ನಾಟಕದ ಧ್ವಜಕ್ಕೆ ಅಪಮಾನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಈರೋಡ್ ಮೂಲದ ಸಿಲಂಬರಸನ್ ಎಂಬಾತನನ್ನು ಬೆಂಗಳೂರು ಪೊಲೀಸರು ಸೋಮವಾರ ಬಂಧಿಸಿದ್ದಾರೆ.



ಈ ಹಿಂದೆ ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಪ್ರಯಾಣಿಸುತ್ತಿದ್ದ ಟಿಟಿ ವಾಹನದ ಮೇಲೆ ಕರ್ನಾಟಕ ಧ್ವಜವಿತ್ತು ಎಂಬ ಒಂದೇ ಕಾರಣಕ್ಕೆ ಆ ವಾಹನ ನಿಲ್ಲಿಸಿ ತಮಿಳುನಾಡಿನ ಈರೋಡ್ ನಿವಾಸಿ ಸಿಲಂಬರಸನ್ ಗಲಾಟೆ ಮಾಡಿದ್ದ. ಬಳಿಕ ವಾಹನದ ಮೇಲಿದ್ದ ಧ್ವಜವನ್ನು ಬಲವಂತವಾಗಿ ತೆಗೆಸಿದ್ದ. ಬಳಿಕ ಆ ಧ್ವಜವನ್ನು ಕಾಲಿನಿಂದ ತುಳಿದು ಅಪಮಾನಿಸಿದ್ದ.


ಅವನ ಕೃತ್ಯದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗಿತ್ತು. ಈತನ ಈ ಕೃತ್ಯಕ್ಕೆ ಕನ್ನಡ ಪರ ಸಂಘಟನೆಗಳಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಈ ಸಂಬಂಧ ಬೆಂಗಳೂರಿನ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡ ಪೊಲೀಸರು ಮೊಬೈಲ್ ಲೊಕೇಶನ್ ಆಧಾರದ ಮೇಲೆ ತಮಿಳುನಾಡಿನ ಈರೋಡ್‌ನಲ್ಲಿ ಈತನನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ. ತಮಿಳುನಾಡಿನ ಈರೋಡ್‌ನ ಪೊಲೀಸ್ ವರಿಷ್ಠಾಧಿಕಾರಿ ಸುಜಾತರವರ ಆದೇಶದ ಮೇರೆಗೆ ಇಂದು ಸಿಲಂಬರಸನ್ ಮತ್ತು ಅಬ್ದುಲ್ ಮಲ್ಲಿಕ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ತಿಳಿದುಬಂದಿದೆ.

ಪ್ರಸ್ತುತ ಆರೋಪಿಯನ್ನು ಬೆಂಗಳೂರಿಗೆ ಕರೆತಂದು ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ. ರಾಜ್ಯದ ಲಾಂಛನ ಅಥವಾ ಧ್ವಜಕ್ಕೆ ಅವಮಾನ ಮಾಡುವುದು ಕಾನೂನುಬಾಹಿರವಾಗಿದ್ದು, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಇಲಾಖೆ ಎಚ್ಚರಿಸಿದೆ.

ಲೇಹ್‌ನಲ್ಲಿ ಭಾರೀ ಭೂಕಂಪನ

ನವದೆಹಲಿ, ಜ.19– ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನ ಲೇಹ್‌ನಲ್ಲಿ ಸೋಮವಾರ ಬೆಳಗ್ಗೆ ಭಾರೀ ಭೂಕಂಪನ ಸಂಭವಿಸಿದ್ದು, ಇದಕ್ಕೂ ಮುನ್ನ ದೆಹಲಿಯಲ್ಲೂ ಲಘು ಭೂಕಂಪನವಾಗಿದೆ.



ಲೇಹ್‌ನಲ್ಲಿ ಬೆಳಗ್ಗೆ 11.51ಕ್ಕೆ ಭಾರೀ ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 5.7ರಷ್ಟು ತೀವ್ರತೆ ದಾಖಲಾಗಿದೆ. ಭೂಮಿಯ ಮೇಲ್ಮೈಯಿಂದ 171 ಕಿ.ಮೀ. ಆಳದಲ್ಲಿ ಭೂಕಂಪನ ಕೇಂದ್ರ ಬಿಂದು ದಾಖಲಾಗಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ತಿಳಿಸಿದೆ. ತಕ್ಷಣಕ್ಕೆ ಯಾವುದೇ ಹಾನಿ, ಸಾವು–ನೋವುಗಳ ಬಗ್ಗೆ ವರದಿಯಾಗಿಲ್ಲ. ಸ್ಥಳೀಯ ಅಧಿಕಾರಿಗಳು ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದಾರೆ. ಭೂಕಂಪನಶೀಲವಾಗಿ ಸಕ್ರಿಯವಾಗಿರುವ ಹಿಮಾಲಯನ್ ಪಟ್ಟಿಯುದ್ದಕ್ಕೂ ಇರುವ ಲೇಹ್–ಲಡಾಖ್ ಪ್ರದೇಶವು ವಿಭಿನ್ನ ತೀವ್ರತೆಯ ಭೂಕಂಪಗಳಿಗೆ ಗುರಿಯಾಗುತ್ತದೆ. ಮುನ್ನೆಚ್ಚರಿಕೆಯಾಗಿ, ತುರ್ತು ಪ್ರತಿಕ್ರಿಯೆ ತಂಡಗಳನ್ನು ನಿಯೋಜಿಸಲಾಗಿದೆ.

ಲೇಹ್‌ನಲ್ಲಿ ಕಂಪಿಸುವ ಮೊದಲು ಬೆಳಿಗ್ಗೆ 8.44ರ ವೇಳೆಗೆ ದೆಹಲಿಯಲ್ಲೂ ಲಘು ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 2.8 ರಷ್ಟು ತೀವ್ರತೆ ದಾಖಲಾಗಿದೆ. ಉತ್ತರ ದೆಹಲಿಯ ಭೂಮಿಯ 5 ಕಿ.ಮೀ. ಆಳದಲ್ಲಿ ಭೂಕಂಪನದ ಕೇಂದ್ರ ಬಿಂದು ಕಂಡು ಬಂದಿದೆ. ಕಳೆದ ಕೆಲವು ವರ್ಷಗಳಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ 4ರಷ್ಟು ತೀವ್ರತೆಯ ಹಲವಾರು ಭೂಕಂಪಗಳು ಸಂಭವಿಸಿವೆ. 2022ರಲ್ಲಿ ನೆರೆಯ ರಾಜ್ಯ ಹರಿಯಾಣದಲ್ಲೂ 4.1ರಷ್ಟು ತೀವ್ರತೆಯ ಭೂಕಂಪನ ಸಂಭವಿಸಿತ್ತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.1.2026 ಮಂಗಳವಾರ, ಮಳೆ ನಕ್ಷತ್ರ: ಉಷಾ, 11.01.2026ರಿಂದ 23.01.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ:** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನೈಟಿಸ್ ಫಿಗ್ಮಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಯುವರಾಜ ಕಾಲೇಜು :** ರೂಸಾ ಅನುದಾನದಡಿ ಎಲ್ಲಾ ವಿಭಾಗಗಳಿಂದ 50 ಸರಣಿ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸ್ಥಳ: ಯುವರಾಜ ಕಾಲೇಜು ಅಮೃತ ಮಹೋತ್ಸವ ಸಭಾಂಗಣ, ಬೆಳಗ್ಗೆ 11 ರಿಂದ.
- **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಧ್ವನಿ ಫೌಂಡೇಷನ್ :** ಬೆಳಗ್ಗೆ 11 ರಿಂದ ಕನ್ನಡ ಸಾಹಿತ್ಯ–ಪುನರಾವಲೋಕನ ಕುರಿತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎನ್. ಭಾರತಿ, ಗೌರವ ಅತಿಥಿಗಳು : ಪಿಯು ಕಾಲೇಜು ಪ್ರಿನ್ಸಿಪಾಲ್ ನಯನಕುಮಾರಿ, ಡಾ. ಕೆ.ಎಸ್. ಸುಕೃತ, ಡಾ. ವಿನೋದಾ, ಡಾ. ಶ್ವೇತಾ ಮಡಪ್ಪಾಡಿ; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಮೈಸೂರು ವಿವಿ ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಡಾ. ಕೆ.ಸಿ. ಶಿವಾರೆಡ್ಡಿ, ಸ್ಥಳ: ಕಿರುರಂಗ ಮಂದಿರ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಟೆರೇಸಿಯನ್ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ : ಟೆರೇಸಿಯನ್ ಕಾಲೇಜು ಪ್ರಿನ್ಸಿಪಾಲ್ ರೆ. ಡಾ. ಸಿಸ್ಟರ್ ರೋಹಿಣಿ, ರಕ್ಷಣಾ ಮತ್ತು ಬಾಹ್ಯಾಕಾಶ ವಿಶ್ಲೇಷಕ ಗಿರೀಶ್ ಲಿಂಗಣ್ಣ ಅವರಿಂದ ಕ್ಷಿಪಣಿಗಳ ಇತಿಹಾಸ ಮತ್ತು ಸಾಮರ್ಥ್ಯ ಕುರಿತು ಉಪನ್ಯಾಸ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11.30ಕ್ಕೆ.
- **ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಚಕೋರ, ಸಾಹಿತ್ಯ ವಿಚಾರ ವೇದಿಕೆ, ನಿರ್ದಿಗಂತ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ದೇಶಿ ಕ್ರಿಯೇಷನ್ಸ್ :** ಬೇಂದ್ರೆ ಸಾಹಿತ್ಯದ ಆಶಯಗಳು ಕುರಿತು ವಿಶೇಷ ಉಪನ್ಯಾಸ ಮಾಲಿಕೆ, ಅಧ್ಯಕ್ಷತೆ : ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೆ.ಸಿ.ಶಿವಾರೆಡ್ಡಿ ಅವರಿಂದ ಉಪನ್ಯಾಸ, ಮುಖ್ಯ ಅತಿಥಿಗಳು : ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ಉಪಸ್ಥಿತರು: ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಬಿ. ಬೆಟ್ಟಸ್ವಾಮಿ, ಪ್ರಿನ್ಸಿಪಾಲ್ ದೇವರಾಜು ಪಿ.ಚಿಕ್ಕಹಳ್ಳಿ, ಡಾ.ಎನ್.ಯೋಗೇಶ, ಡಾ.ಶಭಾನ, ಸ್ಥಳ: ಪುಸ್ತಕ ಲೋಕ, 6ನೇ ತಿರುವು, ಎಸ್‌ಬಿಎಂ ಬಡಾವಣೆ, ಸಂಜೆ 5.30ಕ್ಕೆ.
- **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ ಪೂಜ್ಯ ಸ್ವಾಮಿ ಹಂಸಾನಂದರಿಂದ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಸ್. ಸಂಗೀತಾ ಮತ್ತು ರೋಹಿಣಿ ಸುಧಾಂ, ವ್ಯಾಖ್ಯಾನ:ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40– ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು: ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ವಿಷಯ–ಪ್ರಾಚೀನ ಇತಿಹಾಸ ಮತ್ತು ಪ್ರಾಚ್ಯವಸ್ತು ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಇರುವ ಅಧ್ಯಯನ ಅವಕಾಶಗಳನ್ನು ಕುರಿತಂತೆ ವಿಭಾಗದ ಪ್ರಾಧ್ಯಪಕರಾದ ಪ್ರೊ. ಪಿ.ಕೆ. ಅಂಜನ ಮೂರ್ತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಆರ್.ಹರಿಣಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, ರಂಗಭೂಮಿ ಕಲಾವಿದೆ, ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಶಾಲೋಮ್ ಸನ್ನುತ ಅವರೊಂದಿಗೆ ಮಾತುಕತೆ.ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ ಬಿ., 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಚಂದ್ರಿಕಾ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ–ಭೀಷ್ಮಾಚಾರ್ಯ, ಪ್ರಸ್ತುತಿ–ಸಂತಶ್ರೀ ಕೇಶವದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು–ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನು ಉತ್ಪಾದನೆ ಬ್ರಾಂಡಿಂಗ್ ಹಾಗೂ ಮಾರುಕಟ್ಟೆ ಈ ಕುರಿತು ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕು, ಸಿದ್ಧಾಪುರ ಹೋಬಳಿ, ಗುಯ್ಯಾ ಗ್ರಾಮದ ಶ್ಯಾಮ್ ಅಯ್ಯಪ್ಪ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ. ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪ್ರಹ್ಲಾದ್ ವಿ. ದೇಶ್‌ಪಾಂಡೆ– ಕೊಳಲು ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಸವಿನೆನಪು, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025, ವಿದ್ವಾನ್ ಡಿ.ವಿ. ಮೋಹನ್ ಕೃಷ್ಣನ್– ಹಾಡುಗಾರಿಕೆ

ಸುತ್ತೂರು ಜಾತ್ರಾ ಮಹೋತ್ಸವ

- **ಸುತ್ತೂರು ಶ್ರೀ ಕ್ಷೇತ್ರ:** ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನದ ಸಮಾರೋಪ ಸಮಾರಂಭ, ದಿವ್ಯ ಸಮ್ಮುಖ: ಹೆಬ್ಬಾಳು ಶ್ರೀ ರುದ್ರೇಶ್ವರ ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಪಾಂಡೋ ಮಟ್ಟಿ ಶ್ರೀ ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮೀಜಿ, ಸಮಾರೋಪ ಭಾಷಣ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷತೆ: ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್, ಬಹುಮಾನ ವಿತರಣೆ: ಸಂಸದ ಡಾ.ಕೆ.ಸುಧಾಕರ್, ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಸಂಸದ ಸುನೀಲ್‌ಬೋಸ್, ಮುಖ್ಯ ಅತಿಥಿಗಳು: ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಟಿ.ಎಸ್.ಶ್ರೀವತ್ಸ, ಕೆ.ಶಿವಕುಮಾರ್, ಮಾಜಿ ಶಾಸಕ ಎ.ಪಾಪರೆಡ್ಡಿ, ಕೆಎಸ್‌ಎಂಸಿಎ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಅಭಾವಿಲೀಂ ಮಹಾಸಭಾ ರಾಜ್ಯ ಉಪಾಧ್ಯಕ್ಷ ಕೆ.ಬಿ.ಶ್ರೀನಿವಾಸ ರೆಡ್ಡಿ, ನಳಂದ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್.ಎಲ್.ಎನ್. ಸಾತಪ್ಪನ್, ಬೆಳಗ್ಗೆ 10.30ಕ್ಕೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯಲ್ಲಿ ಇವಿಎಂ ಬದಲು ಬ್ಯಾಲೆಟ್ ಪೇಪರ್ ಬಳಕೆ ನಿರ್ಧಾರ

● ಕಾಂಗ್ರೆಸ್‌ನ ವೋಟ್ ಚೋರಿ ಹೋರಾಟದ ವೇಳೆಯೇ ರಾಜ್ಯ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜಿ.ಎಸ್.ಸಂಗ್ರೇಶಿ ಘೋಷಣೆ

● ಮುಂಬರುವ ಜಿಲ್ಲಾ, ತಾಲೂಕು ಪಂಚಾಯ್ತಿ ಚುನಾವಣೆಯಲ್ಲೂ ಮತಪತ್ರ ಬಳಕೆ ತೀರ್ಮಾನ ● ಮೇ 25ರ ನಂತರ ಬಹುನಿರೀಕ್ಷಿತ ಜಿಬಿಎ ಚುನಾವಣೆ



ಬೆಂಗಳೂರು: ಚುನಾವಣೆ ಆಯೋಗದ ಕಾರ್ಯನಿರ್ವಹಣೆಯನ್ನೇ ಪ್ರಶ್ನಿಸುವಂತೆ ವೋಟ್ ಚೋರಿ ಕುರಿತು ಕಾಂಗ್ರೆಸ್ ನಿರಂತರವಾಗಿ ಆರೋಪಿಸುತ್ತಿರುವುದರ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(GBA) ಚುನಾವಣೆಗಳನ್ನು ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಮೂಲಕ ನಡೆಸಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ.

ಬಹುನಿರೀಕ್ಷಿತ ಜಿಬಿಎ ಚುನಾವಣೆಯನ್ನು ಮೇ 25ರ ನಂತರ ನಡೆಸಲಾಗುವುದು. ಈ ಬಾರಿ ಇವಿಎಂ ಬದಲಿಗೆ ಮತಪತ್ರ ಅಂದರೆ ಬ್ಯಾಲೆಟ್ ಪೇಪರ್‌ಗಳನ್ನು ಬಳಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಸೋಮವಾರ ಘೋಷಿಸಿದ್ದಾರೆ.

ಜಿಬಿಎ ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 2015ರ ಬಿಬಿಎಂಪಿ ಚುನಾವಣೆಯಲ್ಲಿ ಇವಿಎಂ ಬಳಸಲಾಗಿತ್ತು. ಆದರೆ ಈ ಬಾರಿ ಬ್ಯಾಲೆಟ್ ಬಳಸಲು ನಿರ್ಧರಿಸಲಾಗಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಬ್ಯಾಲೆಟ್ ಪೇಪರ್‌ಗಳನ್ನು ಬಳಸಬಾರದು ಎಂದು ಸುಪ್ರೀಂಕೋರ್ಟ್ ಎಲ್ಲಿಯೂ ಹೇಳಿಲ್ಲ. ಚುನಾವಣಾ ಆಯೋಗವು ಒಂದು ಸ್ವತಂತ್ರ ಸಂಸ್ಥೆಯಾಗಿದ್ದು, ಈ ಸಂಬಂಧ ನಿರ್ಧಾರ ಕೈಗೊಳ್ಳುವ ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು.

ಈ ಹಿಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬ್ಯಾಲೆಟ್ ಪೇಪರ್ ಬಳಸಲು ರಾಜ್ಯ ಸರ್ಕಾರ ನಿರ್ಧರಿಸಿ, ಈ ಸಂಬಂಧ ಸಂಪುಟ ತೀರ್ಮಾನವನ್ನೂ ತೆಗೆದುಕೊಳ್ಳಲಾಗಿದೆ. ಮತಪತ್ರಗಳ ಬಳಕೆಯನ್ನು ನಿಷೇಧಿಸಲಾಗಿಲ್ಲ. ಅಮೆರಿಕಾದಂತಹ ರಾಷ್ಟ್ರಗಳಲ್ಲೂ ಈ ವ್ಯವಸ್ಥೆ ಇದೆ. ನಮ್ಮ ದೇಶದಲ್ಲಿ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗೆ ಮಾತ್ರ ಇವಿಎಂ ಕಡ್ಡಾಯವಾಗಿದೆ. ಈ ಬಗ್ಗೆ ಎಲ್ಲಾ ರೀತಿಯಲ್ಲೂ ಚರ್ಚಿಸಿ, ಸುಪ್ರೀಂ ಕೋರ್ಟ್ ಅವಲೋಕನಗಳನ್ನು ಪರಿಗಣಿಸಿಯೇ ಈ ನಿರ್ಧಾರಕ್ಕೆ ಬರಲಾಗಿದೆ. ಇದು ಖಂಡಿತ ಸಮಯ ವ್ಯರ್ಥ ಮಾಡುವ ಪ್ರಕ್ರಿಯೆಯಲ್ಲ, ನೂರಕ್ಕೆ ನೂರು ಯಶಸ್ವಿಯಾಗುತ್ತದೆ ಎಂದು ಹೇಳಿದ್ದಾರೆ.

ಮತಪತ್ರಗಳನ್ನು ಬಳಸುವ ನಿರ್ಧಾರವು ಸರ್ಕಾರದ ಒತ್ತಡದಲ್ಲಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಚುನಾವಣೆಯು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಕಾನೂನು ಬ್ಯಾಲೆಟ್ ಪೇಪರ್‌ಗಳು ಅಥವಾ ಇವಿಎಂಗಳನ್ನು ಬಳಸಿಕೊಂಡು ಚುನಾವಣೆಗಳನ್ನು ನಡೆಸಲು ಅವಕಾಶ ನೀಡಿದಂತೆ, ಆಯೋಗವು ನಿರ್ಧರಿಸುವ ವಿವೇಚನೆಯನ್ನು ಹೊಂದಿದೆ. ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳನ್ನು ಸಹ ಮತಪತ್ರಗಳನ್ನು ಬಳಸಿ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಮಾ.16ಕ್ಕೆ ಅಂತಿಮ ಪಟ್ಟಿ: ಐದು ಮಹಾನಗರ ಪಾಲಿಕೆಗಳ ವಾರ್ಡ್‌ವಾರು ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 88,91,411 ಮತದಾರರಿದ್ದಾರೆ. 2025ರ ಅಕ್ಟೋಬರ್ 1ರ ಆಧಾರದ ಮೇಲೆ ಬೆಂಗಳೂರು ಮಧ್ಯ, ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದಾದ್ಯಂತ 369 ವಾರ್ಡ್‌ಗಳಿವೆ. 45,69,193 ಪುರುಷರು, 43,20,583 ಮಹಿಳೆಯರು ಮತ್ತು 1,635 ಇತರರನ್ನು ಒಳಗೊಂಡಿದೆ. ಜನವರಿ 20 ರಿಂದ ಫೆಬ್ರವರಿ 3ರವರೆಗೆ ಬಿಎಲ್‌ಓ ಪರಿಶೀಲನೆಯಾಗಲಿದ್ದು, ಮತದಾರರ ಪಟ್ಟಿ ಕುರಿತು ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗುವುದು. ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ನಂತರ ಅಂತಿಮ ಮತದಾರರ ಪಟ್ಟಿಯನ್ನು ಮಾರ್ಚ್ 16 ರಂದು ಪ್ರಕಟಿಸಲಾಗುವುದು. ಒಟ್ಟು 369 ವಾರ್ಡ್‌ಗಳಲ್ಲಿ 8,044 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು ಎಂದು ಆಯೋಗದ ವಿಶೇಷ ಆಯುಕ್ತ ಆರ್.ರಾಮಚಂದ್ರನ್ ತಿಳಿಸಿದ್ದಾರೆ.

ದೇಶಾದ್ಯಂತ ಕಾಂಗ್ರೆಸ್ ವೋಟ್ ಚೋರಿ ಘೋಷಣೆಯೊಂದಿಗೆ ಬಿಜೆಪಿ ಹಾಗೂ ಚುನಾವಣೆ ಆಯೋಗದ ವಿರುದ್ಧ ಆರೋಪ ಮಾಡುತ್ತಿರುವ ನಡುವೆ ರಾಜ್ಯ ಚುನಾವಣೆ ಆಯೋಗದ ಮತ್ತೆ ಬ್ಯಾಲೆಟ್ ಪೇಪರ್ ಮೂಲಕ ಜಿಬಿಎ ಚುನಾವಣೆ ನಡೆಸಲು ಮುಂದಾಗಿರುವುದು ಚರ್ಚೆಗೆ ಕಾರಣವಾಗಿದೆ.

ಡ್ರಗ್ಸ್ ಹಾವಳಿ ಹತ್ತಿಕ್ಕಲು ಕಠಿಣ ಕ್ರಮ

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ನಿರ್ಧಾರ



ಮೈಸೂರು, ಜ.19(ಬಿಎಲ್‌ಯು)– ಗಾಂಜಾ ಮಾರಾಟ ಸೇರಿದಂತೆ ಇತರೆ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಮೈಸೂರು ಜಿಲ್ಲೆಯ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿ ಗೊಳಿಸಲಾಗುವುದು ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಗಾಂಜಾ ಎಲ್ಲಿಂದ ಬರುತ್ತಿದೆ, ಹೇಗೆ ಸರಬರಾಜಾಗುತ್ತಿದೆ, ಹೇಗೆ ಮಾರಾಟವಾಗುತ್ತಿದೆ, ಇದರಲ್ಲಿ ಭಾಗಿಯಾಗಿರುವವರು ಯಾರು? ಎಂಬ ಬಗ್ಗೆ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇನೆ ಎಂದರು.

ಕೆಲವು ಅಪರಾಧ ಪ್ರಕರಣಗಳನ್ನು ಇನ್ನು ಪತ್ತೆ ಹಚ್ಚಿಲ್ಲ ಎಂಬ ಮಾಹಿತಿ ಇದೆ. ಈ ಬಗ್ಗೆ ಠಾಣಾ ಅಧಿಕಾರಿಗಳಿಂದ ಮಾಹಿತಿ ಪಡೆದು ಪತ್ತೆ ಕಾರ್ಯವನ್ನು ಚುರುಕುಗೊಳಿಸಲಾಗುವುದು ಎಂದು ಹೇಳಿದರು.

ಒಂದು ಪೊಲೀಸ್ ಠಾಣೆಯಲ್ಲಿ ಇಬ್ಬರು ಕ್ರೈಂ ಸಿಬ್ಬಂದಿಗಳಿದ್ದಾರೆ. ಈಗ ಹೆಚ್ಚುವರಿಯಾಗಿ ಮೂವರು ಕ್ರೈಂ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುವುದು ಎಂದರು.

ಮೈಸೂರು ಜಿಲ್ಲೆಯ ಹಲವು ಪೊಲೀಸ್ ಠಾಣೆಯಲ್ಲಿ ಹತ್ತಾರು ವರ್ಷಗಳಿಂದ ಕೆಲವು ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಂತಹವರನ್ನು ಗುರುತಿಸಿ, ಸಾಮಾನ್ಯ ವರ್ಗಾವಣೆ ವೇಳೆ ಬೇರೆಡೆ ವರ್ಗ ಮಾಡಲಾಗುವುದು ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಅಬಕಾರಿ ಇಲಾಖೆಯಲ್ಲಿ ಲಂಚ ಪ್ರಕರಣಕ್ಕೆ ಟ್ವಿಸ್ಟ್

ಸಚಿವ ತಿಮ್ಮಾಪುರ್ ವಿರುದ್ಧವೇ ಲೋಕಾಯುಕ್ತಕ್ಕೆ ದೂರು!



ಆರ್.ಬಿ ತಿಮ್ಮಾಪುರ್

ಬೆಂಗಳೂರು: ಅಬಕಾರಿ ಡಿಸಿ ಲೋಕಾ ಬಲೆಗೆ ಬಿದ್ದ ಬೆನ್ನಲ್ಲೇ ಅಬಕಾರಿ ಸಚಿವರಿಗೆ ಸಂಕಷ್ಟ ಎದುರಾಗಿದೆ. ಲಂಚದ ಬಹುಪಾಲು ಹಣವನ್ನ ಮಿನಿಸ್ಟರ್‌ಗೆ ಕೊಡಬೇಕು ಎನ್ನುವ ಅಬಕಾರಿ ಡಿಸಿಯ ಆಡಿಯೊ ಆಧಾರದ ಮೇಲೆ ಆರ್.ಬಿ ತಿಮ್ಮಾಪುರ್ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ.

ಕಳೆದ ಶನಿವಾರ 25 ಲಕ್ಷ ಲಂಚ ಸ್ವೀಕಾರ ವೇಳೆ ಬ್ಯಾಟರಾಯನಪುರದ ಅಬಕಾರಿ ಭವನದಲ್ಲೇ ರೆಡ್ ಹ್ಯಾಂಡಾಗಿ ಅಬಕಾರಿ ಡಿಸಿ ಜಗದೀಶ್ ನಾಯಕ್, ಸೂಪರಿಂಡೆಂಡ್ ತಮ್ಮಣ್ಣ, ಕಾನ್ಸ್ಟೇಬಲ್ ಲಕ್ಕಪ್ಪ ಗಣಿ ಸಿಕ್ಕಿಬಿದ್ದಿದ್ದರು. ಲೋಕಾಯುಕ್ತ ಅಧಿಕಾರಿಗಳು ಈ ಮೂವರನ್ನು ಟ್ರ್ಯಾಪ್ ಮಾಡಿ ಜೈಲಿಗಟ್ಟಿದ್ದಾರೆ. ಇದೀಗ ಪ್ರಕರಣ ಸಂಬಂಧ ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ್‌ಗೆ ಸಂಕಷ್ಟ ಎದುರಾಗುವ ಸಾಧ್ಯತೆಯಿದೆ. ಟ್ರ್ಯಾಪ್ ಪ್ರಕರಣದ ದೂರುದಾರ ಲಕ್ಷ್ಮಿನಾರಾಯಣ್ ಲಂಚ ಪ್ರಕರಣದಲ್ಲಿ ಸಚಿವ ಆರ್.ಬಿ ತಿಮ್ಮಾಪುರ್ ಪಾತ್ರದ ಕುರಿತು ತನಿಖೆ ನಡೆಸುವಂತೆ ಆಡಿಯೋ ಸಮೇತ ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್‌ಗೆ ದೂರು ನೀಡಿದ್ದಾರೆ.

ದೂರು ಬಳಿಕ ಮಾಧ್ಯಮದ ಜೊತೆ ಮಾತನಾಡಿದ ದೂರುದಾರ. ಟ್ರ್ಯಾಪ್ ಆದಾಗ ಮೂವರು ಅರೆಸ್ಟ್ ಆಗಿದ್ದು, ಅಬಕಾರಿ ಡಿಸಿನೇ ಮಂತ್ರಿಗೆ ಎಷ್ಟು ಕೊಡಬೇಕು ಎಂದು ಪ್ರಸ್ತಾಪಿಸಿದರು. ಈ ಬಗ್ಗೆ ಆಡಿಯೋ, ದಾಖಲೆಗಳನ್ನು ಲೋಕಾಯುಕ್ತ ಎಸ್‌ಪಿಗೆ ಕೊಟ್ಟಿದ್ದೀನಿ. ಡಿಸಿನೇ ಮಂತ್ರಿಗೆ ಮೇಜರ್ ಅಮೌಂಟ್ ಕೊಡಬೇಕೆಂದು ಓಪನ್ ಆಗಿ ಮಾತಾಡಿದ್ದು, ಈ ಬಗ್ಗೆ ನನ್ನ ಬಳಿ ಎಲ್ಲಾ ದಾಖಲೆಗಳಿವೆ. ನಾನು ಸರ್ಕಾರಕ್ಕೆ ಕಟ್ಟಬೇಕಾದ ಶುಲ್ಕವನ್ನು ಕಟ್ಟಿದ್ದೀನಿ. ಆದರೂ ಲಂಚಕ್ಕೆ ಬೇಡಿಕೆ ಇಟ್ಟು ಲೈಸೆನ್ಸ್ ಕೊಟ್ಟಿರಲಿಲ್ಲ. ಟ್ರ್ಯಾಪ್ ಆಗುವ 5 ನಿಮಿಷ ಮುಂಚೆ ಮಾತಾಡಿರೋ ಆಡಿಯೋ ಸಮೇತ ದೂರು ಕೊಟ್ಟಿದ್ದು ಸಚಿವರ ಪಾತ್ರದ ಬಗ್ಗೆ ತನಿಖೆಯಾಗಬೇಕು ಅಂತಾ ದೂರುದಾರ ಲಕ್ಷ್ಮಿನಾರಾಯಣ್ ಆಗ್ರಹಿಸಿದ್ದಾರೆ.

ನನಗೂ ಪ್ರಕರಣಕ್ಕೂ ಸಂಬಂಧವೇ ಇಲ್ಲ: ಇನ್ನು ಅಬಕಾರಿ ಇಲಾಖೆ ಲಂಚ ಪ್ರಕರಣದಲ್ಲಿ ಸಚಿವರು ಭಾಗಿ ಆಗಿದ್ದಾರೆ ಎಂದು ಆರೋಪಿಸಿ ದೂರುದಾರ ಕಂಪ್ಲೆಂಟ್ ಕೊಟ್ಟಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಆರ್.ಬಿ ತಿಮ್ಮಾಪುರ್. ನನಗೂ ಈ ಪ್ರಕರಣಕ್ಕೂ ಸಂಬಂಧವೇ ಇಲ್ಲ. ಇದು ನನ್ನ ವಿರುದ್ಧದ ಕುತಂತ್ರ. ನನ್ನ ತೇಜೋವಧೆ ಮಾಡುವ ಕೆಲಸ, ನಾನು ಕಾನೂನು ಹೋರಾಟ ಮಾಡ್ತೀನಿ, ಯಾರೋ ಹೇಳಿದಾಕ್ಷಣ ನನ್ನ ಪಾತ್ರ ಇದೆ ಅಂತಾನಾ ಎಂದಿದ್ದಾರೆ.

ಇನ್ನು ಈ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ಬಿಜೆಪಿಯವರು ಸುಖಾಸುಮ್ಮನೆ ಆರೋಪ ಮಾಡ್ತಾರೆ. ಹಿಟ್ ಅಂಡ್ ರನ್ ಮಾಡ್ತಾರೆ. ಸಚಿವರು ಸಹ ಆರೋಪ ಸಾಬೀತಾದರೆ ರಾಜೀನಾಮೆ ಕೊಡ್ತೇನೆ ಅಂದಿದ್ದಾರೆ. ದಾಖಲೆಗಳು ಇದ್ದರೇ ಕೊಡಲಿ ಎಂದಿದ್ದಾರೆ. ಇನ್ನು ಸಚಿವ ಬೋಸರಾಜು ಪ್ರತಿಕ್ರಿಯಿಸಿ, ಬಿಜೆಪಿಯವರು ಬರೀ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡ್ತಾರೆ. ಅಭಿವೃದ್ಧಿ ಬಗ್ಗೆ ಮಾತಾಡಲ್ಲ. ತಿಮ್ಮಾಪುರ್ ಮೇಲೆ ಸುಮ್ಮನೆ ಆರೋಪ ಮಾಡುತ್ತಿದ್ದಾರೆ ಅಂದಿದ್ದಾರೆ. ಇನ್ನು ದೆಹಲಿಯಲ್ಲಿ ವಿಪಕ್ಷ ನಾಯಕ ಅಶೋಕ್, ಅಬಕಾರಿ ಇಲಾಖೆಯಲ್ಲಿ ಸರ್ಕಾರ ಮತ್ತು ಸಚಿವ ತಿಮ್ಮಾಪುರ್ ಲೂಟಿ ಮಾಡ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ಎಡಿಸಿ ಸಲಹೆ





ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಧ್ಯಕ್ಷತೆಯಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ಜಯಂತ್ಯೋತ್ಸವ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಬಂಜಾರ ಸಮುದಾಯದ ಮುಖಂಡರು ಹಾಗೂ ಸಮಿತಿ ಪದಾಧಿಕಾರಿಗಳಿದ್ದಾರೆ.

ಮೈಸೂರು, ಜ.19– ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಅವರ ಸಂದೇಶಗಳನ್ನು ಪಸರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಮಡಿವಾಳ ಮಾಚಿದೇವರ ಜಯಂತಿ, ಕಾಯಕ ಶರಣರ ಜಯಂತಿ ಹಾಗೂ ಶ್ರೀ ಸಂತ ಸೇವಾಲಾಲ್ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಮಡಿವಾಳ ಮಾಚಿದೇವರ ಜಯಂತಿಯನ್ನು ಫೆ.1 ರಂದು ಬೆಳಗ್ಗೆ 12 ಗಂಟೆಗೆ ಕಲಾಮಂದಿರದಲ್ಲಿ, ಕಾಯಕ ಶರಣರ ಜಯಂತಿಯನ್ನು ಫೆ.10ರಂದು ಬೆಳಗ್ಗೆ 11:30ಕ್ಕೆ ಕಿರುರಂಗಮಂದಿರದಲ್ಲಿ ಹಾಗೂ ಇದೇ ಸಭಾಂಗಣದಲ್ಲಿ ಫೆ.22ರ ಬೆಳಗ್ಗೆ11.30ಕ್ಕೆ ಶ್ರೀ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಸಭಾ ಕಾರ್ಯಕ್ರಮಕ್ಕೂ ಮುನ್ನ ವೇದಿಕೆಯಲ್ಲಿ ಗೀತಾ ಗಾಯನ ನಡೆಯಲಿದ್ದು, ಸಮುದಾಯದ ಮುಖಂಡರ ಸಲಹೆಯಂತೆ ಶ್ರೀಗಳು ಹಾಗೂ ವಿಶೇಷ ಉಪನ್ಯಾಸಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಮಹನೀಯರ ಜಯಂತಿ ಕಾರ್ಯಕ್ರಮವನ್ನು ಎಲ್ಲಾ ಸಮುದಾಯದವರು ಸೇರಿ ಆಚರಣೆ ಮಾಡಬೇಕು. ಅವರ ತತ್ವಾದರ್ಶ ಹಾಗೂ ಗುಣಗಳನ್ನು ಅರಿತು, ಜೀವನದಲ್ಲಿ ಅನುಸರಿಸುವ ಪ್ರಯತ್ನವನ್ನಾದರೂ ಮಾಡಬೇಕು. ಮಹನೀಯರ ಜೀವನ ಚರಿತ್ರೆ ಕುರಿತ ಪುಸ್ತಕಗಳನ್ನು ನೀಡಿ ಗಣ್ಯರನ್ನು ಸ್ವಾಗತಿಸಬೇಕು. ನಗರದಲ್ಲಿರುವ ಮಹನೀಯರ ಪ್ರತಿಮೆಗಳನ್ನು ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛ ಮಾಡಬೇಕು ಎಂದು ಸೂಚನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಮಾತನಾಡಿ ಜಯಂತಿಗಳ ಆಚರಣೆಗೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ, ಜನಪ್ರತಿನಿಧಿಗಳಿಗೆ ಮುಖಂಡರಿಗೆ ಆಹ್ವಾನ ನೀಡಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮುದಾಯಗಳ ಮುಖಂಡರು ಹಾಜರಿದ್ದರು.

ರಾಸಲೀಲೆ ವೀಡಿಯೊ ವೈರಲ್

ರಾಮಚಂದ್ರರಾವ್‌ಗೆ 10 ದಿನಗಳ ಕಡ್ಡಾಯ ರಜೆ



ಬೆಂಗಳೂರು: ನಟಿ ರನ್ಯಾರಾವ್ ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ಸದ್ದು ಮಾಡಿದ್ದ ಡಿಜಿಪಿ ರಾಮಚಂದ್ರರಾವ್ 10 ದಿನಗಳ ಕಡ್ಡಾಯ ರಜೆಯ ಮೇಲೆ ತೆರಳಿದ್ದಾರೆ.

ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ರಾಮಚಂದ್ರರಾವ್ ಕಚೇರಿಯಲ್ಲೇ ಮಹಿಳೆಯರ ಜೊತೆ ರಾಸಲೀಲೆಯಲ್ಲಿ ತೊಡಗಿರುವ ವೀಡಿಯೊಗಳು ವೈರಲ್ ಆಗಿವೆ. ಈ ವೀಡಿಯೊ ಜೊತೆ ಆಡಿಯೋ ಕೂಡ ವೈರಲ್ ಆಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ರಾಮಚಂದ್ರರಾವ್ ಗೊಂದಲಕಾರಿ ಹೇಳಿಕೆ ಕೊಟ್ಟಿದ್ದಾರೆ.

ನನಗೆ ಇದು ಗೊತ್ತಿಲ್ಲ, ಯಾರೋ ಎಐ ಮೂಲಕ ಷಡ್ಯಂತ್ರ ಮಾಡಿದ್ದಾರೆ. ಕಾನೂನು ಹೋರಾಟ ಮಾಡುತ್ತೇನೆ ಎಂದು ಹೇಳಿದರೆ ಮತ್ತೊಂದು ಕಡೆ 8 ವರ್ಷಗಳ ಹಿಂದಿನ ಹಳೇ ವೀಡಿಯೊ ಎಂದು ಹೇಳಿದ್ದಾರೆ. ಹೀಗಾಗಿ ಡಿಜಿಪಿ ಹೇಳಿಕೆ ಸಾಕಷ್ಟು ಅನುಮಾನಕ್ಕೆ ಎಡೆಮಾಡಿದೆ.

ವೀಡಿಯೊ ಹೊರ ಬೀಳುತ್ತಿದ್ದಂತೆ ಗೃಹ ಸಚಿವ ಪರಮೇಶ್ವರ್ ಭೇಟಿಗೆ ಯತ್ನಿಸಿದರು. ಆದರೆ ಮನೆಯಲ್ಲಿದ್ದರೂ ಪರಮೇಶ್ವರ್ ಅವರು ರಾಮಚಂದ್ರರಾವ್ ಅವರ ಭೇಟಿಗೆ ಅವಕಾಶ ನೀಡಲಿಲ್ಲ. ಹೀಗಾಗಿ ರಾಮಚಂದ್ರರಾವ್ 10 ದಿನ ಕಡ್ಡಾಯ ರಜೆ ಮೇಲೆ ತೆರಳಿದ್ದಾರೆ.

ಸಿಎಂ ಸಿದ್ದರಾಮಯ್ಯ ಶಿಸ್ತುಕ್ರಮದ ಸೂಚನೆ ನೀಡಿ ಕಾನೂನಿಗಿಂತ ಯಾರು ದೊಡ್ಡವರು ಇಲ್ಲ ಎಂದಿದ್ದಾರೆ. ಈ ಮಧ್ಯೆ ಡಿಸಿಎಂ ಡಿಕೆಶಿ ಅವರು ನನಗೆ ಗೊತ್ತಿಲ್ಲ. ಪರಮೇಶ್ವರ್ ಅವರನ್ನ ಕೇಳಿ ಎಂದು ಹೇಳಿದರು.

ಸತತ 5ನೇ ಗೆಲುವು: ಪ್ಲೇ ಆಫ್‌ಗೆ ಆರ್‌ಸಿಬಿ



ವಡೋದರಾ, ಜ.19– ರಾಯಲ್ ಚಾಲೆಂಜರ್ಸ್ ಬೆಂಗಳೂರು ಈ ಬಾರಿಯ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿದ್ದು, ಸತತ 5ನೇ ಪಂದ್ಯ ಗೆಲ್ಲುವ ಮೂಲಕ ಮೊದಲ ತಂಡವಾಗಿ ಪ್ಲೇ ಆಫ್‌ಗೆ ಲಗ್ಗೆ ಹಾಕಿದೆ.

ಕಳೆದ ಆವೃತ್ತಿಯಲ್ಲಿ ನಡೆದ ಕೊನೆ ಪಂದ್ಯದಲ್ಲಿ ಆರ್‌ಸಿಬಿ ಗೆದ್ದಿತ್ತು. ಇದೀಗ ಈ ಆವೃತ್ತಿಯಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ 61 ರನ್ ಗಳ ಗೆಲುವು ಸಾಧಿಸುವ ಮೂಲಕ ನಿರಂತರ 5 ಪಂದ್ಯಗಳನ್ನು ಜಯಿಸಿದೆ. ಆ ಮೂಲಕ ಸತತ 6 ಪಂದ್ಯಗಳನ್ನು ಗೆದ್ದು ಇತಿಹಾಸ ನಿರ್ಮಿಸಿದೆ.

ಇಲ್ಲಿನ ಕೋಟಂಬಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 178 ರನ್ ಗಳಿಸಿತು. ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಜೈಂಟ್ಸ್ 8 ವಿಕೆಟ್ ನಷ್ಟಕ್ಕೆ 117 ರನ್ ಗಳಿಸಿ ಸೋಲು ಅನುಭವಿಸಿತು.

ಗುಜರಾತ್ ಪರ ಆಶ್ಲೀ ಗಾರ್ಡ್ನರ್ 54 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಆರ್‌ಸಿಬಿ ಪರ ಸಯಾಲಿ ಸತ್ಘರೆ 3, ನಡಿನ್ ಡಿ ಕ್ಲರ್ಕ್ 2, ಲಾರೆನ್ ಬೆಲ್, ರಾಧಾ ಯಾದವ್ ಮತ್ತು ಶ್ರೇಯಾಂಕಾ ಪಾಟೀಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಪರ ಗೌತಮಿ ನಾಯಕ್ 73, ರಿಚಾ ಘೋಷ್ 27, ಸ್ಮೃತಿ ಮಂಧಾನ 26, ರಾಧಾ ಯಾದವ್ 17 ರನ್ ಗಳಿಸಿದರು. ಗುಜರಾತ್ ಪರ ಕಾಶ್ವೀ ಗೌತಮ್, ಆಶ್ಲೀ ಗಾರ್ಡ್ನರ್ ತಲಾ 2, ಸೋಫಿ ಡಿವೈನ್, ರೇಣುಕಾ ಸಿಂಗ್ ಠಾಕೂರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಆಕರ್ಷಕ ಅರ್ಧಶತಕ ಗಳಿಸಿದ ಗೌತಮಿ ನಾಯಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಗಳಿಸಿದರು.

ಖಾಸಗಿ ಆಸ್ಪತ್ರೆ ಪ್ರತಿನಿಧಿಗಳೊಂದಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಂವಾದ

ಖಾಸಗಿ ಆಸ್ಪತ್ರೆಗಳ ಕುಂದು ಕೊರತೆ ನಿವಾರಣೆ ಭರವಸೆ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಂವಾದ ನಡೆಸಿದರು.

ಮೈಸೂರು,ಜ.19(ಪಿಎಂ)– ಖಾಸಗಿ ಆಸ್ಪತ್ರೆಗಳ ಹಳೇ ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಕ್ರಮದ ಮಾನದಂಡಗಳನ್ನು ಅಳವಡಿಸಿಕೊಳ್ಳುವಲ್ಲಿ ಆಗಿರುವ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸಾಸ್ಟ್ ಅಡಿ ಖಾಸಗಿ ಆಸ್ಪತ್ರೆಗಳು ಒದಗಿಸುವ ಆರೋಗ್ಯ ಸೇವೆಗೆ ಸರ್ಕಾರದ ಪಾವತಿಯನ್ನು ಹೆಚ್‌ಬಿಪಿ 2022ರ ದರದಡಿ ಮುಂದಿನ ವರ್ಷದಿಂದ ನೀಡಲು ಪರಿಶೀಲಿಸಲಾಗುವುದೆಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೈಸೂರಿನ ನಜರ್‌ಬಾದಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಹಾನ್ (ಮೈಸೂರು ಅಸೋಸಿಯೇಷನ್ ಫಾರ್ ಹಾಸ್ಪಿಟಲ್ಸ್ ನರ್ಸಿಂಗ್ ಹೋಮ್ಸ್ ಡಯಾಗ್ನೋಸ್ಟಿಕ್ ಅಂಡ್ ಕ್ಲಿನಿಕ್) ಸದಸ್ಯರ ಮನವಿ ಹಾಗೂ ಬೇಡಿಕೆಗಳಿಗೆ ಅವರು ಪ್ರತಿಕ್ರಿಯಿಸಿದರು. ರಾಜ್ಯದ ಪ್ರಮುಖ ನಗರವಾದ ಮೈಸೂರಿನಲ್ಲಿ ಅನೇಕ ಉತ್ತಮ ಆಸ್ಪತ್ರೆಗಳು ಸೇವೆ ನೀಡುತ್ತಿವೆ. ಎಲ್ಲರಿಗೂ ಸರ್ಕಾರಿ ವ್ಯವಸ್ಥೆಯಡಿಯೇ ವೈದ್ಯಕೀಯ ಸೇವೆ ದೊರೆಯಲು ಸಾಧ್ಯವಿಲ್ಲ. ಬಹುಶಃ ಶೇ.70ರಷ್ಟು ವೈದ್ಯಕೀಯ ಸೇವೆಯು ಖಾಸಗಿ ವ್ಯವಸ್ಥೆಯಡಿ ದೊರೆಯುತ್ತಿದೆ ಎಂದು ಹೇಳಿದರು.

ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವ ಸಂಬಂಧ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಮಾನದಂಡಗಳು ಕಠಿಣವಿದ್ದ ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಸಮಸ್ಯೆಯಾಗಿತ್ತು. ಸರ್ಕಾರ ಕೆಪಿಎಂಇ ಪರವಾನಗಿ ನೀಡಲು ಅಗ್ನಿ ಸುರಕ್ಷತೆ ಕ್ರಮಗಳು ಸಮರ್ಪಕವಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಹಲವು ಖಾಸಗಿ ಆಸ್ಪತ್ರೆಗಳಿಗೆ ಸಮಸ್ಯೆಯಾಗಿತ್ತು. ಈ ಬಗ್ಗೆ ಗೃಹ ಸಚಿವರು, ಅಗ್ನಿಶಾಮಕ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಸದರಿ ಮಾನದಂಡಗಳ ಸರಳೀಕರಣಗೊಳಿಸಲಾಯಿತು. ಆ ಮೂಲಕ ತಾವೇ ಹೇಳಿದಂತೆ ಶೇ.70ರಷ್ಟು ಪರಿಹಾರ ದೊರೆತಿದೆ. ಆದರೆ ಖಾಸಗಿ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಹಳೇ ಕಟ್ಟಡಗಳ ವಿಷಯದಲ್ಲಿ ಸಮಸ್ಯೆ ಮುಂದುವರೆದಿದೆ ಎಂದು ಗಮನಕ್ಕೆ ತಂದಿದ್ದೀರಿ. ಉಳಿದಿರುವ ಶೇ.30ರಷ್ಟು ಸಮಸ್ಯೆ ಬಗೆಹರಿಸಲು ಪ್ರಸ್ತಾಪಿಸುತ್ತೇನೆ ಎಂದು ಭರವಸೆ ನೀಡಿದರು.

ಹೆಚ್‌ಪಿವಿ ಲಸಿಕೆ: ಮಹಾನ್ ಸಹಯೋಗದಲ್ಲಿ ಮೈಸೂರು ಪ್ರಸೂತಿ ಮತ್ತು ಸ್ತ್ರೀ ರೋಗ ಶಾಸ್ತ್ರ ತಜ್ಞರ ಸೊಸೈಟಿ ಹಾಗೂ ವಿವಿಧ ಎನ್‌ಜಿಓಗಳ ಸಹಕಾರದೊಂದಿಗೆ ಮೈಸೂರು ಜಿಲ್ಲೆಯಲ್ಲಿ 10ನೇ ತರಗತಿ ಬಾಲಕಿಯರಿಗೆ ಗರ್ಭಕಂಠದ ಕ್ಯಾನ್ಸರ್ ತಡೆಗಾಗಿ ಉಚಿತವಾಗಿ ಹೆಚ್‌ಪಿವಿ ಲಸಿಕೆ ನೀಡಲು ಯೋಜನೆ ರೂಪಿಸಿದ್ದು, ಇದಕ್ಕೆ ಸರ್ಕಾರದಿಂದ ಸಹಕಾರ ನೀಡಬೇಕು ಎಂದು ಕೆಸಿಓಜಿ ಕಾರ್ಯದರ್ಶಿ ಹಾಗೂ ಮಹಾನ್ ಇಸಿ ಸದಸ್ಯೆ ಡಾ.ಸೋನಿಯಾ ಮಂದಪ್ಪ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಮೈಸೂರು ಜಿಲ್ಲೆಯಲ್ಲಿ ತಾವು ಮಾಡುತ್ತಿರುವ ಲಸಿಕೆ ಅಭಿಯಾನಕ್ಕೆ ಎಂಓಯು ಮೂಲಕ ಸಹಕರಿಸಲು ಸರ್ಕಾರ ತೀರ್ಮಾನಿಸಲಿದೆ ಎಂದು ಹೇಳಿದರು.

ದರ ಹೆಚ್ಚಳ ಪರಿಶೀಲನೆ: ಸಾಸ್ಟ್ ಅಡಿ ಸರ್ಕಾರ ನೀಡುವ ಪಾವತಿ ದರ ಹಳೆಯದು. ಹೆಚ್‌ಬಿಪಿ 2022ರ ದರವನ್ನು ಮುಂದಿನ ವರ್ಷದಿಂದ ನೀಡುವ ಸಂಬಂಧ ಪರಿಶೀಲಿಸಲಾಗುವುದು ಎಂದು ಸಚಿವರು ತಿಳಿಸಿದರು. ಇನ್ನು ಮರುಪಾವತಿ ಸಂಬಂಧ ತಿಂಗಳೊಳಗೆ ಪಾವತಿ ಮಾಡಲು ಸೂಚಿಸಲಾಗಿದೆ. ಉತ್ತಮ ಹೆಸರು ಮಾಡಿರುವ ಖಾಸಗಿ ಆಸ್ಪತ್ರೆಗಳಿಗೆ ಯಾವುದೇ ಪರಿಶೀಲನೆ ಇಲ್ಲದೇ ಮೊದಲಿಗೆ ಹಣ ಬಿಡುಗಡೆಗೆ ಸೂಚನೆ ನೀಡಿದ್ದು, ನಂತರದಲ್ಲಿ ಪರಿಶೀಲನೆ ಮಾಡಲು ಹೇಳಲಾಗಿದೆ ಎಂದರು.

ಇದಕ್ಕೂ ಮುನ್ನ ಆರೋಗ್ಯ ಸಚಿವರನ್ನು ಉದ್ದೇಶಿಸಿ ಮಾತನಾಡಿದ ಮಹಾನ್ ಅಧ್ಯಕ್ಷ ಡಾ.ಜಿ.ಆರ್. ಚಂದ್ರಶೇಖರ್, ಅಗ್ನಿ ಸುರಕ್ಷತಾ ಕ್ರಮಗಳ ಸಂಬಂಧ ಸಮಸ್ಯೆ ಸಂಪೂರ್ಣ ಪರಿಹಾರ ಆಗಿಲ್ಲ. ಸಣ್ಣ ಆಸ್ಪತ್ರೆ ಕಟ್ಟಡಗಳ ಸಂಬಂಧ 15ಕ್ಕೂ ಹೆಚ್ಚು ಲಕ್ಷ ವೆಚ್ಚ ಮಾಡಿ ಕನಿಷ್ಠ ಮಟ್ಟದ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಕಷ್ಟಸಾಧ್ಯವಾಗಿದೆ. ಉದ್ಯೋಗ ಸೃಷ್ಟಿಸುವ ಇತರೆ ಉದ್ಯಮಗಳಿಗೆ ಸರ್ಕಾರದಿಂದ ಗೌರವ ಮನ್ನಣೆ ದೊರೆಯುತ್ತಿದ್ದು, ಅಂತೆಯೇ ಖಾಸಗಿ ಆಸ್ಪತ್ರೆಗಳನ್ನು ಪರಿಗಣಿಸಬೇಕು ಎಂದು ಕೋರಿದರು. ಈ ವೇಳೆ ಡಿಹೆಚ್‌ಓ ಡಾ.ಪಿ.ಸಿ. ಕುಮಾರಸ್ವಾಮಿ, ಮಹಾನ್ ನಿಕಟಪೂರ್ವ ಅಧ್ಯಕ್ಷ ಡಾ.ಜಾವೀದ್ ನಯೀಮ್, ಉಪಾಧ್ಯಕ್ಷ ಡಾ.ಬಿ.ಎನ್.ರಾಜೀವ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮತ್ತಿತರರು ಹಾಜರಿದ್ದರು.

ಕೇಂದ್ರದಿಂದ ದುಡಿಯುವ, ಬದುಕುವ ಹಕ್ಕಿಗೆ ಚ್ಯುತಿ

● ಮೈಸೂರು ಉಸ್ತುವಾರಿ ಸಚಿವ ಡಾ. ಮಹದೇವಪ್ಪ ಆಕ್ರೋಶ ● ಮನರೇಗಾ ಬಚಾವ್ ಸಂಗ್ರಾಮ್ ಸಿದ್ಧತಾ ಸಭೆಯಲ್ಲಿ ತೀವ್ರ ಹೋರಾಟದ ಎಚ್ಚರಿಕೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಮನರೇಗಾ ಬಚಾವ್ ಸಂಗ್ರಾಮ್–ಸಿದ್ಧತಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮಾತನಾಡಿದರು.

ಮೈಸೂರು, ಜ.19(ಎಂಕೆ)– ಮನರೇಗಾ ಯೋಜನೆಯ ಹೆಸರು ಮತ್ತು ಸ್ವರೂಪ ಬದಲಾವಣೆ ಮೂಲಕ ಕೇಂದ್ರ ಸರ್ಕಾರವು ದುಡಿಯುವ ಮತ್ತು ಬದುಕುವ ಹಕ್ಕಿಗೆ ಚ್ಯುತಿ ತರುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

> ಮನರೇಗಾ ಯೋಜನೆಯ ಸ್ವರೂಪವನ್ನೇ ನಾಶ ಮಾಡಿರುವ ಕೇಂದ್ರ ಸರ್ಕಾರಕ್ಕೆ ಹಳ್ಳಿಗಳು ಉದ್ಧಾರ ಆಗುವುದು ಬೇಕಿಲ್ಲ. ಮಹಾತ್ಮ ಗಾಂಧಿಯವರು ಹಾಗೂ ದೇಶದ ಸ್ವಾತಂತ್ರ್ಯದ ಬಗ್ಗೆ ಗೌರವವಿಲ್ಲ.
> – ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಮನರೇಗಾ ಬಚಾವ್ ಸಂಗ್ರಾಮ್–ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಬಿಜೆಪಿ ಸರ್ಕಾರ ಸಂವಿಧಾನಕ್ಕೆ ವಿರುದ್ಧವಾಗಿ ದುಡಿಯುವ ಹಕ್ಕನ್ನು ಜನರಿಂದ ಕಸಿದುಕೊಳ್ಳುವ ಪ್ರಯತ್ನ ನಡೆಸುತ್ತಿದೆ ಎಂದು ಎಚ್ಚರಿಸಿದರು.

ಮನರೇಗಾ ಯೋಜನೆ ಮೂಲಕ ದೇಶದಲ್ಲಿ ಸುಮಾರು 12 ಕೋಟಿ ಜನರು ಬದುಕು ಕಟ್ಟಿಕೊಂಡಿದ್ದಾರೆ. ಇದರಲ್ಲಿ ಶೇ.53 ರಷ್ಟು ಮಹಿಳೆಯರಿದ್ದರೆ, ಶೇ.17 ರಷ್ಟು ಪರಿಶಿಷ್ಟ ಜಾತಿ ಮತ್ತು ಶೇ.11 ರಷ್ಟು ಪರಿಶಿಷ್ಟ ಪಂಗಡಗಳಿಗೆ ಸೇರಿದವರಿದ್ದಾರೆ. ಕೇಂದ್ರ ಸರ್ಕಾರದಿಂದ ಶೇ.60 ರಷ್ಟು ಮತ್ತು ರಾಜ್ಯ ಸರ್ಕಾರದಿಂದ ಶೇ.40 ರಷ್ಟು ಅನುದಾನ ಹಂಚಿಕೆಯಾಗುವ ಮನರೇಗಾ ಯೋಜನೆಯ ಹೆಸರು ಮತ್ತು ಸ್ವರೂಪ ಬದಲಾವಣೆಗೂ ಮುನ್ನ ರಾಜ್ಯ ಸರ್ಕಾರಗಳೊಂದಿಗೆ ಕೇಂದ್ರ ಚರ್ಚಿಸಬೇಕಿತ್ತು. ಆದರೆ, ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸದೆ, ಪಂಚಾಯತ್ ರಾಜ್ ಕಾಯ್ದೆಯನ್ನು ದುರ್ಬಲಗೊಳಿಸಿ, 'ವಿಬಿ–ಜಿ ರಾಮ್ ಜಿ' ಎಂದು ಹೆಸರು ಬದಲಾವಣೆ ಖಂಡನೀಯ ಎಂದರು.

2005ರಲ್ಲಿ ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗ ಮನಮೋಹನ್ ಸಿಂಗ್ ಅವರು ನರೇಗಾ ಯೋಜನೆಯನ್ನು ಗ್ರಾಮೀಣ ಜನರಿಗೆ ಅದರಲ್ಲೂ ವಿಶೇಷವಾಗಿ ಎಸ್‌ಸಿ, ಎಸ್‌ಟಿ ಮಹಿಳೆಯರಿಗೆ, ಹಿಂದುಳಿದವರಿಗೆ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ, ಅಲ್ಪಸಂಖ್ಯಾತರಿಗೆ ಉದ್ಯೋಗದ ಖಾತ್ರಿಗೆ ಇರುವ ಕ್ರಾಂತಿಕಾರಿಯಾದಂತಹ ಕಾಯ್ದೆ ಎಂದಿದ್ದರು. ಇಂತಹ ಕಾಯ್ದೆಯನ್ನು ರದ್ದು ಮಾಡಿ, ತಮಗೆ ಬೇಕಾದಂತೆ ಆತುರಾತುರವಾಗಿ ಜಾರಿಗೆ ತಂದಿದ್ದಾರೆ ಎಂದು ಕಿಡಿಕಾರಿದರು.

ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ, ಶಾಸಕ ರವಿಶಂಕರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಕಾಂಗ್ರೆಸ್ ವಕ್ತಾರ ಎಚ್.ಎ.ವೆಂಕಟೇಶ್, ಕಾಂಗ್ರೆಸ್ ಮುಖಂಡ ಜಿ.ಎನ್. ನಂಜುಂಡಸ್ವಾಮಿ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಅತ್ತೆ : ಸೊಸೆಯನ್ನು ಎದ್ದೇಳಮ್ಮ ನೀನಿನ್ನು ಮಲಗಿದ್ಯಾ. ಸೂರ್ಯ ಬಂದಾಯ್ತು!

ಸೊಸೆ : ಅತ್ತೆಮ್ಮಾ... ನಿಮಗೆ ಸೂರ್ಯ ಬೇಗ ಏಳೋದಷ್ಟೇ ಕಾಣುತ್ತೆ. ಆತ ನನಗಿಂತ ಬೇಗ ಮಲಗೋದು ಕಾಣೋದಿಲ್ಲ ಅಲ್ವಾ!

ಮೈಸೂರು ಮಿತ್ರ

ಮಂಗಳವಾರ, ಜನವರಿ 20, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಹುಡುಕುತ್ತಾ ಹೋದ ಧರ್ಮರಾಯನಿಗೆ ಕೆಟ್ಟವರು ಸಿಗಲಿಲ್ಲ!! ಎಷ್ಟು ಹುಡುಕಿದರೂ ದುರ್ಯೋಧನನಿಗೆ ಒಳ್ಳೆಯವರ ದರ್ಶನವಾಗಲಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಓಡಿದವನಿಗೆ ಓಣಿ ಕಾಣಲಿಲ್ಲ, ಹಾಡಿದವನಿಗೆ ಹಾದಿ ಕಾಣಲಿಲ್ಲ.

ನಿಮ್ಮ ಪತ್ರಗಳು

ಲಿಂಗದೇವರಕೊಪ್ಪಲಲ್ಲಿ ಸಾರಿಗೆ ಬಸ್ ನಿಲುಗಡೆಗೆ ಮನವಿ

ಮಾನ್ಯರೆ,

ಮೈಸೂರಿನ ಲಿಂಗದೇವರಕೊಪ್ಪಲು ಅಭಿವೃದ್ಧಿ ಹೊಂದುತ್ತಿರುವ ಗ್ರಾಮವಾಗಿದೆ. ಈ ಗ್ರಾಮದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಸುತ್ತಮುತ್ತಲಿನ ಊರುಗಳಿಂದ ಕಾರ್ಮಿಕರು ಕೆಲಸಕ್ಕೆ ಬರುತ್ತಾರೆ. ಆದರೆ ದೀಪದ ಕೆಳಗೆ ಕತ್ತಲು ಎನ್ನುವಂತೆ ಮೈಸೂರಿಂದ ಮಡಿಕೇರಿ ಹಾಗೂ ಹಾಸನ ಮಾರ್ಗಗಳಿಗೆ ಸಾಕಷ್ಟು ಸಾರಿಗೆ ಬಸ್‌ಗಳು ಸಂಚರಿಸಿದರೂ ಲಿಂಗದೇವರಕೊಪ್ಪಲು ಗ್ರಾಮದಲ್ಲಿ ನಿಲುಗಡೆ ನೀಡದ ಕಾರಣ, ಕಾರ್ಮಿಕರು ಹಾಗೂ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಸಬರ್ಬನ್ ನಿಲ್ದಾಣದಿಂದ ಹೊರಡುವ ಬಸ್ಸುಗಳು ರಾಮಸ್ವಾಮಿ ವೃತ್ತ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ಪಡುವಾರಹಳ್ಳಿ, ಬಿ.ಎಂ.ಆಸ್ಪತ್ರೆ, ಹಿನಕಲ್, ಹೂಟಗಳ್ಳಿ, ಬೆಳವಾಡಿ ನಂತರ ಇಲವಾಲದಲ್ಲಿ ನಿಲುಗಡೆ ನೀಡುತ್ತವೆ. ಆದರೆ ಲಿಂಗದೇವರಕೊಪ್ಪಲಿನಲ್ಲಿ ಏಕೆ ನಿಲ್ಲಿಸುವುದಿಲ್ಲ ಎಂಬುದೇ ತಿಳಿಯುತ್ತಿಲ್ಲ. ಇದರಿಂದ ಬ್ರಹ್ಮಕುಮಾರಿ ಈಶ್ವರಿ ವಿದ್ಯಾನಿಲಯ, ಗಾರ್ಮೆಂಟ್ಸ್‌ಗಳು, ಅನತಿ ದೂರದಲ್ಲಿರುವ ನಂಜಮ್ಮ ಜವರೇಗೌಡ ಆಸ್ಪತ್ರೆ, ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್, ವಿನಾಯಕ ಗಾರ್ಡನ್ ಸಿಟಿ ಬಡಾವಣೆಯವರಿಗೆ ತುಂಬಾ ತೊಂದರೆಯಾಗಿದ್ದು, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಲಿಂಗದೇವರಕೊಪ್ಪಲು ಗ್ರಾಮದಲ್ಲಿ ಬಸ್‌ಗಳ ನಿಲುಗಡೆಗೆ ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಹಾಗೂ ಪ್ರಯಾಣಿಕರ ಪರವಾಗಿ ಕಳಕಳಿಯಿಂದ ಮನವಿ ಮಾಡುತ್ತೇನೆ.

–ಮಂಜುನಾಥ್, ಎಲೆಕ್ಟ್ರಿಷಿಯನ್ ಹಾಗೂ ಲಿಂಗದೇವರುಕೊಪ್ಪಲು ಗ್ರಾಮಸ್ಥರು

ರೋಗ ಹರಡುತ್ತಿರುವ ಚರಂಡಿ ಸ್ವಚ್ಛಗೊಳಿಸಿ



ಮಾನ್ಯರೆ,

ಮೈಸೂರಿನ ಹೆಬ್ಬಾಳಿನ ಸೂರ್ಯಬೇಕರಿ ವೃತ್ತಕ್ಕೆ ಸಮೀಪದ ಎರಡನೇ ಅಡ್ಡ ರಸ್ತೆಯಲ್ಲಿ ಕಳೆದ ಎರಡು–ಮೂರು ತಿಂಗಳಿನಿಂದ ಚರಂಡಿಯಲ್ಲಿ ಹೂಳು ತುಂಬಿಕೊಂಡು, ಗಿಡಗಂಟಿಗಳು ಬೆಳೆದಿವೆ. ಕೊಳಚೆ ನೀರು ನಿಂತಲ್ಲೇ ನಿಂತಿರುವುದರಿಂದ ಕ್ರಿಮಿ–ಕೀಟಗಳು ವಿಪರೀತವಾಗಿವೆ. ಈ ಬಗ್ಗೆ ನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಸೂಕ್ತ ಕ್ರಮ ಕೈಗೊಂಡಿಲ್ಲ. ಹಣ ನೀಡುವವರ ಮನೆಯ ಬಳಿ ಮಾತ್ರ ಮೋರಿಯನ್ನು ಶುಚಿಗೊಳಿಸಿ ಹೋಗುತ್ತಾರೆಂದು ಜನ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ರಸ್ತೆಯುದ್ದಕ್ಕೂ ಒಂದು ತಿಂಗಳಿನಿಂದ ದುರ್ವಾಸನೆ ಮೂಗಿಗೆ ಬಡಿಯುತ್ತಿದೆ. ಇಲ್ಲಿನ ನಿವಾಸಿಗಳಿಗೆ ರೋಗರುಜಿನಗಳ ಆತಂಕ ಶುರುವಾಗಿದೆ. ಪಾಲಿಕೆ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ನೌಕರರು ವೃತ್ತಿ ನಿಷ್ಠೆಯಿಂದ ಸಾರ್ವ ಜನಿಕರ ಸಮಸ್ಯೆಗೆ ಸ್ಪಂದಿಸುವಂತೆ ಆಗ್ರಹಿಸುತ್ತೇನೆ.

–ಯಶಸ್. ಆರ್., ಲೇಖಕ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಮೌಲ್ಯನಿಷ್ಠ ರಾಜಕಾರಣಿಯಾಗಿದ್ದ ಖಂಡ್ರೆ



ಮಾನ್ಯರೆ,

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಮಾಜಿ ಅಧ್ಯಕ್ಷರೂ, ಮಾಜಿ ಸಚಿವರೂ ಆಗಿದ್ದ ಹಿರಿಯ ರಾಜಕೀಯ ಮುತ್ಸದ್ದಿ, ಶತಾಯುಷಿ ಭೀಮಣ್ಣ ಖಂಡ್ರೆಯವರ ನಿಧನ ನೋವಿನ ಸಂಗತಿ.

ವೀರಪ್ಪ ಮೊಯಿಲಿಯವರ ಸಚಿವ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಸೇವೆ ಸಲ್ಲಿಸಿದ್ದ ಖಂಡ್ರೆ ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. ಇದರ ಜೊತೆಗೆ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಅಧ್ಯಕ್ಷರಾಗಿ ಕೂಡ ದೀರ್ಘಕಾಲ ಕಾರ್ಯ ನಿರ್ವಹಿಸಿದ್ದರು. ನೇರ ನಡೆ, ನೇರ ನುಡಿಗಳಿಗೆ ಹೆಸರಾಗಿದ್ದ ಶ್ರೀಯುತರು, ರಾಜ್ಯ ರಾಜಕೀಯ ಇತಿಹಾಸದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದರು. ಶತಾಯುಷಿಯಾಗುವುದು ತುಂಬಾ ವಿರಳ. ಅದರೆ ನಮ್ಮ ಖಂಡ್ರೆಯವರು 102 ವರ್ಷಗಳ ಸುಧೀರ್ಘ ಮತ್ತು ಸಾರ್ಥಕ ಬದುಕನ್ನು ಸವೆಸಿ ವೀರಶೈವ ಲಿಂಗಾಯಿತ ಸಮಾಜಕ್ಕೆ ಮಾರ್ಗದರ್ಶಿಯಾಗಿದ್ದರು. ಅಷ್ಟೇ ಅಲ್ಲದೇ ಅವರೋರ್ವ ಪ್ರಾಮಾಣಿಕ ಹಾಗೂ ಧ್ಯೇಯನಿಷ್ಟ ರಾಜಕಾರಿಣಿಯಾಗಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ಕೋರೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ನಾಯಿಗಳ ಕಿವಿಗೆ ಬ್ಯಾಡ್ಜ್ ಹಾಕಿ

ಮಾನ್ಯರೆ,

ದೇಶದ ಎಲ್ಲಾ ರಾಜ್ಯಗಳಲ್ಲೂ ನಾಯಿಗಳು ಮಕ್ಕಳು, ಹಾಗೂ ದೊಡ್ಡವರಿಗೆ ಕಚ್ಚಿ ದಾಳಿ ಮಾಡಿದ ಪ್ರಕರಣಗಳು ನಿತ್ಯವೂ ವರದಿಯಾಗುತ್ತಿವೆ. ನಾಯಿಗಳ ಹಾವಳಿ ಯನ್ನು ನಿಯಂತ್ರಿಸಲು ಸುಪ್ರೀಂ ಕೋರ್ಟ್ ಇತ್ತೀಚೆಗೆ ರಾಜ್ಯಗಳಿಗೆ ಕೆಲವು ನಿರ್ದೇಶನಗಳನ್ನು ನೀಡಿದ್ದು, ನಾಯಿಗಳಿಗೆ ಆಶ್ರಯ ಕೇಂದ್ರ ತೆರೆಯಬೇಕು. ಶಾಲೆಗಳ ಬಳಿ ಬೀದಿ ನಾಯಿ ನಿಯಂತ್ರಿಸಬೇಕು, ಅವುಗಳಿಗೆ ಎಲ್ಲೆಂದರಲ್ಲಿ ಸಾರ್ವಜನಿಕ ಪ್ರದೇಶದಲ್ಲಿ ಆಹಾರ ಹಾಕುವುದನ್ನು ನಿಯಂತ್ರಿಸಬೇಕು. ಅವುಗಳಿಗೆ ಲಸಿಕೆ ಹಾಕುವ ಹಾಗೂ ಸಂತಾನ ನಿಯಂತ್ರಣ ಚಿಕಿತ್ಸೆ ನೀಡುವ ಮೂಲಕ ನಿಯಂತ್ರಣ ಕ್ರಮ ವಹಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಗರ ಪಾಲಿಕೆಯವರು ಈ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಆದರೆ ಇದಕ್ಕಾಗಿ ಸರ್ಕಾರದಿಂದ ಬರುವ ಕೋಟಿ ಕೋಟಿ ಹಣ ಮಾತ್ರ ಖರ್ಚಾಗಿರುತ್ತದೆ. ಆದ್ದರಿಂದ ನಾಯಿಗಳಿಗೆ, ರೇಬಿಸ್ ಲಸಿಕೆ ಹಾಗೂ ಸಂತಾನ ಹರಣ ಚಿಕಿತ್ಸೆ ಮಾಡಿರುವ ಬಗ್ಗೆ ಅವುಗಳ ಕಿವಿಗೆ ಬ್ಯಾಡ್ಜ್ (ಮಾಹಿತಿ ವಾಲೆ) ಅಳವಡಿಸಬೇಕು. ಆಗ ಜನರಿಗೂ ಇದು ತಿಳಿಯುತ್ತದೆ. ಅಲ್ಲದೆ ಪಾಲಿಕೆಯವರು ಇದರಿಂದ ವಂಚನೆ ಮಾಡುವುದೂ ತಪ್ಪುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಬದುಕಲು ಕಲಿಯಬೇಕು; ಕಲಿಯಲು ಬದುಕಬೇಕು

ನನಗೆ ಇದು ಗೊತ್ತಿರಲಿಲ್ಲ, ನೋಡಿ ಅದಕ್ಕೆ ದೊಡ್ಡವರು ಹೇಳುವುದು ಜೀವನ ಇರುವವರೆಗೂ ಕಲಿಯುವುದು ಇದ್ದೇ ಇರುತ್ತದೆ ಅಂತ..... ! ಆತ್ಮೀಯ ಸಹೋದ್ಯೋಗಿಯೊಬ್ಬರು ಹೇಳಿದ ಈ ಮಾತು ಆ ಕ್ಷಣಕ್ಕೆ ಯಾವ ಪರಿಣಾಮವನ್ನುಂಟು ಮಾಡದಿದ್ದರೂ ಬಿಡುವಾಗಿ ಕುಳಿತ್ತಿದ್ದಾಗ ಮತ್ತೆ ಮತ್ತೆ ಆಲೋಚನೆ ಮಾಡುವಂತೆ ಮಾಡಿದ್ದಂತೂ ಸತ್ಯ.

ಬದುಕು ಎಂದರೆ ಕೇವಲ ಉಸಿರಾಟವಲ್ಲ; ಪ್ರತಿಕ್ಷಣವೂ ಅನುಭವಗಳಿಂದ ಪಾಠ ಕಲಿಯುವ ನಿರಂತರ ಪ್ರಕ್ರಿಯೆ. ಬದುಕಿನ ಹಾದಿಯಲ್ಲಿ ಎದುರಾಗುವ ಸವಾಲುಗಳು, ಸೋಲು–ಗೆಲುವುಗಳು, ಸಂತೋಷ–ದುಃಖಗಳು ಇವುಗಳು ನಮ್ಮನ್ನು ಬದುಕಲು ಕಲಿಸುವ ಒಂದೇ ನಾಣ್ಯದ ಎರಡು ಮುಖಗಳು, ಒಂದೇ ಮುಖದ ಎರಡು ಕಣ್ಣುಗಳು, ಬದುಕನ್ನು ಬೋಧಿಸುವ ಗುರುಗಳು. ಅದೇ ಸಮಯದಲ್ಲಿ ಕಲಿಕೆ ಎಂದರೆ ಪಾಠಶಾಲೆಯ ಗೋಡೆಯೊಳಗೆ ಸೀಮಿತವಾದ ಜ್ಞಾನವಲ್ಲ; ಬದುಕಿನ ಪ್ರತಿದಿನದ ಅನುಭವಗಳಲ್ಲಿ ಅರಿವು ಗಳಿಸುವ ಜೀವಂತ ಪ್ರಯಾಣ. ಕಲಿಯದೆ ಬದುಕು ಅಂಧಕಾರದ ದಾರಿಯಂತೆ ಆಗುತ್ತದೆ; ಬದುಕದೆ ಕಲಿಕೆ ಜೀವವಿಲ್ಲದ ಪುಸ್ತಕದ ಜ್ಞಾನವಾಗಿ ಉಳಿಯುತ್ತದೆ. ಆದ್ದರಿಂದ ಬದುಕು ಮತ್ತು ಕಲಿಕೆ ಪರಸ್ಪರ ಅವಿಭಾಜ್ಯ: ಒಂದಿಲ್ಲದೆ ಇನ್ನೊಂದು ಸಂಪೂರ್ಣವಾಗದು. ಈ ತತ್ತ್ವವನ್ನುಅರ್ಥಮಾಡಿಕೊಂಡಾಗಲೇ ಜೀವನ ಸಾರ್ಥಕತೆಯ ದಾರಿಯಲ್ಲಿ ಸಾಗಲು ಸಾಧ್ಯ.


ಕಲಿಕೆಗೆ ಕೊನೆ ಎಂಬುದುಂಟೇ ಎಂಬ ಪ್ರಶ್ನೆ ಎದುರಾದರೆ ಖಂಡಿತ ಇಲ್ಲ–ಹುಟ್ಟಿನಿಂದ ಸಾಯುವವರೆಗೆ ಒಂದಲ್ಲ ಒಂದು ವಿಷಯವನ್ನು ಕಲಿಯುತ್ತಲಿ ಸಾಗುತ್ತಿರುತ್ತೇವೆ. ಯಾರೊಬ್ಬರೂ ಕೂಡ ಎಲ್ಲಾ ಕ್ಷೇತ್ರದಲ್ಲಿಯೂ ಪರಿಣತಿ ಪಡೆದಿರಲು ಸಾಧ್ಯವಿಲ್ಲ. ಹಾಗಾಗಿ ಪ್ರತಿಯೊಂದು ಸಂಗತಿಯನ್ನು ಅನುಭವಗಳ ಮೂಲಕ ಮತ್ತೊಬ್ಬರ ಸಹಾಯದ ಮೂಲಕ, ಬದುಕು ತಾನಾಗಿಯೇ ಕಲಿಸಿ ಕೊಟ್ಟ ಪಾಠಗಳ ಮೂಲಕ ಕಲಿಯುತ್ತಾ ಜೀವನ ಸಾಗಿಸುತ್ತಿರುತ್ತೇವೆ. ಬದುಕುವುದನ್ನು ಕಲಿಯಬೇಕು ಎನ್ನುವುದು ಎಷ್ಟು ಸತ್ಯವೋ ಕಲಿಯುವುದಕ್ಕಾಗಿ ಬದುಕಬೇಕು ಎಂಬುದು ಕೂಡ ಅಷ್ಟೇ ಸತ್ಯ.

ಜೀವನ ಅನುಭವಗಳ ಪಾಠಶಾಲೆ

ಶಾಲಾ–ಕಾಲೇಜು, ವಿಶ್ವವಿದ್ಯಾನಿಲಯಗಳು ಕಲಿಸದ ಪಾಠವನ್ನು ಬದುಕಿನ ಪಾಠ ಕಲಿಸುತ್ತದೆ. ಪರೀಕ್ಷೆಗಳನ್ನು ನೀಡಿ ಬದುಕನ್ನು ಹೇಗೆ ಸಾಗಿಸಬೇಕು ಎಂಬ ಉತ್ತರವನ್ನು ಕೂಡ ಕಲಿಸಿಕೊಡುತ್ತದೆ. ಜೀವನದುದ್ದಕ್ಕೂ ಎದುರಾಗುವ ಸಮಸ್ಯೆಗಳು, ಅದಕ್ಕೆ ಕಂಡುಕೊಳ್ಳುವ ಪರಿಹಾರಗಳು, ಎದುರಾಗುವ ಸವಾಲುಗಳಿಗೆ ದಿಟ್ಟವಾಗಿ ನಿಂತು ಎದುರಿಸುವ ಸಾಮರ್ಥ್ಯ ಎಲ್ಲವನ್ನು ಅನುಭವದಿಂದ ಕಲಿಯಬಹುದು. ಕೆಲವೊಮ್ಮೆ ತಪ್ಪುಗಳೂ ಸರಿಯಾದ ಪಾಠ ಕಲಿಸಬಲ್ಲವು. ಕೆಲವೊಮ್ಮೆ ಬೇರೆಯವರ ತಪ್ಪುಗಳಿಂದಲೂ ಪಾಠ ಕಲಿಯಬಹುದು.

ಪ್ರತಿಯೊಬ್ಬರ ಬದುಕು ವಿಭಿನ್ನ, ಒಬ್ಬೊಬ್ಬರ ಪರಿಚಯವು ಒಂದೊಂದು ಪಾಠವನ್ನು ಕಲಿಸಿ ಕೊಡುತ್ತದೆ. ನನಗೆ ಇದನ್ನು ಹೇಳುವಾಗ ಇತ್ತೀಚಿಗೆ ಅನುಭವಕ್ಕೆ ಬಂದ ಕಿರಿಯರೊಬ್ಬರ ನಡವಳಿಕೆ ಇಲ್ಲಿ ಉಲ್ಲೇಖಾರ್ಹ ಎನ್ನಿಸುತ್ತದೆ. ಆತ್ಮೀಯರು, ವಯಸ್ಸಿನಲ್ಲಿ ಕಿರಿಯರಾಗಿರುವ ಗೆಳೆಯರಿಗೆ ನಾವಿರುವ ಜಾಗದಲ್ಲಿ ಹಣ ಸಿಕ್ಕಿತು ಎಂದು ಗುಂಪಿನಲ್ಲಿ ಸಂದೇಶವನ್ನು ರವಾನಿಸಿದ್ದರು. ಯಾರು ಎಷ್ಟು ಹಣವನ್ನು ಕಳೆದುಕೊಂಡಿರಿ ಎಂಬ ಸಮಂಜಸವಾದ ಉತ್ತರವನ್ನು ಕೊಟ್ಟರೆ ಮಾತ್ರ ಹಣವನ್ನು ಹಿಂತಿರುಗಿಸುವುದಾಗಿ ತಿಳಿಸಿದರು.

ಕೊನೆಗೆ ಯಾರೂ ಕೂಡ ಹಣವನ್ನು ತಮ್ಮದು ಎಂದು ತಿಳಿಸದಿದ್ದಾಗ ಎಲ್ಲರೂ ಒಗ್ಗಟ್ಟಾಗಿ ಕಟ್ಟುವ ಲೆಕ್ಕದಲ್ಲಿ ಆ ಹಣವನ್ನು ಕಡಿತಗೊಳಿಸಿದರು. ಎಷ್ಟು ಹಣ ಸಿಕ್ಕಿರಬಹುದು? ಎಂಬ ಕುತೂಹಲಕ್ಕೆ ಕೊನೆಗೂ ಉತ್ತರ ದೊರಕಿದ್ದು ಕೇವಲ ನೂರು ರೂಪಾಯಿ. ನಾನು ಸರ್ ಬರಿ ನೂರು ರೂಪಾಯಿಗೆ ಇದೆಲ್ಲಬೇಕಾ? ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ಮೆಚ್ಚುವಂತದ್ದು. ಒಂದು ರೂಪಾಯಿ ಆಗಿರಲೀ, ಸಾವಿರ ಆಗಿರಲಿ ದುಡ್ಡು ದುಡ್ಡೇ ತಾನೇ? ಎಂದರು. ನಾನೇ ಮತ್ತೆ ಮುಂದುವರೆದು ಅಲ್ಲ ಆ ನೂರು ರೂಪಾಯಿಯನ್ನು ನೀವೇ ಸಿಕ್ಕ ಹಣ ಅಂತ ನಿಮ್ಮ ಹತ್ತಿರವೇ ಇಟ್ಟುಕೊಂಡಿದ್ದರೂ ನಮಗ್ಯಾರಿಗೂ ಅದು ತಿಳಿಯುತ್ತಿರಲಿಲ್ಲ. ಹೀಗೇಕೆ ಮಾಡಿದ್ದೀರಿ ಎಂದು ಪ್ರಶ್ನಿಸಿದೆ. ಸರ್ ನಮ್ಮದಲ್ಲದ ಹಣ ನಮಗ್ಯಾಕೆ ಸರ್? ನಮ್ಮ ಜಾಗದಲ್ಲಿ ಸಿಕ್ಕಿರುವುದರಿಂದ ಎಲ್ಲರೂ ಕಟ್ಟುವ ಹಣದಲ್ಲಿ ಆ ಹಣವನ್ನು ಕಡಿತಗೊಳಿಸಿರುವೆ ಅಂದರು. ನನಗೆ ಇಲ್ಲಿ ಅವರ ಈ ವ್ಯಕ್ತಿತ್ವ ನಿಜಕ್ಕೂ ಇಷ್ಟವಾಯಿತು. ತನ್ನದಲ್ಲದ ಹಣ ಬೇಡವೆಂಬ ಮನೋಭಾವ ಮತ್ತು ಅದು ಎಷ್ಟೇ ಆಗಿದ್ದರೂ ಅದಕ್ಕೂ ಒಂದು ಮೌಲ್ಯ ಇದೆ ಎಂಬ ಆಲೋಚನೆ ಇವೆರಡೂ ಮನಸ್ಸನ್ನು ತಾಗಿತು.



> ಉದಯವಾಗುವ ಸೂರ್ಯನ ಬೆಳಕಿನ ಕಿರಣಗಳಂತೆ, ಕಲಿಕೆ ಹೊಸ ಪಾಠದಂತೆ ಆರಂಭವಾಗಬೇಕು. ಪ್ರತಿ ಸಂಜೆ ಆತ್ಮ ಪರಿಶೀಲನೆಯೊಂದಿಗೆ ಮುಗಿಯಬೇಕು. ಸೋಲು ನಮ್ಮನ್ನು ಕುಗ್ಗಿಸಲು ಅಲ್ಲ, ಕಲಿಸಲು ಬರುತ್ತದೆ; ನೋವು ನಮ್ಮನ್ನು ಮುರಿಯಲು ಅಲ್ಲ, ಬಲಪಡಿಸಲು ಬರುತ್ತದೆ. ಬದುಕಿನ ಪ್ರತಿಯೊಂದು ಕ್ಷಣವೂ ಗುರುವಾಗುವಾಗ, ಜೀವನವೇ ಮಹಾವಿದ್ಯಾಲಯವಾಗುತ್ತದೆ.

ಹೀಗೆ ಜೀವನದಲ್ಲಿ ಸಿಗುವ ಪ್ರತಿಯೊಬ್ಬರಿಂದಲೂ ಒಂದೊಂದು ಅನುಭವವನ್ನು ಕಲಿಯಬಹುದು. ಒಳ್ಳೆಯದನ್ನು ಸ್ವೀಕರಿಸುವ ಮನೋಭಾವವನ್ನು ರೂಢಿಸಿಕೊಂಡು ಅದನ್ನು ನಮ್ಮ ಬದುಕಿನಲ್ಲಿಯೂ ಅಳವಡಿಸಿಕೊಳ್ಳಬಹುದು.

ಕಲಿಕೆಗೆ ಕೊನೆ ಎಂಬುದಿಲ್ಲ

ನಾವು ಮಾಡುವ ವಿದ್ಯಾಭ್ಯಾಸಕ್ಕೆ ನಿರ್ದಿಷ್ಟವಾದ ಅವಧಿ ಇರುತ್ತದೆ. ಎರಡು ವರ್ಷ, ಮೂರು ವರ್ಷ, ನಾಲ್ಕು ವರ್ಷ ಇತ್ಯಾದಿ. ಜೀವನದ ಉದ್ದಕ್ಕೂ ಕಲಿಯುವ ಕಲಿಕೆಗೆ ಕೊನೆ ಎಂಬುದೇ ಇರುವುದಿಲ್ಲ. ಚಿಕ್ಕ ಮಗುವಿನಿಂದ ಹಿಡಿದು ವಯಸ್ಸಾದ ಹಿರಿಯರಿಂದಲೂ ಕಲಿಯುತ್ತಾ ಸಾಗುತ್ತೇವೆ. ಕಲಿಕೆ ಮುಗಿಯಿತು ಎಂದುಕೊಂಡಾಗ ನಿಜಕ್ಕೂ ನಾವು ಹಿಂದುಳಿಯುತ್ತೇವೆ. ಜೀವದುದ್ದಕ್ಕೂ ಮನುಷ್ಯ ಕಲಿಯುತ್ತಾ ಇರಬೇಕು.

ತಾನು ಕಲಿಯುತ್ತಾ, ಮತ್ತೊಬ್ಬರಿಗೆ ತಿಳಿಸುತ್ತಾ, ಮತ್ತೊಬ್ಬರಿಂದ ಜ್ಞಾನವನ್ನು ಕಲಿಯುತ್ತಾ ಮುಂದೆ ಸಾಗಿದಾಗ ಅನುಭವ ಪರಿಪಕ್ವವಾಗಿ ಜೀವನದ ಸಾರವನ್ನು ಗ್ರಹಿಸಲು ಸಾಧ್ಯ. ನನಗೆ ಎಲ್ಲ ತಿಳಿದಿದೆ. ನನ್ನ ಬಿಟ್ಟರೆ ಬೇರೆ ಯಾರು ಇಲ್ಲ ಎಂದು ಆಲೋಚನೆ ಬಂದ ದಿನವೇ ನಮ್ಮ ಕಲಿಕೆಗೆ ತಿಲಾಂಜಲಿಯನ್ನು ಇಡಬೇಕಾಗುತ್ತದೆ. ಮರಕ್ಕಿಂತ ಮರ ದೊಡ್ಡದು ಎಂಬ ಮಾತಿನಂತೆ ವ್ಯಕ್ತಿಯಿಂದ ವ್ಯಕ್ತಿಗೆ ಪರಿಚಯ ಸ್ನೇಹವಾದಂತೆ ಒಬ್ಬೊಬ್ಬರಿಂದಲೂ ನಮಗೆ ಅನುಕೂಲವಾಗುವ, ಕೆಲವೊಮ್ಮೆ ಅನುಕೂಲವಾಗದಿದ್ದರೂ ಬದುಕಿನ ಪಾಠ ಕಲಿಯುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಕಲಿಕೆಗೆ ಕೊನೆ ಎಂಬುದಿರುವುದಿಲ್ಲ.

ಆಲೋಚನೆಯಲ್ಲಿ ವಿಭಿನ್ನತೆ

ಒಂದೇ ವಿಷಯವನ್ನು ಬೇರೆ ಬೇರೆಯವರ ದೃಷ್ಟಿಕೋನದಿಂದ ನೋಡುವುದನ್ನು ಕಲಿಯಬಹುದು. ಸಾಮಾನ್ಯವಾಗಿ ನಾವೆಲ್ಲರೂ ನಮ್ಮ ದೃಷ್ಟಿಕೋನದಿಂದ ಮಾತ್ರವೇ ಎಲ್ಲವನ್ನು ಗಮನಿಸುತ್ತೇವೆ. ಹಾಗಾಗಿ ನಮಗೆ ಸರಿ–ತಪ್ಪುಗಳ ವಿಶ್ಲೇಷಣೆ ಕೆಲವೊಮ್ಮೆ ಸಾಧ್ಯವಾಗದಿರಬಹುದು. ಮತ್ತೊಬ್ಬರ ದೃಷ್ಟಿಕೋನದಿಂದ ಆಲೋಚನೆ ಮಾಡಿದಾಗ ನಮಗೆ ಸರಿ ಅನಿಸಿದ್ದು ತಪ್ಪಾಗಿ ತಪ್ಪು ಎನಿಸಿದ್ದು ಸರಿಯಾಗಿ ಕಾಣಿಸಬಹುದು.

ಪ್ರತಿಯೊಬ್ಬರ ಆಲೋಚನೆಯಲ್ಲೂ ಭಿನ್ನತೆ ಇರುವುದರಿಂದ ಎಲ್ಲಾ ವಿಧದಿಂದಲೂ ಜೀವನವನ್ನು ಗ್ರಹಿಸುವ ದೃಷ್ಟಿಕೋನವನ್ನು ಬೆಳೆಸಿಕೊಂಡು ಮುಂದೆ ಸಾಗಬೇಕು. ನಿರ್ಜೀವ ವಸ್ತುಗಳಾದ ಫೋನ್, ಇಂಟರ್ನೆಟ್ ಇವುಗಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯುವುದರ ಬದಲು ಜೀವವಿರುವ, ಅನುಭವವಿರುವ, ಮಾನವೀಯ ಮೌಲ್ಯಗಳ ಕಲಿಸುವ ಜನರೊಂದಿಗೆ ಮಾತನಾಡುವುದರಿಂದ ಬದುಕನ್ನು ನೋಡುವ ದೃಷ್ಟಿಕೋನ ಬದಲಾಗಿ ಭಿನ್ನ ರೀತಿಯಲ್ಲಿ ಆಲೋಚಿಸುವ ಶೈಲಿಯನ್ನು ಕಲಿಯಬಹುದು.

ಕಲಿತಷ್ಟು ಬೆಳೆಯುತ್ತೇವೆ

ವಿದ್ಯಾಭ್ಯಾಸದ ಅವಧಿಯಲ್ಲಿ ಕಲಿಯುವ ವಿಚಾರಗಳು ಕೇವಲ ಪರೀಕ್ಷೆಗಳಲ್ಲಿ ತೇರ್ಗಡೆಯಾಗಲು ಮಾತ್ರ ಸಹಾಯ ಮಾಡುತ್ತವೆಯೇ ಹೊರತು ಬದುಕಿಗೆ ಅವ್ಯಾವೂ ಸಹಾಯ ಮಾಡಲಾರವು. ಜನರೊಂದಿಗೆ ಸಮಾಜದಲ್ಲಿ ಬದುಕುವುದನ್ನು ಕಲಿತಾಗ ಜೀವನ ಮೌಲ್ಯಗಳ ಪಾಠ ನಮ್ಮದಾಗುತ್ತದೆ.

ನಮ್ಮ ಯುವ ಜನಾಂಗದ ಅತೀ ದೊಡ್ಡ ಸಮಸ್ಯೆ ಏನೆಂದರೆ ಹಿರಿಯರ ಮಾತುಗಳನ್ನು ಅವರ ಅನುಭವವನ್ನು ಕಡೆಗಣಿಸುವುದು, ಅವರ ಮಾತುಗಳಿಗೆ ಕಿವಿಗೊಡದಿರುವುದು. ನಮಗೆ ಎಲ್ಲಾ ತಿಳಿದಿದೆ ಎಂಬ ಭ್ರಮೆಯಲ್ಲಿ ಮುನ್ನುಗ್ಗುತ್ತ ಸಾಗುತ್ತೇವೆ. ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಎಂಬ ಡಿವಿಜಿಯವರ ಮಾತಿನಂತೆ ಹಿರಿಯರ ಅನುಭವದೊಂದಿಗೆ ನಮ್ಮ ಬದುಕನ್ನು ನಡೆಸುತ್ತಾ ಸಾಗಿದಂತೆ ಅನೇಕ ವಿಷಯಗಳನ್ನು ಕಲಿಯುತ್ತೇವೆ. ಕಲಿತಷ್ಟು ನಮಗರಿವಿಲ್ಲದಂತೆ ವಿಚಾರಗಳನ್ನು ತಿಳಿದು ಪ್ರಬುದ್ಧವಾಗಿ ಬೆಳೆಯುತ್ತೇವೆ.

ಬದುಕು ನಮಗೆ ಪುಸ್ತಕದಂತೆ ದೊರಕುವುದಿಲ್ಲ; ಅದನ್ನು ನಾವು ಪ್ರತಿದಿನ ಬರೆಯಬೇಕು. ತಪ್ಪುಗಳು ಅಕ್ಷರಗಳಾಗುತ್ತವೆ, ಅನುಭವಗಳು ಸಾಲುಗಳಾಗುತ್ತವೆ ಮತ್ತು ಕಲಿಕೆ ಅದಕ್ಕೆ ಅರ್ಥ ನೀಡುತ್ತದೆ. ಬದುಕಲು ಕಲಿಯದವನು ಪರಿಸ್ಥಿತಿಗೆ ಸೋಲುತ್ತಾನೆ; ಕಲಿಯಲು ಬದುಕದವನು ಅವಕಾಶಗಳನ್ನು ಕಳೆದುಕೊಳ್ಳುತ್ತಾನೆ. ಆದ್ದರಿಂದ ಬದುಕು ಎಂದರೆ ಕಲಿಕೆಯ ಸಾಹಸ, ಕಲಿಕೆ ಎಂದರೆ ಬದುಕನ್ನು ಗೆಲ್ಲುವ ಶಕ್ತಿ.

ಉದಯವಾಗುವ ಸೂರ್ಯನ ಬೆಳಕಿನ ಕಿರಣಗಳಂತೆ, ಕಲಿಕೆ ಹೊಸ ಪಾಠದಂತೆ ಆರಂಭವಾಗಬೇಕು. ಪ್ರತಿ ಸಂಜೆ ಆತ್ಮ ಪರಿಶೀಲನೆಯೊಂದಿಗೆ ಮುಗಿಯಬೇಕು. ಸೋಲು ನಮ್ಮನ್ನು ಕುಗ್ಗಿಸಲು ಅಲ್ಲ, ಕಲಿಸಲು ಬರುತ್ತದೆ; ನೋವು ನಮ್ಮನ್ನು ಮುರಿಯಲು ಅಲ್ಲ, ಬಲಪಡಿಸಲು ಬರುತ್ತದೆ. ಬದುಕಿನ ಪ್ರತಿಯೊಂದು ಕ್ಷಣವೂ ಗುರುವಾಗುವಾಗ, ಜೀವನವೇ ಮಹಾವಿದ್ಯಾಲಯವಾಗುತ್ತದೆ.

ಹೀಗಾಗಿ ನಾಳಿನ ಭವ್ಯ ಭವಿಷ್ಯದ ಕನಸು ಕಾಣುವ ನಾವು ಸದ್ವಿಚಾರಗಳ ಕಲಿಯುತ್ತಾ ಮುಂದೆ ಸಾಗಬೇಕು. ಸದಾ ಕಲಿಯುವ ಧೈರ್ಯವನ್ನು ಅಂತರಂಗದಲ್ಲಿ ಬೆಳೆಸೋಣ, ಕಲಿಕೆಯಿಂದಾಗುವ ಪ್ರಯೋಜನವನ್ನು ಹೊಂದೋಣ. ಭಯವಿಲ್ಲದೆ ಬದುಕುವ ಹಂಬಲವನ್ನು ಉಳಿಸೋಣ. ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಕಲಿಯಬೇಕು; ಕಲಿಕೆಯನ್ನು ಜೀವಂತವಾಗಿರಿಸಲು ಬದುಕಬೇಕು. ಅಲ್ಲಿ ಮಾತ್ರ ನಮ್ಮ ಬದುಕು ಪ್ರೇರಣೆಯ ದೀಪವಾಗುತ್ತದೆ. ನಮಗೆ ಮಾತ್ರವಲ್ಲ, ನಮ್ಮ ಸುತ್ತಲಿನವರಿಗೂ.

ಕವಿತೆ ಮನೋಲ್ಲಾಸದ ಜತೆಗೆ ಮನೋವಿಕಾಸ ಉಂಟು ಮಾಡಬೇಕು

ಸಂಕ್ರಾಂತಿ ಕವಿಗೋಷ್ಠಿ ಉದ್ಘಾಟಿಸಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ

ಮೈಸೂರು,ಜ.19(ಪಿಎಂ)– ಕವಿತೆ ಕೇವಲ ಮನೋಲ್ಲಾಸ ನೀಡಿದರೆ ಸಾಲದು. ಜೊತೆಗೆ ಮನೋವಿಕಾಸ ಉಂಟು ಮಾಡುವಂತಿರಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಹಾಗೂ ತಾಯಮ್ಮ ಪ್ರಕಾಶನದ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂಕ್ರಾಂತಿ ಕವಿಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಂಕ್ರಾಂತಿ ಕವಿಗೋಷ್ಠಿಯನ್ನು ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಉದ್ಘಾಟಿಸಿದರು. ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಮಡ್ಡೀಕೆರೆ ಗೋಪಾಲ್ ಇನ್ನಿತರರಿದ್ದಾರೆ.

ಕವಿಯಾದವನು ಸಮಾಜಕ್ಕೆ ಸ್ಪಂದಿಸುವಂತೆ ಬರೆಯಬೇಕು. ಆಗ ಮಾತ್ರ ಶ್ರೇಷ್ಠ ಕವಿಯಾಗಲು ಸಾಧ್ಯ. ಸಾಹಿತ್ಯ ಪ್ರಕಾರದಲ್ಲಿ ಕಥೆ, ಕಾದಂಬರಿ ಹಾಗೂ ಮಹಾಕಾವ್ಯದ ಪೈಕಿ ಕವಿತೆಗೆ ವಿಶಿಷ್ಟ ಸ್ಥಾನವಿದೆ. ಕಾರಣ ಕೇವಲ ಮೂರ್‍ನಾಲ್ಕು ಸಾಲುಗಳಲ್ಲಿ ಸಾವಿರ ಪದಗಳಲ್ಲಿ ಹೇಳುವುದನ್ನು ಕವಿತೆಯಲ್ಲಿ ಹೇಳಬಹುದು. ಕವಿಯೊಳಗೆ ಭಾವ ಮತ್ತು ಶಬ್ದ ಸಂಪತ್ತು ಇರುವುದು ಮುಖ್ಯ. ಕವಿತೆ ಬರೆಯುವ ಮೊದಲು ಗದ್ಯ ಬರವಣಿಗೆಯಲ್ಲಿ ಅನುಭವ ಹೊಂದಿರಬೇಕೆಂಬ ಮಾತಿದೆ. ಹಾಗಾಗಿ ಕವಿತೆಗೆ ವಿಶಿಷ್ಟ ಸ್ಥಾನವಿದೆ ಎಂದರು.

ಜೊತೆಗೆ ಕವಿತೆ ಬರೆಯುವುದು ಸುಲಭ. ಆದರೆ ಒಳ್ಳೆಯ ಕವಿತೆ ಬರೆಯುವುದು ಸುಲಭ ಸಾಧ್ಯವಲ್ಲ. ಅಲ್ಲದೆ, ಒಬ್ಬ ಕವಿ ಎಷ್ಟು ಕವಿತೆ ಬರೆದರು ಎಂಬುದು ಮುಖ್ಯವಲ್ಲ. ಬದಲಿಗೆ ಸಂಖ್ಯೆ ಕಡಿಮೆ ಇದ್ದರೂ ಗುಣಮಟ್ಟದ ಕವಿತೆಗಳ ರಚನೆ ಪ್ರಮುಖವಾಗುತ್ತದೆ. ಕವಿತೆ ಓದುಗರ ಮನಸ್ಸು ಮುಟ್ಟುವಂತಿರಬೇಕು ಎಂದು ತಿಳಿಸಿದರು.

ಸಮಾಜದಲ್ಲಿ ಅನ್ಯಾಯ ಹೆಚ್ಚುತ್ತಿದೆ. ಜಾತಿ–ಧರ್ಮದ ಹೆಸರಿನಲ್ಲಿ ಶೋಷಣೆ ಸಹ ವ್ಯಾಪಕವಾಗುತ್ತಿದೆ. ಮತ್ತೊಂದೆಡೆ ರೈತರ ಆತ್ಮಹತ್ಯೆ ಹೆಚ್ಚುತ್ತಿದೆ. ಇಂತಹ ಸನ್ನಿವೇಶದಲ್ಲಿ ಕವಿಗಳ ಹೊಣೆಗಾರಿಕೆ ಹೆಚ್ಚಿದೆ. ಸಮಾಜದಲ್ಲಿರುವ ಸಮಸ್ಯೆಗಳಿಗೆ ಕವಿತೆಗಳು ಪರಿಹಾರ ಸೂಚಿಸುವಂತಿರಬೇಕು. ಕವಿತೆ ಸೇರಿದಂತೆ ಯಾವುದೇ ಪ್ರಕಾರದ ಸಾಹಿತ್ಯ ರಚನೆಯಾದರೂ ಇಂದು ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿ ಪ್ರಶಸ್ತಿ ಪಡೆಯಬೇಕೆಂಬ ಧಾವಂತ ಹೆಚ್ಚುತ್ತಿದೆ. ಇದು ಸರಿಯಲ್ಲ ಎಂದರು.

ಯಾವುದೇ ಬರವಣಿಗೆಯಾದರೂ ಸಮಾಜದ ಬಗ್ಗೆ ಕಳಕಳಿ ಇರುವುದು ಮುಖ್ಯ. ಜೊತೆಗೆ ಅಧ್ಯಯನಶೀಲನೆ ಮೂಲಕ ಕವಿತೆಗಳು ಹೊರಹೊಮ್ಮಬೇಕು. ಆಗ ಮಾತ್ರ ಅವು ಸಮಾಜದ ಧ್ವನಿಯಾಗಿ ಗುಣಮಟ್ಟದಿಂದ ಹೊರ ಹೊಮ್ಮುತ್ತವೆ. ಸಂಕ್ರಾಂತಿ ಎಂದರೆ ಸುಗ್ಗಿಯ ಸಂಭ್ರಮವಾಗಿದ್ದು, ಈ ಸಂದರ್ಭದಲ್ಲಿ ಗ್ರಾಮೀಣ ಭಾಗದಲ್ಲಿ ಸುಗ್ಗಿಯ ಸಡಗರ ಮನೆ ಮಾಡಿದರೆ, ಆಧುನಿಕರಣಗೊಂಡ ಸಮಾಜದಲ್ಲಿ ಸುಗ್ಗಿ ಅರ್ಥದಲ್ಲಿ ಹೊಸ ಆಶಯ ಕಟ್ಟಿಕೊಳ್ಳುವ ಪ್ರೇರಣೆ ಕಂಡುಬರುತ್ತದೆ. ಎಳ್ಳು ಬೆಲ್ಲ ನೀಡಿ ಸಾಮರಸ್ಯ ಬೆಸೆಯುವ ಸಂದರ್ಭ ಇದಾಗುತ್ತದೆ ಎಂದು ಹೇಳಿದರು.

20ಕ್ಕೂ ಹೆಚ್ಚು ಮಂದಿ ಸಂಕ್ರಾಂತಿ ಕುರಿತು ತಾವು ರಚಿಸಿದ ಕವಿತೆಗಳನ್ನು ವಾಚಿಸಿದರು. ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಅಧ್ಯಕ್ಷತೆ ವಹಿಸಿದ್ದರು. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಶಿಕ್ಷ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ದೇವರಾಜು ಪಿ.ಚಿಕ್ಕಹಳ್ಳಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಉಪಾಧ್ಯಕ್ಷ ಎನ್.ಅನಂತ ಮತ್ತಿತರರು ಹಾಜರಿದ್ದರು.

ಬಸ್ಸಲ್ಲಿ ಲೈಂಗಿಕ ಕಿರುಕುಳ ಆರೋಪ; ನೊಂದು ವ್ಯಕ್ತಿ ಆತ್ಮಹತ್ಯೆ..!

ಕೋಳಿಕ್ಕೋಡ್: ಇತ್ತೀಚಿನ ಯುವ ಜನರಲ್ಲಿ ವೈರಲ್ ಆಗುವ ಗೀಳು ಹೆಚ್ಚಾಗಿ ಹೋಗಿದೆ. ಈ ಗೀಳು ಕೇರಳದಲ್ಲಿ ವ್ಯಕ್ತಿಯೊಬ್ಬರ ಪ್ರಾಣವನ್ನೇ ಕಸಿದುಕೊಂಡಿದೆ.

ಸ್ಥಳೀಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ವ್ಯಕ್ತಿ ಲೈಂಗಿಕ ಕಿರುಕುಳ ಕೊಡುವುದನ್ನು ಮಹಿಳೆ ವೀಡಿಯೊ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಳು.

ದೀಪಕ್ ಎಂಬ ಈ ವ್ಯಕ್ತಿ ಕೋಳಿಕ್ಕೋಡ್‌ನ ಗೋವಿಂದಪುರಂ ನಿವಾಸಿ. ಬೆಳಗ್ಗೆ 7 ಗಂಟೆ ಸುಮಾರಿಗೆ ಪೋಷಕರು ಆತನನ್ನು ಎಬ್ಬಿಸಲು ಹೋದಾಗ ಕೊಠಡಿಯಲ್ಲಿ ಆತ ತನ್ನ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಆತನ ಮೃತದೇಹ ಪತ್ತೆಯಾಗಿದೆ. ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆಂದು ಹೇಳಲಾಗುತ್ತಿದೆ. ಕೆಲವು ದಿನಗಳ ಹಿಂದೆ ವೀಡಿಯೊ ವೈರಲ್ ಆಗಿತ್ತು. ಪಯ್ಯನ್ನೂರು ರೈಲ್ವೆ ನಿಲ್ದಾಣದಿಂದ ಬಸ್ ನಿಲ್ದಾಣಕ್ಕೆ ಜನ ದಟ್ಟಣೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಮಹಿಳೆ ಆತ ತನ್ನೊಂದಿಗೆ ಹಲವು ಬಾರಿ ಅನುಚಿತವಾಗಿ ಮುಟ್ಟಿದ್ದಾನೆ ಎಂದು ಹೇಳಿ ಕೊಂಡಿದ್ದಳು. ವಿಡಿಯೋ ವೈರಲ್ ಆಗಿದ್ದು, ವ್ಯಕ್ತಿಯನ್ನು ತೀವ್ರವಾಗಿ ನಿಂದಿಸಲಾಗಿತ್ತು. ಇದರಿಂದ ಆತ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದ ಎನ್ನಲಾಗಿದೆ. ಈ ನಡುವೆ ಮಹಿಳೆಯೇ ವ್ಯಕ್ತಿಯ ಹತ್ತಿರ ಹೋಗಿ, ಬಸ್ ಚಲಿಸುವಾಗ ಸ್ಪರ್ಶವಾಗುವಂತೆ ಮಾಡಿ, ಅದರ ವಿಡಿಯೋ ರೆಕಾರ್ಡ್ ಮಾಡಿದ್ದಾಳೆಂಬ ಮಾತುಗಳು ಕೇಳಿಬರುತ್ತಿವೆ ಇದೀಗ ಮಹಿಳೆಯ ಕುರಿತಂತೆಯೂ ಟೀಕೆಗಳು ವ್ಯಕ್ತವಾಗುತ್ತಿವೆ ಪ್ರಕರಣ ಸಂಬಂಧ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮಂಗಳವಾರ 20 ಜನವರಿ 2026

ನಾಳೆ ಮೈಸೂರಲ್ಲಿ ಡಾ.ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯಸ್ಮರಣೆ, ದಾಸೋಹ



ಮೈಸೂರು, ಜ.19(ಜಿಎ)–ಡಾ.ಶಿವಕುಮಾರ ಸ್ವಾಮೀಜಿಯವರ 7ನೇ ವರ್ಷದ ಪುಣ್ಯಸ್ಮರಣೆ ಹಾಗೂ ದಾಸೋಹ ಕಾರ್ಯಕ್ರಮವನ್ನು ಡಾ.ಶಿವಕುಮಾರ ಮಹಾಸ್ವಾಮೀಜಿ ಭಕ್ತ ಮಂಡಳಿ ವತಿಯಿಂದ ಜ.21ರಂದು ನಗರದ ಕೆ.ಆರ್. ಮೊಹಲ್ಲಾದ 101 ಗಣಪತಿ ದೇವಸ್ಥಾನದ ಬಳಿ ಬೆಳಗ್ಗೆ 9ಕ್ಕೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುದೇರು ಮಠದ ಗುರುಶಾಂತ ಸ್ವಾಮೀಜಿ, ಮಡಿವಾಳೇಶ್ವರ ಮಠದ ಇಮ್ಮಡಿ ಮಡಿವಾಳ ಸ್ವಾಮೀಜಿ, ಕುದೇರು ಮಠದ ಕಿರಿಯ ಶ್ರೀಗಳಾದ ಗುರುಲಿಂಗ ಸ್ವಾಮೀಜಿ, ಹುಲ್ಲಿನ ಬೀದಿ ಮಠದ ಚಂದ್ರಶೇಖರ ಸ್ವಾಮೀಜಿ, ದೇವಲಾಪುರ ಮಠದ ಜಡೆಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಶ್ರೀವತ್ಸ, ಗಣೇಶ್ ಪ್ರಸಾದ್, ಮಾಜಿ ಶಾಸಕ ನಿರಂಜನ್ ಕುಮಾರ್, ಕೇಂದ್ರ ಸಚಿವ ವಿ.ಸೋಮಣ್ಣ ಅವರ ಆಪ್ತ ಸಹಾಯಕ ಕೆ.ಸ್ವಾಮಿ, ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷರಾದ ತಾವು, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶರಣ ದೇವರಾಜು ಪಿ.ಚಿಕ್ಕಹಳ್ಳಿ ಹಾಗೂ ಇನ್ನಿತರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಮುಖಂಡರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಮೆರವಣಿಗೆ ಆಯೋಜಿಸಿದ್ದು, ಬಸವಣ್ಣ, ಗುರುಮಲ್ಲೇಶ್ವರರು, ಶಿವಕುಮಾರ ಸ್ವಾಮೀಜಿ, ಶಿವರಾತ್ರಿ ರಾಜೇಂದ್ರ ಸ್ವಾಮೀಜಿ, ಸಿದ್ಧೇಶ್ವರ ಸ್ವಾಮೀಜಿ ಭಾವಚಿತ್ರ ಇರುವ ಮೆರವಣಿಗೆ ಅಗ್ರಹಾರ ವೃತ್ತದಿಂದ ಪ್ರಾರಂಭವಾಗಿ, ನಂದಿಕಂಬ, ವೀರಗಾಸೆ, ಪೂಜಾಕುಣಿತ, ಡೊಳ್ಳುಕುಣಿತ, ಪಟ್ಟದ ಕುಣಿತ, ಭಜನೆ, ವಾದ್ಯಗೋಷ್ಠಿ ಇತರೆ ಸಾಂಸ್ಕೃತಿಕ ಕಲಾತಂಡಗಳೊಡನೆ ತ್ಯಾಗರಾಜ ರಸ್ತೆ, ಚಾಮರಾಜ ಜೋಡಿ ರಸ್ತೆ, ಬಲಕ್ಕೆ ತಿರುಗಿ, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಬಳಿಯಿರುವ ಬಸವ ಪುತ್ಥಳಿ, ರಾಮಾನುಜ ರಸ್ತೆಯ ಮೂಲಕ ಸಾಗಿ ಪುನಃ 101 ಗಣಪತಿ ದೇವಸ್ಥಾನಕ್ಕೆ ಬಂದು ಸೇರಲಿದೆ ಎಂದು ತಿಳಿಸಿದರು

ಸುದ್ದಿಗೋಷ್ಠಿಯಲ್ಲಿ ಚಿಕ್ಕಹಳ್ಳಿ ಸ್ವಾಮಿ, ಎಂ.ಜಿ.ಮಹೇಶ್, ಲೋಕೇಶ್, ದೇವರಾಜು ಪಿ.ಚಿಕ್ಕಹಳ್ಳಿ ಉಪಸ್ಥಿತರಿದ್ದರು.

ವಿವಿಧ ಪ್ರದೇಶ, ದುರ್ಬಲ ವರ್ಗಗಳ ಅಗತ್ಯಗಳೊಂದಿಗೆ ಬಜೆಟ್ ಹಂಚಿಕೆ ಹೊಂದಾಣಿಕೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ ● ಯೋಜನಾ ಆಯೋಗದ ವಿಚಾರ ಸಂಕಿರಣದಲ್ಲಿ ಸಾರ್ವಜನಿಕ ವೆಚ್ಚದ ಕಾರ್ಯಕ್ಷಮತೆ ಪ್ರತಿಪಾದನೆ

ಬೆಂಗಳೂರು, ಜ.19(ಕೆಎಂಶಿ)–ವಿವಿಧ ಪ್ರದೇಶ ಮತ್ತು ದುರ್ಬಲ ವರ್ಗಗಳ ಅಗತ್ಯಗಳ ಜೊತೆ ಬಜೆಟ್ ಹಂಚಿಕೆಯ ಹೊಂದಾಣಿಕೆ ನೀತಿ ನಿರೂಪಣೆ ಮತ್ತು ಅನುಷ್ಠಾನದ ಪ್ರಮುಖ ಉದ್ದೇಶವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

"ಅವಶ್ಯಕತೆ, ಸಾಕ್ಷ್ಯ ಮತ್ತು ಫಲಿತಾಂಶ ಆಧಾರಿತ ನೀತಿ ಹಾಗೂ ಯೋಜನೆ" ಕುರಿತು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ವಿಚಾರ ಸಂಕಿರಣದ ಮುಖ್ಯ ಅತಿಥಿಯಾಗಿ ಪ್ರಧಾನ ಭಾಷಣ ಮಾಡಿದ ಅವರು, ಅರ್ಥಪೂರ್ಣ ಅಭಿವೃದ್ಧಿ ಫಲಿತಾಂಶಗಳತ್ತ ಗಮನಹರಿಸುವ ಮೂಲಕ ಸಾರ್ವಜನಿಕ ವೆಚ್ಚದ ಕಾರ್ಯಕ್ಷಮತೆ ಮತ್ತು ಪರಿಣಾಮ ಹೆಚ್ಚಿಸುವುದು ಮತ್ತೊಂದು ಪ್ರಮುಖ ಉದ್ದೇಶವಾಗಿದೆ ಎಂದರು.

ಕಲಿಕೆ ಮತ್ತು ಹೊಂದಿಕೊಳ್ಳುವ ನೀತಿ ನಿರೂಪಣೆಗೆ ಸಹಕಾರಿಯಾಗುವ ದೃಢ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಪ್ರತಿಕ್ರಿಯಾ ವ್ಯವಸ್ಥೆ ಸಂಸ್ಥಾಗತಗೊಳಿಸುವುದೂ ಮುಖ್ಯವಾಗಿದೆ. ಇದರ ಮೂಲಕ ಪಾರದರ್ಶಕತೆ ಹೆಚ್ಚಿಸಿ, ಪ್ರಾದೇಶಿಕ ಮತ್ತು ಸಾಮಾಜಿಕ ಅಸಮಾನತೆ ಕಡಿಮೆ ಮಾಡುವುದು ಸರ್ಕಾರದ ಆಶಯವಾಗಿದೆ.



ಸಾರ್ವಜನಿಕ ನೀತಿ ಮತ್ತು ಆಡಳಿತ ಕ್ಷೇತ್ರದಲ್ಲಿ ಕರ್ನಾಟಕ ದೇಶದ ಅತ್ಯಂತ ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಪರಿಣಾಮಕಾರಿ ಆಡಳಿತವೆಂದರೆ ಕೇವಲ ಬಜೆಟ್ ಹಂಚಿಕೆ ಪ್ರಮಾಣ ಮಾತ್ರವಲ್ಲ. ನಾಗರಿಕರಿಗೆ ತಲುಪುವ ಯೋಜನೆಗಳ ಫಲಿತಾಂಶ, ಗುಣಮಟ್ಟ, ಸಮಾನತೆ ಮತ್ತು ಸ್ಥಿರತೆಯ ನಿರ್ಧಾರವೇ ಪರಿವರ್ತನೆಯ ಮೂಲವಾಗಿದೆ.

ವೇಗವಾದ ನಗರೀಕರಣ, ತಾಂತ್ರಿಕ ನಾಯಕತ್ವ ಮತ್ತು ಮುಂದುವರಿದ ಪ್ರಾದೇಶಿಕ ಅಸಮಾನತೆ ವಿಭಿನ್ನ ಯೋಜನಾ ವಿಧಾನ ಅವಶ್ಯಕವಾಗಿಸಿದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ಫಲಿತಾಂಶ ಆಧಾರಿತ ಬಜೆಟಿಂಗ್, ಕಾರ್ಯಕ್ಷಮತಾ ಸೂಚ್ಯಂಕಗಳು, ಡಿಜಿಟಲ್ ಮೇಲ್ವಿಚಾರಣಾ ವ್ಯವಸ್ಥೆಗಳು ಮತ್ತು ತಕ್ಷಣದ ದತ್ತಾಂಶ ಡ್ಯಾಶ್‌ಬೋರ್ಡ್‌ಗಳನ್ನು ತನ್ನ ನೀತಿ ಪ್ರಕ್ರಿಯೆಗಳಲ್ಲಿ ಅಳವಡಿಸಿಕೊಂಡಿದೆ.

ಕೊರತೆಗಳನ್ನು ಗುರುತಿಸುವ ಹಾಗೂ ಅನುಭವ ಆಧಾರಿತ ಹಸ್ತಕ್ಷೇಪ ಮರುಸಂಯೋಜಿಸಲು ಸಾಧ್ಯವಾಗಿದೆ. ಅಲ್ಲದೆ, ಸ್ಥಳೀಯ ಅಗತ್ಯ ಮತ್ತು ಪ್ರಾದೇಶಿಕ ಆದ್ಯತೆಗಳು ನೀತಿ ರೂಪಣೆಯಲ್ಲಿ ಪ್ರತಿಬಿಂಬಿಸುವಂತೆ ಮಾಡಿದೆ.

ಕರ್ನಾಟಕದ ನೀತಿ ನಿರೂಪರೇಖೆ ಬೆಳವಣಿಗೆ ಮುಂದೋನ್ಮುಖ ಆಡಳಿತ ಮಾದರಿ ಪ್ರತಿನಿಧಿಸುತ್ತದೆ. ಅವಶ್ಯಕತೆಗಳ ಮೌಲ್ಯಮಾಪನ, ಸಾಕ್ಷ್ಯಾಧಾರಿತ ವಿಶ್ಲೇಷಣೆ ಮತ್ತು ಫಲಿತಾಂಶಗಳ ಪರಿಶೀಲನೆಗಳು ಯೋಜನೆ ಹಾಗೂ ಬಜೆಟಿಂಗ್ ಪ್ರಕ್ರಿಯೆಗಳಿಗೆ ಸಮಗ್ರ ಮಾರ್ಗದರ್ಶನ ನೀಡುತ್ತವೆ.

ಒಳಹರಿವು ಮತ್ತು ವೆಚ್ಚದ ಸೂಚ್ಯಂಕಗಳ ಮೇಲಿನ ನಿರಂತರ ಒತ್ತಡ, ವಿವಿಧ ಕ್ಷೇತ್ರಗಳ ಫಲಿತಾಂಶ ಸೂಚ್ಯಂಕ ಇನ್ನಷ್ಟು ಪರಿಷ್ಕರಿಸಿ ಮಾನದಂಡಗೊಳಿಸುವ ಅಗತ್ಯವನ್ನು ತೋರಿಸುತ್ತದೆ. ಇಲಾಖಾ ದತ್ತಾಂಶ ವ್ಯವಸ್ಥೆಗಳ ಏಕೀಕರಣ ಮತ್ತು ಸಮನ್ವಯತೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಯ ಅಗತ್ಯವಿದೆ. ತಳಮಟ್ಟದಲ್ಲಿ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಪರಿಣಾಮ ಮೌಲ್ಯಮಾಪನ ಕೌಶಲ್ಯ ಬಲಪಡಿಸುವುದು ಅತ್ಯಗತ್ಯವಾಗಿದೆ. ದೀರ್ಘಕಾಲೀನ ಅಭಿವೃದ್ಧಿ ಗುರಿಗಳನ್ನು ತಕ್ಷಣದ ಆಡಳಿತಾತ್ಮಕ ಹಾಗೂ ರಾಜಕೀಯ ಆದ್ಯತೆಗಳ ಜೊತೆ ಹೊಂದಾಣಿಕೆ ಮಾಡುವುದು ಸವಾಲಾಗಿದ್ದರೂ, ಜವಾಬ್ದಾರಿಯುತ ಮತ್ತು ಫಲಿತಾಂಶ ಕೇಂದ್ರಿತ ಸಂಸ್ಕೃತಿ ಬೆಳೆಸುವ ಅವಕಾಶ ದೊರೆಯುತ್ತದೆ.

ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ನಾಗರಿಕ ಸಮಾಜ ಸಂಸ್ಥೆ ಒಳಗೊಂಡ ಜ್ಞಾನ ಪರಿಸರ, ಸಾಕ್ಷ್ಯ ಸೃಜನ ಮತ್ತು ನೀತಿ ಮೌಲ್ಯಮಾಪನಕ್ಕೆ ಮಹತ್ವದ ಬೆಂಬಲ ನೀಡುತ್ತದೆ.

ಸಂಸ್ಥಾತ್ಮಕ ಸುಧಾರಣೆ ಅಳಗೊಳಿಸಿ, ದತ್ತಾಂಶ ವ್ಯವಸ್ಥೆ ಬಲಪಡಿಸಿ, ಕಲಿಕೆ ಮತ್ತು ಜವಾಬ್ದಾರಿ ಸಂಸ್ಕೃತಿ ಉತ್ತೇಜಿಸುವುದು ಅಗತ್ಯವಾಗಿದೆ. ಎಲ್ಲಾ ಹಂತದ ಅಧಿಕಾರಿಗಳ ಸಾಮರ್ಥ್ಯ ವೃದ್ಧಿ, ನಾಗರಿಕರ ಭಾಗವಹಿಸುವಿಕೆ ಮತ್ತು ಪ್ರತಿಕ್ರಿಯಾ ವ್ಯವಸ್ಥೆ ಬಲಪಡಿಸುವಿಕೆ ನೀತಿಗಳನ್ನು ಇನ್ನಷ್ಟು ಸ್ಪಂದನಶೀಲ ಮತ್ತು ಸಮಾವೇಶಿತವಾಗಿ ಮಾಡುತ್ತದೆ. ವಿಕೇಂದ್ರೀಕೃತ ಯೋಜನೆ, ಡಿಜಿಟಲ್ ಮೇಲ್ವಿಚಾರಣೆ ಮತ್ತು ಫಲಿತಾಂಶ ಆಧಾರಿತ ಬಜೆಟಿಂಗ್ ರಾಜ್ಯದ ಸ್ಥಿರಪ್ರಗತಿಗೆ ಬಲವಾದ ಅಡಿಪಾಯ ಒದಗಿಸುತ್ತದೆ. ನೀತಿಗಳು ಕೇವಲ ಅವಶ್ಯಕತೆಗಳನ್ನು ಮಾತ್ರ ಪರಿಹರಿಸುವುದಲ್ಲದೆ, ಸಮಾಜದ ಎಲ್ಲಾ ವರ್ಗಗಳಿಗೆ ಸ್ಪಷ್ಟ ಮತ್ತು ಪರಿವರ್ತನಾತ್ಮಕ ಫಲಿತಾಂಶ ನೀಡುವಂತಾಗುತ್ತದೆ ಎಂದರು.

ಸಂವಿಧಾನ ಸಾಮಾಜಿಕ ಅಸಮಾನತೆ ಪರಿಹರಿಸಿದೆ

ಲೇಖಕ ಹೊ.ಬ.ರಘೋತ್ತಮ ಅಭಿಮತ



ಸಂಜೀವಯ್ಯ ಶಿಕ್ಷಣ ಸಂಸ್ಥೆಯಲ್ಲಿ 'ಸಂವಿಧಾನ ಅರಿವು' ಕಾರ್ಯಕ್ರಮ ನಡೆಯಿತು.

ಮೈಸೂರು, ಜ.19(ಎಂಕೆ)– ಭಾರತ ಸಂವಿಧಾನವು ರಚನಾತ್ಮಕ ಬದಲಾವಣೆಯ ಕ್ರಿಯಾತ್ಮಕ ಸಾಧನವಾಗಿದ್ದು, ಸಾಮಾಜಿಕ ಅಸಮಾನತೆಗಳನ್ನು ಪರಿಹರಿಸಿದೆ ಎಂದು ಲೇಖಕ ಹೊ.ಬ.ರಘೋತ್ತಮ ತಿಳಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಸಂಜೀವಯ್ಯ ಶಿಕ್ಷಣ ಸಂಸ್ಥೆ ಆವರಣದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ವರ್ಕರ್ಸ್ ಫಾರ್ ಆಕ್ಷನ್ ರಿಸರ್ಚ್ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಂಶೋಧನಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಸಂವಿಧಾನ ಅರಿವು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳು, ರಾಜ್ಯ ನಿರ್ದೇಶಕ ತತ್ವಗಳು ಮತ್ತು ದೃಢೀಕರಣ ಕ್ರಮಗಳ ನಿಬಂಧನೆಗಳು ಸಾಮಾಜಿಕ ನ್ಯಾಯವನ್ನು ಉತ್ತೇಜಿಸಿವೆ. ಒಕ್ಕೂಟ, ಅಧಿಕಾರ ವಿಕೇಂದ್ರೀಕರಣ ಮತ್ತು ಪ್ರಜಾಪ್ರಭುತ್ವದ ಆಡಳಿತವು ಭಾಗವಹಿಸುವಿಕೆಯನ್ನು ಬಲಪಡಿಸಿದೆ ಎಂದರು.

ಸಿದ್ದಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕಿ ಡಾ. ತ್ರಿವೇಣಿ ಮಾತನಾಡಿ, ಭಾರತ ಸಂವಿಧಾನವು ಸಮಾನತೆ, ಘನತೆ ಮತ್ತು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವ ಮೂಲಕ ಮಹಿಳೆಯರು, ಮಕ್ಕಳು ಮತ್ತು ದುರ್ಬಲ ವರ್ಗಗಳಿಗೆ ಗಮನಾರ್ಹ ಬದಲಾವಣೆಗಳನ್ನು ತಂದಿದೆ. ಮೂಲಭೂತ ಹಕ್ಕುಗಳು ತಾರತಮ್ಯವನ್ನು ನಿಷೇಧಿಸಿ, ಸಮಾನ ಅವಕಾಶಗಳನ್ನು ನೀಡಿದೆ ಎಂದು ತಿಳಿಸಿದರು.

ಡಿ. ಸಂಜೀವಯ್ಯ ಸಂಸ್ಥೆ ಕಾರ್ಯದರ್ಶಿ ನಾಗಮಲ್ಲೇಶ್, ದಲಿತ ಮುಖಂಡ ಅಹಿಂದ ಜವರಪ್ಪ, ಈಶ್ವರ್ ಸ್ವಯಂ ಸೇವಾ ಸಂಸ್ಥೆಯ ಸಲಹೆಗಾರ ಡಾ.ಶ್ರೀನಿವಾಸ ಡಿ.ಮಣಗಳ್ಳಿ ಮತ್ತಿತರರಿದ್ದರು.

ಪುಸ್ತಕ ಎರವಲು ಸೇವೆ ತಾತ್ಕಾಲಿಕ ಬದಲಾವಣೆ

ಮೈಸೂರು,ಜ.19– ಚಾಮರಾಜಪುರಂ ಸೇವಾ ಕೇಂದ್ರ ಗ್ರಂಥಾಲಯದ ಕಟ್ಟಡದ ಕಾಮಗಾರಿಯನ್ನು ಕೈಗೊಂಡಿರುವುದರಿಂದ ಚಾಮರಾಜಪುರಂ ಸೇವಾ ಕೇಂದ್ರ ಗ್ರಂಥಾಲಯದಲ್ಲಿ ಸದಸ್ಯತ್ವ ಹೊಂದಿರುವ ಸಾರ್ವಜನಿಕ ಓದುಗರು ಆಧಾರ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಹಾಗೂ ತಮ್ಮ ಸದಸ್ಯತ್ವ ಕಾರ್ಡ್ ಸಲ್ಲಿಸಿ ಪುಸ್ತಕ ಎರವಲು ಸೇವೆಯನ್ನು ತಾತ್ಕಲಿಕವಾಗಿ ಸರಸ್ವತೀಪುರಂ ಶಾಖಾ ಗ್ರಂಥಾಲಯದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಚಾಮರಾಜಪುರಂ ಸೇವಾ ಕೇಂದ್ರ ಗ್ರಂಥಾಲಯ ಸದಸ್ಯರು ಸದರಿ ಸೇವೆಯನ್ನು ಪಡೆಯಲು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಡುಪಿಯಲ್ಲಿ ಅದ್ದೂರಿಯಾಗಿ ನೆರವೇರಿದ ಪರ್ಯಾಯ: ಪುತ್ತಿಗೆ ಶ್ರೀಗಳಿಂದ ಕೃಷ್ಣ ಪೂಜಾ ಕೈಂಕರ್ಯ ಶಿರೂರು ಮಠಕ್ಕೆ ಹಸ್ತಾಂತರ



ಉಡುಪಿ: ಕರಾವಳಿ ನಾಡಹಬ್ಬವೆಂದೆ ಖ್ಯಾತಿ ಪಡೆದಿರುವ ಉಡುಪಿ ಪರ್ಯಾಯ ಬಹಳ ಅದ್ದೂರಿಯಾಗಿ ನೆರವೇರಿತು. ಇಪ್ಪತ್ತರ ಆಸುಪಾಸಿನಲ್ಲಿರುವ ಶಿರೂರು ಮಠದ ಶ್ರೀ ವೇದವರ್ಧನ ಶ್ರೀಪಾದರು ಸರ್ವಜ್ಞ ಪೀಠಾರೋಹಣ ಅಲಂಕರಿಸಿದ್ದಾರೆ.

ಶಿರೂರು ವೇದವರ್ಧನ ಶ್ರೀಗಳ ಚೊಚ್ಚಲ ಪರ್ಯಾಯ ಮಹೋತ್ಸವದ ಭವ್ಯ ಶೋಭಾಯಾತ್ರೆ ಭಾನುವಾರ ಬೆಳಗ್ಗೆ ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಭಕ್ತರು ಭಾಗವಹಿಸಿ ವಿವಿಧ ಟ್ಯಾಬ್ಲೋಗಳನ್ನು ಪ್ರದರ್ಶಿಸಿದರು. ಬೆಳಗಿನ ಜಾವ, ಮೆರವಣಿಗೆ ಕಾರ್ ಸ್ಟ್ರೀಟ್ ತಲುಪಿ ಮಠಾಧೀಶರು 'ಕನಕನ ಕಿಂಡಿ' ಮೂಲಕ ಶ್ರೀಕೃಷ್ಣನ ದರ್ಶನ ಪಡೆದರು, ನಂತರ ಶ್ರೀ ಚಂದ್ರಮೌಳೇಶ್ವರ ಮತ್ತು ಶ್ರೀ ಅನಂತೇಶ್ವರ ದರ್ಶನ ಪಡೆದರು.

ಕಾಪು ದಂಡತೀರ್ಥದಲ್ಲಿ ಮಧ್ಯರಾತ್ರಿ ಪುಣ್ಯಸ್ನಾನ ಮುಗಿಸಿದ ಯತಿಗಳು, ಪಟ್ಟದ ದೇವರಿಗೆ ಪೂಜೆ ಸಲ್ಲಿಸಿ 2:30ಕ್ಕೆ ಸರಿಯಾಗಿ ಜೋಡುಕಟ್ಟೆಗೆ ಆಗಮಿಸಿದರು. ಬಳಿಕ ಜೋಡುಕಟ್ಟೆಯಿಂದ ವೈಭವದ ಮೆರವಣಿಗೆ ಆರಂಭಗೊಂಡು ಸುಮಾರು ಎರಡು ಕಿ.ಮೀ ಸಾಗಿ ರಥಬೀದಿಯಲ್ಲಿ ಸಂಪನ್ನಗೊಂಡಿತು. ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಮುಂದಿನ ಎರಡು ವರ್ಷಗಳ ಶ್ರೀ ಕೃಷ್ಣ ಪೂಜಾ ಕೈಂಕರ್ಯವನ್ನು ಹಸ್ತಾಂತರಿಸಿದರು.

ಅಷ್ಟ ಮಠಾಧೀಶರಿಗೆ ಸಾಂಪ್ರದಾಯಿಕ ದರ್ಬಾರ್ ಮತ್ತು ಮಾಲಿಕೆ ಮಂಗಳಾರತಿ ಬಡಗು ಮಾಳಿಗೆಯ ಅರಳು ಗದ್ದುಗೆಯಲ್ಲಿ ನಡೆಯಿತು. ನಂತರ ರಾಜಾಂಗಣದಲ್ಲಿ 'ಪರ್ಯಾಯ ದರ್ಬಾರ್' ನಡೆಯಿತು. ಅಲ್ಲಿ ಅಷ್ಟ ಮಠದ ಮಠಾಧೀಶರು ಮತ್ತು ಪರ್ಯಾಯ ಮಠದ ಯತಿಗಳು ಆಶೀರ್ವದಿಸಿದ ಸಂದೇಶಗಳನ್ನು ನೀಡಿದರು, ನಂತರ ಶ್ರೀ ಕೃಷ್ಣನಿಗೆ ಮಹಾಪೂಜೆ ಮತ್ತು ಪಲ್ಲಪೂಜೆ ಮಾಡಲಾಯಿತು.


ಸ್ಥಳೀಯ ಚುನಾವಣೆ ಸಂಬಂಧ ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ)ಯಿಂದ ಸಭೆ



ಮೈಸೂರು ನಗರದ ಪಿಡಬ್ಲ್ಯೂ ಡಿ ಅತಿಥಿ ಗೃಹದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಕುರಿತು ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ)ಯಿಂದ ಸಭೆ ನಡೆಯಿತು. ಸಭೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಹಾಗೂ ಮಾ.15ರಂದು ಜನ ಸಂಪರ್ಕ ಸಭೆ ನಡೆಸುವ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ಪಕ್ಷದ ಜಿಲ್ಲಾಧ್ಯಕ್ಷ ಕುಮಾರಸ್ವಾಮಿ, ಮೈಸೂರು ನಗರ ಅಧ್ಯಕ್ಷ ಶ್ರೀನಿವಾಸ್, ಮಂಜುನಾಥ್, ಶ್ರೀಮತಿ ಮಂಜುಳ, ಶ್ರೀಮತಿ ಯಶೋಧ, ಸಿಂಧುವಳ್ಳಿ ಶಿವಕುಮಾರ್, ಕೃಷ್ಣ, ಬನ್ನೂರು ರೈತಪರ ಹೋರಾಟಗಾರ ನಾರಾಯಣಸ್ವಾಮಿ ಇನ್ನಿತರರಿದ್ದರು.

ಬಳ್ಳಾರಿ ಗಲಭೆ ಮುಚ್ಚಿ ಹಾಕುವ ಷಡ್ಯಂತರವಾಗಿ ಸಿಐಡಿ ತನಿಖೆ

ಶಾಸಕ ಗಾಲಿ ಜನಾರ್ಧನ ರೆಡ್ಡಿ ಆರೋಪ



ಬೆಂಗಳೂರು,ಜ.19(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಾಮಾಣಿಕತೆ ಬಿಂಬಿಸಲು, ಕಾನೂನು ರಕ್ಷಣೆಗೆ ಕಂಕಣಬದ್ಧ ಎಂಬುದನ್ನು ತೋರಿಸಲು ಈ ಹಿಂದೆ 7 ಪ್ರಕರಣಗಳನ್ನು ಸಿಬಿಐ ತನಿಖೆಗೆ ಕೊಟ್ಟವರು ಬಳ್ಳಾರಿಯಲ್ಲಿ ಗುಂಡು ಹಾರಿಸಿದ ಘಟನೆಯನ್ನು ಕೊಡಲು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿ 7 ಪ್ರಕರಣಗಳನ್ನು ಸಿಬಿಐ ತನಿಖೆಗೆ ಕೊಟ್ಟಿದ್ದೇನೆ, ಬಿಜೆಪಿ ಒಂದು ಪ್ರಕರಣವನ್ನೂ ಕೊಟ್ಟಿಲ್ಲ ಎನ್ನುತ್ತಿದ್ದರು. ಯಡಿಯೂರಪ್ಪ ಅವಧಿಯಲ್ಲಿ ಎಷ್ಟು ಪ್ರಕರಣ ಸಿಬಿಐಗೆ ಕೊಡಲಾಗಿದೆ. ಸಿದ್ದರಾಮಯ್ಯ ಅವಧಿಯಲ್ಲಿ ಎಷ್ಟು ವಹಿಸಲಾಗಿದೆ ಎಂಬ ಪ್ರಶ್ನೆ ಮುಖ್ಯವಲ್ಲ. ಕಾಂಗ್ರೆಸ್ ಶಾಸಕನ ನೇತೃತ್ವದಲ್ಲಿ ನಡೆಯುತ್ತಿದ್ದ ಪ್ರತಿಭಟನೆ ವೇಳೆ ಹಾರಿಸಿದ ಗುಂಡಿನಿಂದ ಆಡಳಿತ ಪಕ್ಷದ ಕಾರ್ಯಕರ್ತ ಮೃತಪಟ್ಟಿದ್ದಾನೆ.

ಈ ಘಟನೆಯಿಂದ ಕಾಂಗ್ರೆಸ್‌ಗೆ ಮುಜುಗರವಾಗಿದೆ. ಮೂವರು ಖಾಸಗಿ ಗನ್‌ಮೆನ್‌ಗಳನ್ನು ಬಂಧಿಸಿ, ಸಿಐಡಿ ತನಿಖೆಗೆ ವಹಿಸಿ ಜನರು ಮರೆಯುವಂತೆ ಮಾಡುವ ಷಡ್ಯಂತ್ರ ನಡೆಯುತ್ತಿದೆ. ಪ್ರಕರಣವನ್ನು ಸಿಬಿಐ ತನಿಖೆಗೆ ಕೊಡದೆ ವಿಷಯಾಂತರಕ್ಕೆ ಪ್ರಯತ್ನಿಸಲಾಗುತ್ತಿದೆ. ಶಾಸಕ ನಾ.ರಾ.ಭರತ್ ರೆಡ್ಡಿ ಐದಾರು ಸಾವಿರ ಜನರೊಂದಿಗೆ ನಮ್ಮ ಮನೆಗೆ ಪೆಟ್ರೋಲ್ ಬಾಂಬ್ ಎಸೆದು, ಗನ್ ಫೈರ್ ಮಾಡಿದ್ದರಿಂದ ಒಬ್ಬ ಅಮಾಯಕ ಮೃತಪಟ್ಟಿದ್ದಾನೆ. ಇದು ನನ್ನ ಕೊಲೆ ಯತ್ನ ಎಂದರು.

ಬಳ್ಳಾರಿಯಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಸಿಬಿಐ ತನಿಖೆಗೆ ವಹಿಸುವಂತೆ ಬಿಜೆಪಿ ಆಗ್ರಹಿಸಿದೆ. ವಾಲ್ಮೀಕಿ ಬ್ಯಾನರ್ ಕಟ್ಟುವ ನೆಪದಲ್ಲಿ ರಾತ್ರಿ 9 ಗಂಟೆಗೆ ಗಲಭೆ ನಡೆಸಿ, ರಾಜ್ಯದಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆದಿದೆ. ವಾಲ್ಮೀಕಿ ಜನಾಂಗದ ಅಭಿವೃದ್ಧಿಗೆ ಏನು ಕಾರ್ಯಕ್ರಮ ನೀಡಿದ್ದೀರಿ. ಇದೇ ಸಮುದಾಯಕ್ಕೆ ಸೇರಿದ ಶ್ರೀರಾಮುಲು ಪಾದಯಾತ್ರೆ ಮಾಡುವುದರಲ್ಲಿ ತಪ್ಪೇನು ಎಂದರು.

ರಾಜಕೀಯ ಮುತ್ಸದ್ಧಿ ಭೀಮಣ್ಣ ಖಂಡ್ರೆಗೆ ಶ್ರದ್ಧಾಂಜಲಿ



ಹಿರಿಯ ಮುತ್ಸದ್ಧಿ ಭೀಮಣ್ಣ ಖಂಡ್ರೆ ಅವರಿಗೆ ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಜ. 19– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಗೌರವಾಧ್ಯಕ್ಷರು, ಮಾಜಿ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಶತಾಯುಷಿ ಶಿವಶರಣ ಭೀಮಣ್ಣ ಖಂಡ್ರೆಯವರ ನಿಧನದ ಹಿನ್ನೆಲೆಯಲ್ಲಿ, ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯಲ್ಲಿ ಭೀಮಣ್ಣ ಖಂಡ್ರೆಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಅವರ ಸೇವಾಮಯ ಬದುಕನ್ನು ಸ್ಮರಿಸಲಾಯಿತು. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ ಭೀಮಣ್ಣ ಖಂಡ್ರೆಯವರು ವೀರಶೈವ–ಲಿಂಗಾಯತ ಸಮಾಜ ಸಂಘಟನೆಗೆ ತಮ್ಮ ಜೀವನವನ್ನೇ ಅರ್ಪಿಸಿದ ಮಹನೀಯರು ಎಂದು ಸಭೆಯಲ್ಲಿ ಸ್ಮರಿಸಲಾಯಿತು. ಸರಳತೆ, ನಿಷ್ಠೆ, ತತ್ವಾಧಾರಿತ ಚಿಂತನೆ ಹಾಗೂ ಸಮಾಜಮುಖಿ ದೃಷ್ಟಿಕೋನ ಅವರ ಬದುಕಿನ ಅಸಲಿ ಗುರುತಾಗಿತ್ತು ಎಂದು ವಕ್ತಾರರು ಗುಣಗಾನ ಮಾಡಿದರು.

ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಹೆಚ್.ವಿ.ಬಸವರಾಜು, ಪ್ರಧಾನ ಕಾರ್ಯದರ್ಶಿ ಕೆ.ಶಿವಕುಮಾರ್, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಕೆ.ಖಂಡೇಶ್, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಿ. ಗುರುಸ್ವಾಮಿ, ಒಕ್ಕೂಟದ ಅಧ್ಯಕ್ಷ ಬಿ.ಕೆ. ನಾಗರಾಜು, ನಿರ್ದೇಶಕರಾದ ಎನ್.ಜಿ. ಗಿರೀಶ್, ಧರ್ಮ ಮಂಜುನಾಥ್, ಚಿಕ್ಕಳ್ಳಿ ಎಂ.ಕುಮಾರ್, ಶಿವಸ್ವಾಮಿ, ಗೆಜ್ಜಗಳ್ಳಿ ಮಹೇಶ್ ಇತರರು ಭೀಮಣ್ಣ ಖಂಡ್ರೆಯವರ ಜೀವನ, ಸಮಾಜಕ್ಕೆ ಅವರು ಸಲ್ಲಿಸಿದ ಅಪಾರ ಸೇವೆ ಹಾಗೂ ಆದರ್ಶಗಳನ್ನು ಸ್ಮರಿಸಿ, ಸಂತಾಪ ಸೂಚಿಸಿದರು.

ಧನ್ಯ ಸತ್ಯೇಂದ್ರಮೂರ್ತಿ, ದಾರಿಪುರ ಡಿ. ಚಂದ್ರಶೇಖರ್, ಗೆಜ್ಜಗಳ್ಳಿ ಮಹೇಶ್ ಹಾಗೂ ಅನಸೂಯಾ ಗಣೇಶ್ ಮಾತನಾಡಿ, ಭೀಮಣ್ಣ ಖಂಡ್ರೆಯವರ ಅಗಲಿಕೆ ವೀರಶೈವ–ಲಿಂಗಾಯತ ಸಮಾಜಕ್ಕೆ ತುಂಬಲಾರದ ನಷ್ಟವಾಗಿದ್ದು, ಅವರ ಸೇವೆ ಹಾಗೂ ಆದರ್ಶಗಳು ಸದಾಕಾಲ ಸ್ಮರಣೀಯವಾಗಿವೆ ಎಂದು ಹೇಳಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.19–ವಿ.ವಿ.ಮೊಹಲ್ಲಾ ಉಪವಿಭಾಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಜ.21ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಗೋಕುಲಂ 11 ಕೆ.ವಿ. ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಬರುವ ಗೋಕುಲಂ 3ನೇ ಹಂತ, ಮೈಸೂರು ಒನ್, ಗೋಕುಲಂ ಸುತ್ತಮುತ್ತ, ಇ.ಎಸ್.ಐ ಕ್ವಾಟ್ರಸ್ ಹಿಂಭಾಗ, ಕೃಷ್ಣ ಮಂದಿರ ಟೆಂಪಲ್, ಗೋಕುಲಂ ಡಾಕ್ಟರ್ಸ್ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಮುಡಾ ಗ್ರೌಂಡ್ 11 ಕೆ.ವಿ. ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಬರುವ ವಿಜಯನಗರ 2ನೇ ಹಂತ, ಡಾಲ್ಫಿನ್ ಬೇಕರಿ, ಆಯಿಸ್ಟಾರ್ ಬೇ, ಸಪ್ತಪದಿ ಚೌಲ್ಟ್ರಿ, ವಿಜಯನಗರ ಐ.ಸಿ.ಐ.ಸಿ.ಐ. ಬ್ಯಾಂಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಚಾ.ಬೆಟ್ಟದ ತಪ್ಪಲಿನ 50 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಾಣಕ್ಕೆ ಎಂಡಿಎ ಅನುಮತಿ; ಪರಿಸರವಾದಿಗಳ ಆಕ್ಷೇಪ

ಮೈಸೂರು,ಜ.19(ಎಸ್‌ಪಿಎನ್)– ಚಾಮುಂಡಿಬೆಟ್ಟದ ತಪ್ಪಲಿನ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ 50 ಎಕರೆ ಪ್ರದೇಶದ ವಿವಿಧ ಸರ್ವೆ ನಂಬರ್‌ಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹೊಸ ಬಡಾವಣೆಗಳ ನಿರ್ಮಾಣಕ್ಕೆ ಅನುಮತಿ ನೀಡಿರುವ ಎಂಡಿಎ ನಿರ್ಧಾರಕ್ಕೆ ಪರಿಸರವಾದಿಗಳು, ಸಾಮಾಜಿಕ ಹೋರಾಟಗಾರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರು ತಾಲೂಕು ಕಸಬಾ ಹೋಬಳಿ, ಕುರುಬಾರಹಳ್ಳಿ ಗ್ರಾಮದ ಸ.ನಂ.98ರಲ್ಲಿನ ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸಲ್ಲಿಸಲಾಗಿರುವ 4 ಎಕರೆ 27ಗುಂಟೆ ಸಂಬಂಧಿತ ಜಾಗಕ್ಕೆ, 2025ರ ಆ.8ರಂದು ಜರುಗಿದ ಎಂಡಿಎ ಸಭೆಯಲ್ಲಿ ನಗರ ಯೋಜಕ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಜೊತೆಗೆ ಮುದ್ರಣ ಮಾಧ್ಯಮದಲ್ಲಿ ಪ್ರಕಟವಾಗಿರುವ ಸಾರ್ವಜನಿಕ ಪ್ರಕಟಣೆಗೆ ಶಿವಮೊಗ್ಗದ ಪರಿಸರ ಸೇವಾ ಸಂಘದ ಕಾರ್ಯದರ್ಶಿ ವಿದ್ಯಾದೀಪ ಈ ಪ್ರಸ್ತಾವನೆಗೆ ಆಕ್ಷೇಪಣೆ ಸಲ್ಲಿಸಿದ್ದರೂ ಅನುಮತಿ ನೀಡಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರವು ತನ್ನದೆ ವಿಶೇಷ ಪರಿಸರವನ್ನು ಹೊಂದಿದೆ. ವಿವಿಧ ಸರ್ವೆ ನಂಬರ್‌ಗಳಲ್ಲಿ ಸುಮಾರು 50 ಎಕರೆ ಪ್ರದೇಶವನ್ನು ಭೂ ವಸತಿ ಉಪಯೋಗಕ್ಕೆ ಅನುಮತಿ ನೀಡಿದರೆ, ಅರಣ್ಯದಲ್ಲಿನ ಹಲವಾರು ಸಸ್ಯ ಪ್ರಭೇದಗಳು, ಗಿಡಮರಗಳು ಇತರೆ ಪರಿಸರ ಪರ ಜೀವಿಗಳು ನಾಶವಾಗುವುದಲ್ಲದೇ, ಹವಾಮಾನ ಬದಲಾಗುವ ಸಾಧ್ಯತೆಯೂ ಇದೆ. ಹಾಗಾಗಿ ಈ ಕೃಷಿ ಭೂಮಿಯನ್ನು ಯಥಾಸ್ಥಿತಿಯಲ್ಲಿ ಇರುವಂತೆ ಕೋರಿ ವಿದ್ಯಾದೀಪ ತಕರಾರು ಅರ್ಜಿ ಸಲ್ಲಿಸಿದ್ದಾರೆ.

ಮುಂದುವರೆದು ಪ್ರಶ್ನಿತ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ ವಿಶೇಷ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ವಲಯ ನಿಯಮಾವಳಿಯ ಅಧ್ಯಾಯ–6.16.2(ಸಿ)ರಲ್ಲಿ 'No Sub division of land for residential layout or other uses are permitted' ಎಂದು ನಗರ ಯೋಜಕ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಅಲ್ಲದೆ, ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಸದರಿ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳುವ ಸಂಬಂಧ 3.4.2006ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದರೂ ಸರ್ಕಾರದಿಂದ ಅಂತಿಮ ಅಧಿಸೂಚನೆ ಹೊರಡಿಸಿಲ್ಲ. ಆದರೆ, ಭೂ ಪರಿವರ್ತನೆ ವೇಳೆ ಪ್ರಾಥಮಿಕ ಅಧಿಸೂಚನೆ ರದ್ದಾಗಿರುವ ಬಗ್ಗೆ ಸಂಬಂಧಪಟ್ಟ ಅರ್ಜಿದಾರರು ಮಾಹಿತಿ ನೀಡಿರುವುದಿಲ್ಲ ಎಂದು ಆರೋಪಿಸಿದ್ದಾರೆ.


ಅಂತೆಯೆ ಈ ಬಡಾವಣೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ನಿರಾಪೇಕ್ಷಣಾ ಪತ್ರ ಸಲ್ಲಿಸಿರುವುದಿಲ್ಲ. ಇಂತಹ ಅಸ್ಪಷ್ಟ ಅಧಿಸೂಚನೆಗಳನ್ನು ವಸತಿ ಉಪಯೋಗಕ್ಕೆ ಭೂ ಪರಿವರ್ತನೆಗೆ ಅನುಮತಿ ನೀಡಲು ಶಿಫಾರಸ್ಸು ಮಾಡಿರುವ ಕಡತವನ್ನು ಸರ್ಕಾರಕ್ಕೆ ಕಳುಹಿಸಿರುವುದು ಎಷ್ಟು ಸರಿ ಎಂದು ಎಂಡಿಎ ಅಧಿಕಾರಿಗಳ ನಡೆಯನ್ನು ಪರಿಸರವಾದಿಗಳು ಪ್ರಶ್ನಿಸಿದ್ದಾರೆ.

ಅರಣ್ಯಪ್ರದೇಶ ವ್ಯಾಪ್ತಿಯಲ್ಲಿರುವ ಸದರಿ 4 ಎಕರೆ 27 ಗುಂಟೆ ಜಮೀನಿನ ಸುತ್ತಮುತ್ತ ವಾಣಿಜ್ಯ ಉದ್ದೇಶದ ಅಭಿವೃದ್ಧಿಯಾಗಿದ್ದು, ಸದರಿ ಜಮೀನನ್ನು ಯಾವುದೇ ವ್ಯವಸಾಯ ಇರುವುದು ಕಂಡು ಬಂದಿರುವುದಿಲ್ಲ ಹಾಗೂ ಸದರಿ ಪ್ರದೇಶವು ಯಾವುದೇ ವ್ಯವಸಾಯ ಮಾಡುವ ಲಕ್ಷಣ ಕಂಡು ಬಂದಿರುವುದಿಲ್ಲ ಹಾಗೂ ಸದರಿ ಪ್ರದೇಶವು ಚಾಮುಂಡಿ ಬೆಟ್ಟದ ಪ್ರದೇಶದಿಂದ ಹೊರಗಿದೆ.

ಆದ್ದರಿಂದ ಸದರಿ ಜಮೀನನ್ನು ವಿಶೇಷ ವ್ಯವಸಾಯ ಪ್ರದೇಶದಿಂದ ಹೊರಗಿಡಲಾಗಿರುತ್ತದೆ. ಹಾಗಾಗಿ ಸದರಿ ಜಮೀನನ್ನು ವಿಶೇಷ ವ್ಯವಸಾಯ ಪ್ರದೇಶದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಎಂಡಿಎ ಸಭೆಯ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದರ ಹಿಂದೆ ಬೇರೇನೋ ಇದೆ ಎನ್ನುತ್ತಾರೆ ಕಿರಣ್‌ಕುಮಾರ್.

> ಈ ಪ್ರಕರಣದ ಇನ್ನೂ ನಾಲ್ಕೈದು ಮಂದಿ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಎಂಡಿಎ ಅಧಿಕಾರಿಗಳು ಮನ್ನಣೆ ನೀಡಿರುವ ಬಗ್ಗೆ ಸ್ಪಷ್ಟ ಸಾಕ್ಷಿಗಳಿವೆ. ಇವರಿಗೆ ಪರಿಸರ ಉಳಿಸುವ, ಮೈಸೂರಿನ ಶಿಖರ ಪ್ರಾಯವಾಗಿರುವ ಚಾಮುಂಡಿಬೆಟ್ಟ ಉಳಿಸುವ ಕುರಿತು ಅಧಿಕಾರಿಗಳಲ್ಲಿ ಯಾವುದೇ ಇರಾದೆ ಇಲ್ಲ. ಹಣವಿದ್ದರೆ ಸಾಕು ಅಧಿಕಾರಿಗಳು ಯಾವ ಜಾಗವನ್ನಾದರೂ ಯಾರ ಹೆಸರಿಗಾದರೂ ಪರಿವರ್ತನೆ ಮಾಡಿಕೊಡುತ್ತಾರೆ.
> –ಕಿರಣ್‌ಕುಮಾರ್, ಪರಿಸರವಾದಿ.

> ಚಾಮುಂಡಿಬೆಟ್ಟದ ಬಳಿ 50 ಎಕರೆ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಕೃಷಿ ಭೂಮಿಯಲ್ಲಿ ಹೊಸದಾಗಿ ವಸತಿ ಬಡಾವಣೆ ನಿರ್ಮಾಣ ಸಂಬಂಧ ಕಡತ ಪರಿಶೀಲನೆ ಮಾಡದೇ, ಮಾಧ್ಯಮಗಳಿಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ.
> –ಶಿವರಾಮಯ್ಯ, ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ



ಎಚ್.ಡಿ.ಕೋಟೆಯ ಅಂಬೇಡ್ಕರ್ ಭವನದಲ್ಲಿ ನಡೆದ ವಾಯ್ಸ್ ಆಫ್ ಒಬಿಸಿ ಕಾರ್ಯಕ್ರಮದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಎಂ.ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಸಮಿತಿ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವಾಯ್ಸ್ ಆಫ್ ಒಬಿಸಿ ಕಾರ್ಯಕ್ರಮದ ಉಸ್ತುವಾರಿ ಎನ್.ಆರ್.ನಾಗೇಶ್, ವಿನೋದ್ ರಾಜ್, ಜೆ.ಎಸ್.ನಿಶ್ಚಿತ್, ಎಚ್.ಡಿ.ಕೋಟೆ, ಸರಗೂರು ಬ್ಲಾಕ್ ಅಧ್ಯಕ್ಷರಾದ ಏಜಾಜ್ ಪಾಷಾ, ಮಾದಪ್ಪ, ಓಬಿಸಿ ಘಟಕದ ಅಧ್ಯಕ್ಷರಾದ ಚಿಕ್ಕಣ್ಣ, ಬೈರೇಗೌಡ, ರಾಜ್ಯ ಒಬಿಸಿ ಘಟಕದ ಮಾಲೇಗೌಡ, ಜಟ್ಟಿಹುಂಡಿ ಬಸವರಾಜ್ ಅವರನ್ನು ಅಭಿನಂದಿಸಲಾಯಿತು.

ಕನಗನಹಳ್ಳಿ 2 ಗುಂಪುಗಳ ಪರ-ವಿರೋಧದ ನಡುವೆ

ಸೋಲಾರ್ ಪವರ್ ಪ್ಲಾಂಟ್ ನಿರ್ಮಾಣ ಕಾಮಗಾರಿಗೆ ಚಾಲನೆ

ಭೂಮಿ ಪೂಜೆ ವಿರೋಧಿಸಿ ಸ್ಥಳೀಯರಿಂದ ಪ್ರತಿಭಟನೆ



ಶಾಸಕ ದರ್ಶನ್ ಪುಟ್ಟಣ್ಣಯ್ಯ ಭೂಮಿ ಪೂಜೆ ನೆರವೇರಿಸಿದರು

ಚಿನಕುರಳಿ, ಜ.19– ಇಲ್ಲಿಗೆ ಸಮೀಪದ ಕನಗನಹಳ್ಳಿ ಗ್ರಾಮದ ಹೊರವಲಯದಲ್ಲಿ 2 ಗುಂಪುಗಳ ಪರ–ವಿರೋಧದ ನಡುವೆಯೂ ಸೋಲಾರ್ ಪವರ್ ಪ್ಲಾಂಟ್ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಪೊಲೀಸರ ಭದ್ರತೆಯಲ್ಲಿ ಭೂಮಿ ಪೂಜೆ ನೆರವೇರಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಿಎಂ ಕುಸುಮ್ ಯೋಜನೆಯಡಿ 4.5 ಮೆಗಾ ವ್ಯಾಟ್ ಸೋಲಾರ್ ಪ್ಲಾಂಟ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಲು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧಿಕಾರಿಗಳೊಂದಿಗೆ ಕನಗನಹಳ್ಳಿ ಗ್ರಾಮದ ಹೊರವಲಯದ ಗೋಮಾಳಕ್ಕೆ ಆಗಮಿಸಿದರು. ಈ ವೇಳೆ ಸ್ಥಳೀಯ ಒಂದು ಗುಂಪು ಪವರ್ ಪ್ಲಾಂಟ್ ಪರವಾಗಿದ್ದರೇ, ಮತ್ತೊಂದು ಗುಂಪು ವಿರೋಧ ವ್ಯಕ್ತಪಡಿಸಿತು.

ಸೋಲಾರ್ ಪವರ್ ಪ್ಲಾಂಟ್ ಯೋಜನೆ ಸ್ಥಳ ಗೋಮಾಳವಾಗಿದ್ದು, ಅದನ್ನು ಗೋಮಾಳವಾಗಿಯೇ ಉಳಿಸಿಕೊಡಿ ಎಂದು ಗ್ರಾಮಸ್ಥರು ಚಿನಕುರಳಿ ಗ್ರಾಪಂಗೆ ಅರ್ಜಿ ಸಲ್ಲಿಸಿದ್ದಾರೆ. ಈ ವಿಚಾರ ಗ್ರಾಪಂನ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಈ ಜಾಗ ಗೋಮಾಳವಾಗಿ ಉಳಿಸಿ ಎಂದು ಡಿಸಿ, ಎಸಿ ಹಾಗೂ ತಹಸೀಲ್ದಾರ್‌ಗೆ ಗ್ರಾಪಂನಿಂದ ಮನವಿ ಸಲ್ಲಿಸಲಾಗಿದೆ. ಈ ಸಂಬಂಧ ಡಿಸಿಯಿಂದ ನಮಗೆ ಸ್ಪಷ್ಟ ಆದೇಶ ಬಂದಿಲ್ಲ. ಜಾನುವಾರು ಸಂಖ್ಯೆಗೆ ಅನುಗುಣವಾಗಿ ಗೋಮಾಳ ಮೀಸಲಿಡಬೇಕೆಂದು ಸರ್ಕಾರ ಹಾಗೂ ಹೈಕೋರ್ಟ್ ಆದೇಶವಿದ್ದರೂ ಸಹ ತಾಲೂಕು ಆಡಳಿತ ಗ್ರಾಮಸ್ಥರ ಗಮನಕ್ಕೆ ತರದೇ, ಪ್ರಕಟಣೆ ಹೊರಡಿಸದೇ 18 ಎಕರೆ ಗೋಮಾಳವನ್ನು ಖಾಸಗಿ ವ್ಯಕ್ತಿಗೆ 30 ವರ್ಷ ಅವಧಿಗೆ ಗುತ್ತಿಗೆ ನೀಡಿದೆ. ಅಲ್ಲದೇ ಸ್ಥಳೀಯ ಗ್ರಾಪಂ ಗಮನಕ್ಕೂ ತರದೆ ಕಾರ್ಯಕ್ರಮಕ್ಕೂ ಆಹ್ವಾನ ನೀಡದೆ ಶಿಷ್ಟಾಚಾರ ಉಲ್ಲಂಘಿಸಿ ತರಾತುರಿಯಲ್ಲಿ ಪೂಜೆ ಸಲ್ಲಿಸಲು ಮುಂದಾಗಿದೆ. ಜೊತೆಗೆ ತಾಲೂಕು ಆಡಳಿತ ಜಿಲ್ಲಾಡಳಿತಕ್ಕೂ ತಪ್ಪು ಮಾಹಿತಿ ನೀಡಿದೆ. ಇಲ್ಲಿ ಪವರ್ ಪ್ಲಾಂಟ್ ನಿರ್ಮಿಸಿದರೆ ಇಲ್ಲಿಂದ ಹೊಸಲೈನ್ ಮೂಲಕ ಚಿನಕುರಳಿ ಪವರ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಬೇಕು. ಇದರಿಂದ ಆ ರೈತರ ಭೂಮಿಗೂ ಅನಾನೂಕೂಲವಾಗಲಿದೆ. ಇದು ಕೇಂದ್ರದ ಯೋಜನೆಯಾಗಿರುವುದರಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲಾಧಿಕಾರಿಗಳು ಸ್ಥಳಕ್ಕಾಗಮಿಸಿ ಮತ್ತೊಮ್ಮೆ ಪರಿಶೀಲಿಸಲಿ. ಪರ–ವಿರೋಧ ನಡೆಸುತ್ತಿರುವ 2 ಗುಂಪುಗಳ ಜೊತೆ ಸಭೆ ನಡೆಸಲಿ. ನಂತರ ಜಿಲ್ಲಾಧಿಕಾರಿಗಳು ಇದೇ ಜಾಗ ಸೂಕ್ತವೆಂದು ತಿಳಿಸಿದರೆ ನಂತರ ಭೂಮಿ ಪೂಜೆ ನೆರವೇರಿಸಿ. ಅಲ್ಲಿವರೆಗೆ ಭೂಮಿ ಪೂಜೆ ಮುಂದೂಡಿ. ಈ ಕಾರ್ಯಕ್ಕೆ ಸ್ಥಳೀಯ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ. ಶಾಸಕರು ಸಮಸ್ಯೆ ಅರ್ಥೈಸಿಕೊಳ್ಳಬೇಕು ಎಂದು ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ಸದಸ್ಯರಾದ ಸಿ.ಶಿವಕುಮಾರ್, ಸಿ.ಎ.ಲೋಕೇಶ್, ಸ್ಥಳೀಯ ಮುಖಂಡ ರಾಮಕೃಷ್ಣೇಗೌಡ ಸೇರಿದಂತೆ ಇತರರು ಶಾಸಕರಲ್ಲಿ ಮನವಿ ಮಾಡಿದರು.

> ಸೋಲಾರ್ ಪವರ್ ಪ್ಲಾಂಟ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಸ್ಥಳೀಯವಾಗಿ ಕಾಮಗಾರಿಗೆ ವಿರೋಧ ವ್ಯಕ್ತವಾದರೂ, ಪಿಎಂ ಕುಸುಮ್ ಯೋಜನೆ ಅಧಿಕಾರಿಗಳು ಮೂರ್‍ನಾಲ್ಕು ಕಡೆ ಜಾಗ ಪರಿಶೀಲಿಸಿ ಕನಗನಹಳ್ಳಿ ಜಾಗ ಸೂಕ್ತವೆಂದು ಗುರುತಿಸಿದ್ದಾರೆ. ಆ ಪ್ರಕಾರ ಭೂಮಿ ಪೂಜೆ ನೆರವೇರಿಸಿದ್ದೇವೆ. ಸ್ಥಳೀಯರು ನಾವು ಡಿಸಿಗೆ ಮನವಿ ಕೊಟ್ಟಿದ್ದೇವೆ. ಅಲ್ಲಿಂದ ಸ್ಪಷ್ಟ ಆದೇಶ ಬರುವವರೆಗೂ ಭೂಮಿ ಪೂಜೆ ಮಾಡಬೇಡಿ ಎಂದು ತಿಳಿಸಿದ್ದಾರೆ. ನಾವು ಭೂಮಿ ಪೂಜೆ ಮಾಡಿ ಡಿಸಿಯಿಂದ ಆದೇಶ ಬರುವವರೆಗೂ ಕಾಮಗಾರಿ ಆರಂಭಿಸಬೇಡಿ ಎಂದು ಗುತ್ತಿಗೆದಾರರಿಗೆ ಸೂಚಿಸಿದ್ದೇನೆ. ಇದು ರೈತರಿಗೆ ಅನುಕೂಲಕರ ಯೋಜನೆ. ಕ್ಷೇತ್ರದ 3 ಕಡೆ ಈ ಯೋಜನೆ ಅನುಷ್ಠಾನಗೊಳಿಸುತ್ತಿದ್ದೇವೆ. ಡಿಸಿ ಅವರೊಂದಿಗೆ ಸೂರವಾಣಿ ಮೂಲಕ ಚರ್ಚಿಸಿದ್ದೇನೆ. ಮುಂದಿನ ದಿನಗಳಲ್ಲಿ ಸ್ಥಳೀಯರೊಂದಿಗೆ ಚರ್ಚಿಸಿ ಕಾಮಗಾರಿ ಆರಂಭಿಸುತ್ತೇವೆ.
>
> - ದರ್ಶನ್ ಪುಟ್ಟಣ್ಣಯ್ಯ, ಶಾಸಕ.

ಈ ವೇಳೆ ಮತ್ತೊಂದು ಗುಂಪು ಯಾವುದೇ ಕಾರಣಕ್ಕೂ ಭೂಮಿ ಪೂಜೆ ಮುಂದೂಡಬಾರದು. ನೀವು ಭೂಮಿ ಪೂಜೆ ಮಾಡದೆ ಇಲ್ಲಿಂದ ತೆರಳಿದರೆ ನಾವು ನಿಮ್ಮನ್ನು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಈ ವೇಳೆ 2 ಗುಂಪುಗಳ ನಡುವೆ ಸಾಕಷ್ಟು ಚರ್ಚೆ, ವಾಗ್ವಾದ ನಡೆದು ತಳ್ಳಾಟ ನೂಕಾಟವು ನಡೆಯಿತು. ಮಧ್ಯಪ್ರವೇಶಿಸಿದ ಪೊಲೀಸರು 2 ಗುಂಪುಗಳನ್ನು ಸಮಾಧಾನಪಡಿಸಿದರು.

ಶಾಸಕ ದರ್ಶನ್ ಮಾತನಾಡಿ, ನಾನು ಡಿಸಿಯೊಂದಿಗೆ ಮಾತನಾಡಿದ್ದೇನೆ. ಎಲ್ಲಾ ದಾಖಲೆಗಳು ಸೂಕ್ತವಾಗಿದೆ. ಪವರ್ ಪ್ಲಾಂಟ್ ನಿರ್ಮಿಸಲು ಸೂಕ್ತ ಜಾಗವೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಎಲ್ಲಾ ಇಲಾಖೆಗಳಿಂದ ಕ್ಲಿಯರೆನ್ಸ್ ಇದೆ. ಹಾಗಾಗಿ ಭೂಮಿ ಪೂಜೆ ಮಾಡದೆ ಹೋದರೆ ಸೂಕ್ತವಲ್ಲ. ಮತ್ತೊಮ್ಮೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸೋಣ. ಅಲ್ಲಿವರೆಗೆ ಕಾಮಗಾರಿ ಆರಂಭಿಸಲ್ಲ. ಸದ್ಯಕ್ಕೆ ಭೂಮಿ ಪೂಜೆ ಮಾಡುತ್ತೇವೆ. ಚರ್ಚಿಸಿ ತೀರ್ಮಾನಿಸಿದ ಬಳಿಕ ಕಾಮಗಾರಿ ಆರಂಭವಿಸುತ್ತೇವೆ ಎಂದರು. ಈ ವೇಳೆ ಸಾಕಷ್ಟು ತೀವ್ರ ವಿರೋಧ ವ್ಯಕ್ತಪಡಿಸಿದರೂ ಶಾಸಕರು ಪೊಲೀಸರ ರಕ್ಷಣೆಯಲ್ಲಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಪ್ರತಿಭಟನೆ: ವಿರೋಧದ ನಡುವೆಯೂ ಶಾಸಕರು ಸೋಲಾರ್ ಪವರ್ ಪ್ಲಾಂಟ್‌ಗೆ ಭೂಮಿ ಪೂಜೆ ನಡೆಸಿದ್ದನ್ನು ವಿರೋಧಿಸಿ ಗ್ರಾಪಂ ಅಧ್ಯಕ್ಷೆ, ಉಪಾಧ್ಯಕ್ಷ ಹಾಗೂ ಎಲ್ಲಾ ಸದಸ್ಯರು, ಸ್ಥಳೀಯ ರೈತರು, ಸಾರ್ವಜನಿಕರು ಸ್ಥಳದಲ್ಲಿ ಪ್ರತಿಭಟನೆ ನಡೆಸಿ ತಾಲೂಕು ಆಡಳಿತ, ಶಾಸಕರ ವಿರುದ್ಧ ಆಕ್ರೋಶ ಹೊರ ಹಾಕಿದರು.

ಈ ವೇಳೆ ಪೊಲೀಸರ ಮನವೊಲಿಕೆಗೆ ಸ್ಪಂದಿಸಿದ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದು ಮುಂದಿನ ದಿನಗಳಲ್ಲಿ ನಮ್ಮ ನಾಯಕರೊಂದಿಗೆ ಚರ್ಚಿಸಿ ಹೋರಾಟದ ರೂಪರೇಷೆ ರೂಪಿಸಲಾಗುವುದು ಎಂದರು.



ಸೋಲಾರ್ ಪವರ್ ಪ್ಲಾಂಟ್ ಕಾಮಗಾರಿ ವಿರೋಧಿಸಿ ಗ್ರಾಪಂ ಸದಸ್ಯರು ಸೇರಿದಂತೆ ಸ್ಥಳೀಯರು ಪ್ರತಿಭಟನೆ ನಡೆಸುತ್ತಿರುವುದು.

ಬಿಗ್‌ಬಾಸ್-12ನೇ ಆವೃತ್ತಿ ವಿನ್ನರ್

ಗಿಲ್ಲಿ ನಟನಿಗೆ ಮಳವಳ್ಳಿಯಲ್ಲಿ ಅದ್ಧೂರಿ ಸ್ವಾಗತ

ಜನರ ಅಭಿಮಾನ, ಪ್ರೀತಿ ಕಂಡು ಬೆರಗಾದ ಗಿಲ್ಲಿ ನಟ, ಹೆಬ್ಬಿಕೆ, ಸಿಆರ್‌ಎಸ್ ಸೇರಿ ಹಲವರಿಂದ ಶುಭಾಷಯ



ಮಳವಳ್ಳಿಗೆ ಆಗಮಿಸಿದ ಗಿಲ್ಲಿ ನಟನಿಗೆ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿದರು.

ಮಳವಳ್ಳಿ, ಜ.19– ಕನ್ನಡದ ಪ್ರಸಿದ್ಧ ರಿಯಾಲಿಟಿ ಶೋ ಬಿಗ್‌ಬಾಸ್–12ನೇ ಆವೃತ್ತಿ ವಿಜೇತರಾಗಿ ಟ್ರೋಫಿಯೊಂದಿಗೆ ಮಳವಳ್ಳಿಗೆ ಆಗಮಿಸಿದ ಕಾಮಿಡಿ ಸ್ಟಾರ್ ಗಿಲ್ಲಿ ನಟ(ನಟರಾಜ್) ಅವರನ್ನು ಸಾವಿರಾರು ನೆರದಿದ್ದ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿದರು.

ತಾಲೂಕಿನ ಗಡಿಭಾಗವಾದ ನೆಲಮಾಕನಹಳ್ಳಿ, ಟಿ.ಕಾಗೇಪುರ ಗೇಟ್ ಬಳಿಯೇ ಜನರು ಜಯ ಘೋಷಣೆಯೊಂದಿಗೆ ಸ್ವಾಗತಿಸಿದರು. ನಂತರ ಪಟ್ಟಣದ ಹೊರವಲಯದ ಆರ್.ಆರ್.ಫ್ಯಾಮಿಲಿ ಡಾಬಾ ಬಳಿ ಆಗಮಿಸುತ್ತಿದ್ದಂತೆಯೇ ಮಾಲೀಕ ರಾಜು ನೇತೃತ್ವದಲ್ಲಿ ಪಟಾಕಿ ಸಿಡಿಸಿ, ಬ್ಯಾನರ್‌ಗೆ ಹಾಲಿನ ಅಭಿಷೇಕ ಮಾಡಿ ಬರಮಾಡಿಕೊಳ್ಳಲಾಯಿತು.

ನಂತರ ಪಟ್ಟಣದ ಹೊರ ಭಾಗದಲ್ಲಿರುವ ಶಕ್ತಿ ದೇವತೆ ದಂಡಿನ ಮಾರಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಬಿಗ್‌ಬಾಸ್ ಟ್ರೋಫಿಯೊಂದಿಗೆ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಪಟ್ಟಣಕ್ಕೆ ಆಗಮಿಸಿದ ಗಿಲ್ಲಿಗೆ ಅನಂತರಾಮ್ ವೃತ್ತದ ಬಳಿ ಬೃಹತ್ ಹೂವಿನ ಹಾರ ಹಾಕಿ ಹೂವಿನ ಸುರಿಮಳೆ ಸುರಿಸಿದ ಸಾವಿರಾರು ಯುವಕರ ದಂಡು ಜಯ ಘೋಷದೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬೈಕ್ ರ‍್ಯಾಲಿ: ದಂಡಿನ ಮಾರಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ತೆರದ ವಾಹನದಲ್ಲಿ ಮದ್ದೂರು–ಮಳವಳ್ಳಿ ಮುಖ್ಯರಸ್ತೆಯಲ್ಲಿ ಮೆರವಣಿಗೆ ಸಾಗಿದ ಸಂದರ್ಭ ಸಾವಿರಾರು ಮಂದಿ ದಡದಪುರದ ವರೆವಿಗೂ ಬೈಕ್ ರ‍್ಯಾಲಿ ಹಮ್ಮಿಕೊಂಡಿದ್ದರು.

ಸೆಲ್ಪಿಗೆ ಮುಗಿಬಿದ್ದ ಯುವಕರು: ಗಿಲ್ಲಿ ನಟನೊಂದಿಗೆ ಫೋಟೋ ತೆಗೆದುಕೊಳ್ಳಲು ಯುವಕ–ಯುವತಿಯರು ಮುಗಿಬಿದ್ದರು. ಈ ವೇಳೆ ಪೊಲೀಸರು ಯುವಕರನ್ನು ನಿಯಂತ್ರಿಸಲು ಹರಸಾಹಸಪಟ್ಟರು.

> ಬಿಗ್‌ಬಾಸ್‌ನಲ್ಲಿ ಗೆದ್ದ ನನ್ನನ್ನು ಇಷ್ಟೊಂದು ಅಭಿಮಾನದಿಂದ ಸ್ವಾಗತಿಸಿ ಬರಮಾಡಿಕೊಂಡಿದ್ದನ್ನು ಎಂದಿಗೂ ಮರೆಯುವುದಿಲ್ಲ. ಸಾವಿರಾರು ಅಭಿಮಾನಿಗಳ ಅಭಿಮಾನಕ್ಕೆ ಚಿರಋಣಿ. ಶಕ್ತಿ ದೇವತೆ ದಂಡಿನ ಮಾರಮ್ಮನ ಪೂಜೆ ಸಲ್ಲಿಸಿ ನನ್ನ ಹುಟ್ಟೂರಿನ ಜನರನ್ನು ನೋಡುತ್ತಿರುವುದು ಖುಷಿ ಕೊಟ್ಟಿದೆ
>
> - ಗಿಲ್ಲಿ ನಟ

ಸಾವಿರಾರು ಮಂದಿ ಭಾಗಿ: ಗಿಲ್ಲಿ ನಟನನ್ನು ನೋಡಲು ಮೈಸೂರು, ಚಾಮರಾಜನಗರ, ಹನೂರು, ಕೊಳ್ಳೇಗಾಲ, ಬನ್ನೂರು ಸೇರಿದಂತೆ ವಿವಿಧೆಡೆಯಿಂದ ಯುವಕ–ಯುವತಿಯರ ದಂಡೆ ಜಮಾಯಿತು. ಪಟ್ಟಣದಲ್ಲಿ ಗಿಲ್ಲಿ ಅಭಿಮಾನಿಗಳು ಹಾಗೂ ಶಾಲಾ ವಿದ್ಯಾರ್ಥಿಗಳು ಗಿಲ್ಲಿ ಗಿಲ್ಲಿ ಎಂಬ ಘೋಷಣೆ ಕೂಗಿ ಅಭಿಮಾನ ಮೆರೆದರು.

ಪ್ರತಿಯೊಂದು ಹಳ್ಳಿಗಳಲ್ಲಿ ಸ್ವಾಗತ: ಮಳವಳ್ಳಿ ಪಟ್ಟಣದಿಂದ ಸುಲ್ತಾನ್ ರಸ್ತೆ ಮೂಲಕ ಹುಟ್ಟೂರು ದಡದಪುರಕ್ಕೆ ಆಗಮಿಸುವ ಸಂದರ್ಭ ಪ್ರತಿಯೊಂದು ಗ್ರಾಮದ ಗೇಟ್‌ನಲ್ಲಿ ಗಿಲ್ಲಿಗೆ ಆರತಿ ಎತ್ತಿ ತಮಟೆ ವಾದ್ಯಗಳೊಂದಿಗೆ ಸ್ವಾಗತಿಸಿ ಬರಮಾಡಿಕೊಂಡರು. ಜೊತೆಗೆ ಈಡುಗಾಯಿ ಹೊಡೆದಿದ್ದು ವಿಶೇಷವಾಗಿತ್ತು

ಪೊಲೀಸ್ ಭದ್ರತೆ: ರಿಯಾಲಿಟಿ ಶೋನಲ್ಲಿ ಗೆಲುವು ಸಾಧಿಸಿ ತಮ್ಮ ಊರಿಗೆ ಆಗಮಿಸಿದ ಗಿಲ್ಲಿನಟನನ್ನು ನೋಡಲು ಯುವಕರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸುವ ಹಿನ್ನೆಲೆಯಲ್ಲಿ ಎಎಸ್ಪಿ ತಿಮ್ಮಯ್ಯ ಹಾಗೂ ಡಿವೈಎಸ್ಪಿ ಯಶ್ವಂತ ಕುಮಾರ್ ನೇತೃತ್ವದಲ್ಲಿ ಪಟ್ಟಣದ ಹಾಗೂ ತಾಲೂಕಿನ ದಡದಪುರ ಗ್ರಾಮದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಪ್ರಶಸ್ತಿಗೆ ಮುತ್ತು: ಪಟ್ಟಣದ ಅನಂತರಾಂ ವೃತ್ತದಲ್ಲಿ ಬಿಗ್‌ಬಾಸ್ ಟ್ರೋಫಿಯನ್ನು ಪ್ರದರ್ಶಿಸಿದ ಗಿಲ್ಲಿ ಸಾವಿರಾರು ಅಭಿಮಾನಿಗಳ ಮುಂದೆ ಟ್ರೋಫಿಗೆ ಮುತ್ತು ನೀಡಿದರು. ಜೊತೆಗೆ ಗಿಲ್ಲಿನಟ ಬಿಗ್‌ಬಾಸ್ ಗೆದ್ದಿರುವುದಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶುಭ ಕೋರಿದ್ದಾರೆ.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ: ಯುವಕ ಸಾವು



ಕೆ.ಆರ್.ಪೇಟೆ, ಜ.19– ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಪ್ರವಾಸಿ ಮಂದಿರದ ವೃತ್ತದ ಬಳಿ ಸೋಮವಾರ ಮುಂಜಾನೆ ನಡೆದಿದೆ. ತಾಲೂಕಿನ ಕಾಪನಹಳ್ಳಿ ಗ್ರಾಮದ ನಿವಾಸಿ ವೈ.ನಂದನ್(19) ಸಾವನ್ನಪ್ಪಿದ ಯುವಕ. ಈತ ಸೋಮವಾರ ಮುಂಜಾನೆ ಮೈಸೂರಿನ ಕಾಲೇಜಿಗೆ ತೆರಳುತ್ತಿದ್ದ ತನ್ನ ಸಹೋದರಿ ವೈ.ಅನು ಅವರನ್ನು ಪಟ್ಟಣದ ಬಸ್ ನಿಲ್ದಾಣಕ್ಕೆ ಬಿಟ್ಟು ವಾಪಸ್ ಊರಿಗೆ ಹೋಗುತ್ತಿದ್ದ ವೇಳೆ ಪ್ರವಾಸಿ ಮಂದಿರ ವೃತ್ತದಲ್ಲಿ ಚನ್ನರಾಯಪಟ್ಟಣ ಕಡೆಯಿಂದ ವೇಗವಾಗಿ ಬಂದ ಗೂಡ್ಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ನಂದನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಚಾಲಕ ಗೂಡ್ಸ್ ವಾಹನ ಬಿಟ್ಟು ಪರಾರಿಯಾಗಿದ್ದಾನೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಸುಮಾರಾಣಿ ಪರಿಶೀಲನೆ ನಡೆಸಿದರು. ಈ ಸಂಬಂಧ ಕೆ.ಆರ್.ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ವಿದ್ಯಾರ್ಥಿನಿಯರಿಗೆ ಮಧ್ಯಾಹ್ನ ಬಿಸಿಯೂಟ



ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ದಾನಿಗಳಾದ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್, ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಉದ್ಯಮಿಗಳಾದ ಮಹೇಶ್ ಶೆಣೈ, ಅವರ ಪುತ್ರ ಅಖಿಲೇಶ್, ಮಲ್ಲಿಕಾರ್ಜುನಸ್ವಾಮಿ, ಶ್ರೀಕಾಂತ್, ಹೋಟೆಲ್ ಉದ್ಯಮಿ ಕಾಂತರಾಜು, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್, ಉದ್ಯಮಿ ಹಾಗೂ ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ಚೇತನ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ವೇಳೆ ಬಿಸಿಯೂಟ ನೀಡುವ ಸತ್ಕಾರ್ಯ ಆರಂಭವಾಗಿದೆ. ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಇಸ್ಕಾನ್ ಸಂಸ್ಥೆಯ ಮೈಸೂರು ವಿಭಾಗದ ಅಧ್ಯಕ್ಷರಾದ ಶ್ರೀ ಸ್ತೋಕ ಕೃಷ್ಣ ಸ್ವಾಮಿ ಮಾತನಾಡಿ, ಸಾಮಾನ್ಯ ಜನರ ಹಿತಕ್ಕಾಗಿ, ಅವರ ಕಲ್ಯಾಣಕ್ಕೋಸ್ಕರ ಕೆಲಸ ಮಾಡುವುದು ನಮ್ಮ ದೇಶದ ಪರಂಪರೆಯಲ್ಲಿಯೇ ಅಡಗಿದೆ. ಮೊದಲೆಲ್ಲಾ ರಾಜ ಮನೆತನದವರು ಪ್ರಜೆಗಳ ಯೋಗಕ್ಷೇಮ ಕಾಪಾಡುತ್ತಿದ್ದರು. ಈಗ ಜನಪ್ರತಿನಿಧಿಗಳು ತಮ್ಮ ತಮ್ಮ ಕ್ಷೇತ್ರದ ಜನರ ಹಿತಕಾಯುವ ಕಾರ್ಯವನ್ನು ಮಾಡುತ್ತಿದ್ದಾರೆ. ಅಂತಹ ಜನಪ್ರತಿನಿಧಿಗಳ ಸಾಲಿನಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜಿ.ಟಿ.ದೇವೇಗೌಡರು ನಿಲ್ಲುತ್ತಾರೆ ಎಂದು ಶ್ಲಾಘಿಸಿದರು.

ಪ್ರಸ್ತುತ ಕಾಲಘಟ್ಟದಲ್ಲಿನ ರಾಜಕಾರಣಿಗಳಲ್ಲಿ ಕೆಲವರು ಸ್ವಹಿತ ಸಾಧನೆಗಾಗಿ ಸ್ವಾರ್ಥ ರಾಜಕಾರಣ ಮಾಡಿದರೆ, ಬಹುತೇಕರು ಜನರ ಕಲ್ಯಾಣ ಕಾರ್ಯಗಳನ್ನು ಮಾಡುತ್ತಾರೆ. ಹಾಗೆಯೇ ಜಿ.ಟಿ.ದೇವೇಗೌಡರು ಕಾಲೇಜು ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ ವಿತರಣೆಯಾಗಬೇಕು ಎಂಬ ಕಲ್ಪನೆಯನ್ನಿಟ್ಟುಕೊಂಡು ರಾಜ್ಯದಲ್ಲೇ ಮಾದರಿ ಕಾರ್ಯಕ್ರಮವನ್ನು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಲ್ಲಿ ಆರಂಭಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯದಲ್ಲೇ ಮೊದಲು: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ವಿತರಣೆಯಾಗುತ್ತಿದೆ. ಆದರೆ, ಕಾಲೇಜು ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮ ರಾಜ್ಯದಲ್ಲೇ ಮೊದಲಾಗಿದೆ. ಈ ಮಾದರಿ ಕಾರ್ಯಕ್ರಮವನ್ನು ವಿದ್ಯಾರ್ಥಿನಿಯರು ಸದ್ಬಳಕೆ ಮಾಡಿಕೊಂಡು ಉನ್ನತ ವಿದ್ಯಾಭ್ಯಾಸದ ಕಡೆಗೆ ಗಮನಹರಿಸಬೇಕು ಎಂದು ಕಿವಿಮಾತು ಹೇಳಿದರು.

1ರಿಂದ 10ನೇ ತರಗತಿವರೆಗೆ ಶಿಕ್ಷಣ ಪಡೆಯುವುದಕ್ಕೂ ಉನ್ನತ ವಿದ್ಯಾಭ್ಯಾಸ ಮಾಡುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಯಾವುದೇ ಸಂಸ್ಥೆಗೆ ಕೆಲಸ ಕೇಳಲು ಹೋದರೂ ಡಿಗ್ರಿ ಆಗಿದೆಯೇ ಎಂದು ಕೇಳುತ್ತಾರೆ. ಆದ್ದರಿಂದ ಉನ್ನತ ವಿದ್ಯಾಭ್ಯಾಸ ಅತೀ ಅವಶ್ಯವಾಗಿದೆ. ಉನ್ನತ ವಿದ್ಯಾಭ್ಯಾಸದ ಜೊತೆ ಜೊತೆಗೆ ಕೌಶಲಾಧಾರಿತ ತರಬೇತಿಗಳನ್ನು ಪಡೆದುಕೊಳ್ಳುವುದು ಮುಖ್ಯವಾಗಿದೆ. ಮೌಲ್ಯಯುತ ಶಿಕ್ಷಣದ ಜೊತೆಗೆ ಕೌಶಲ್ಯ ಜ್ಞಾನವಿದ್ದರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಅಭಿನಂದನೆ: ಇದೇ ವೇಳೆ ಮಧ್ಯಾಹ್ನದ ಬಿಸಿಯೂಟ ವಿತರಣೆಗೆ ದಾನಿಗಳಾಗಿ ಮತ್ತು ಇನ್ನಿತರೆ ಸಹಕಾರ ನೀಡಲು ಮುಂದಾಗಿರುವ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್, ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಉದ್ಯಮಿಗಳಾದ ಮಹೇಶ್ ಶೆಣೈ ಮತ್ತು ಅವರ ಪುತ್ರ ಅಖಿಲೇಶ್, ಮಲ್ಲಿಕಾರ್ಜುನಸ್ವಾಮಿ, ಶ್ರೀಕಾಂತ್, ಹೋಟೆಲ್ ಉದ್ಯಮಿ ಕಾಂತರಾಜು, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್, ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ಚೇತನ್ ಕುಮಾರ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇಸ್ಕಾನ್ ಸಂಸ್ಥೆಯ ಮೈಸೂರು ವಿಭಾಗದ ಶ್ರೀ ಕೃಷ್ಣ ಕೇಶವದಾಸ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ಡಿ.ಎಸ್.ಪ್ರತಿಮಾ, ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್, ಕಾಲೇಜು ಪ್ರಾಂಶುಪಾಲ ಕೆ.ಸಿ.ಭದ್ರಗಿರಿಯಯ್ಯ, ಪ್ರೊ.ಎಸ್.ಆನಂದ್‌ಕುಮಾರ್, ಮುಖಂಡರಾದ ಮರೀಗೌಡ, ರಾಜು, ಮಂಜೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಜೆಡಿಎಸ್‌ನಿಂದಲೇ ಸ್ಪರ್ಧಿಸ್ತೇನೆ!

ಬೆಂಬಲ ಕೊಡುವವನು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ, ಸಚಿವನಾಗಿ ಕೆಲಸ ಮಾಡಿದ್ದೇನೆ. ವಿಶಾಲವಾದ ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ ಯುಜಿಡಿ, ರಸ್ತೆ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಗ್ಯಾರಂಟಿ ಯೋಜನೆ ನಡುವೆಯೂ ಮತಕೊಟ್ಟು ಗೆಲ್ಲಿಸಿದ ಕ್ಷೇತ್ರದ ಜನರ ಸೇವೆ ಮಾಡಬೇಕು ಎಂಬ ಕಾರಣಕ್ಕಾಗಿ ಹೆಚ್ಚು ಓಡಾಡುತ್ತಿದ್ದೇನೆ ಎಂದರು. ಕ್ಷೇತ್ರದ ಜನತೆ ನನ್ನನ್ನು ತಮ್ಮ ಮನೆ ಮಗನ ರೀತಿ ನೋಡಿಕೊಂಡು ಬಂದಿದ್ದಾರೆ. ಕ್ಷೇತ್ರದ ಅಭಿವೃದ್ಧಿಗಾಗಿ ಬಸವರಾಜ ಬೊಮ್ಮಾಯಿ ಅವರ ಬಳಿಗೂ ಹೋಗಿದ್ದೇನೆ. ಸಿದ್ದರಾಮಯ್ಯ ಅವರ ಬಳಿಗೂ ಅನುದಾನ ಕೇಳಲು ಹೋಗುತ್ತಿದ್ದೇನೆಯೇ ಹೊರತು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಲ್ಲ. ಯಾರ ವಿರುದ್ಧವೂ, ಯಾವತ್ತು ಮಾತನಾಡಿಲ್ಲ ಎಂದು ಸ್ಪಷ್ಟನೆ ನೀಡಿದರು.

ಒತ್ತಡದಿಂದ ಭಾಗವಹಿಸಿಲ್ಲ: ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಒತ್ತಡ ಫಲದಿಂದಾಗಿ ಇತ್ತೀಚಿನ ಜೆಡಿಎಸ್ ಸಭೆಗಳಲ್ಲಿ ನಾನು ಭಾಗವಹಿಸಿಲ್ಲ. ಕೋರ್ ಕಮಿಟಿ ಅಧ್ಯಕ್ಷನಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿದ್ದೇನೆ. ಪಕ್ಷ ಕಟ್ಟಿ, ಸಂಘಟನೆ ಮಾಡಿದ್ದೇನೆಯೇ ಹೊರತು ಎಲ್ಲಿಯೂ ಪಕ್ಷದ ವಿರುದ್ಧ ಧ್ವನಿ ಎತ್ತಿಲ್ಲ. ಚಾಮುಂಡೇಶ್ವರಿ ಕ್ಷೇತ್ರದ ಜನತೆ ನನ್ನನ್ನು ಪ್ರೀತಿಯಿಂದ ಬೆಳೆಸಿದ್ದಾರೆ. ಹಾಗಾಗಿ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿದ್ದೇನೆ ಎಂದರು.

ನನಗೆ ನೋವಾಗಿದೆ... ಆದರೂ ಪಕ್ಷದಲ್ಲೇ ಇದ್ದೇನೆ....!

> ಪಕ್ಷದಲ್ಲಿ ನಡೆದ ಕೆಲ ಬೆಳವಣಿಗೆಗಳಿಂದ ವೈಯಕ್ತಿಕವಾಗಿ ನನಗೆ ನೋವಾಗಿದೆ. ಆದರೂ ನಾನು ಜೆಡಿಎಸ್ ತೊರೆದಿಲ್ಲ. ಈಗಲೂ ಜೆಡಿಎಸ್‌ನಲ್ಲಿ ಇದ್ದೇನೆ. ಮುಂದೆಯೂ ಜೆಡಿಎಸ್‌ನಲ್ಲೇ ಉಳಿಯುತ್ತೇನೆ. ಯಾವ ಕಾರಣಕ್ಕೆ ನನಗೆ ನೋವಾಗಿದೆ ಎಂಬುದು ನಮ್ಮ ನಾಯಕರಿಗೂ ಗೊತ್ತು. ರಾಷ್ಟ್ರೀಯ ಅಧ್ಯಕ್ಷರಿಗೂ ಗೊತ್ತಿದೆ. ಚರ್ಚೆಗಳು ನಡೆಯುತ್ತಿರುತ್ತವೆ. ಚುನಾವಣೆಗೆ ಇನ್ನೂ ಎರಡು ವರ್ಷ ನಾಲ್ಕು ತಿಂಗಳು ಬಾಕಿ ಇದ್ದು, ಚುನಾವಣೆ ಹತ್ತಿರ ಬರುತ್ತಾ ಎಲ್ಲವೂ ಒಳ್ಳೆಯದಾಗಲಿದೆ.
>
> –ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಬಿಹಾರದಲ್ಲಿ ಖತರ್ನಾಕ್ ಖದೀಮರ ಗ್ಯಾಂಗ್‌ನ ಇಬ್ಬರ ಬಂಧನ

ಬಿಹಾರದಲ್ಲೇ ಇದೆ ಮೈಸೂರು ತಂಡ: ಈ ಪ್ರಕರಣದಲ್ಲಿ ಇನ್ನು 8ಕ್ಕೂ ಹೆಚ್ಚು ಮಂದಿ ಭಾಗಿಯಾಗಿದ್ದು, ಅವರ ಬಂಧನಕ್ಕೆ ನಮ್ಮ ಪೊಲೀಸ್ ಸಿಬ್ಬಂದಿ ಇನ್ನು ಕೂಡ ಬಿಹಾರದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ದರೋಡೆ ಮಾಡಿದ್ದ 10 ಕೋಟಿ ಮೌಲ್ಯದ ಚಿನ್ನಾಭರಣ ಪತ್ತೆ ಹಚ್ಚಿ, ಆಪಾದಿತರಿಗೆ ಕೋಳ ತೊಡಿಸಲು ವ್ಯೂಹ ರಚಿಸಲಾಗಿದೆ ಎಂದು ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು.

ಪ್ರಕರಣದ ಮಾಸ್ಟರ್ ಮೈಂಡ್ ಪಂಕಜ್‌ಕುಮಾರ್, ಅಪರಾಧ ಕೃತ್ಯ ಎಸಗುವ ಮನಸ್ಥಿತಿ ಇರುವ ಯುವಕರನ್ನು ಮೊದಲು ಆಯ್ಕೆ ಮಾಡಿಕೊಂಡಿದ್ದಾನೆ. ನಂತರ ಯಾವ ರೀತಿ ದರೋಡೆ ಮಾಡಬೇಕೆಂಬ ಬಗ್ಗೆ ಅವರಿಗೆ ತರಬೇತಿ ನೀಡಿದ್ದಾನೆ. ಎಲ್ಲರೊಡನೆ ಒಟ್ಟುಗೂಡಿ ಕರ್ನಾಟಕದಲ್ಲಿ ದರೋಡೆ ಮಾಡಲು ಸ್ಕೆಚ್ ಹಾಕಿದ್ದಾನೆ ಎಂದರು.

ಸಹಚರರೊಂದಿಗೆ ಕರ್ನಾಟಕಕ್ಕೆ ಬಂದ ಪಂಕಜ್ ಕುಮಾರ್ ಎಲ್ಲಿ ಸುಲಭವಾಗಿ ದರೋಡೆ ಮಾಡಬಹುದು ಎಂದು ಸ್ಥಳ ಸಮೀಕ್ಷೆ ಮಾಡಿದ್ದಾರೆ. ಮೈಸೂರು, ಹಾಸನ, ಕೊಡಗು, ತುಮಕೂರು ಸೇರಿದಂತೆ ಇತರೆಡೆ ಅಡ್ಡಾಡಿದ್ದಾರೆ. ಎಲ್ಲಿ ಹೆಚ್ಚು ಚಿನ್ನಾಭರಣ ಸಿಗುತ್ತದೆ, ದರೋಡೆ ಮಾಡಿದ ನಂತರ ಪೊಲೀಸರ ಬಲೆಗೆ ಬೀಳದೆ ಸುಲಭವಾಗಿ ಹೇಗೆ ತಪ್ಪಿಸಿಕೊಳ್ಳಬಹುದು ಎಂದು ಹೊಂಚು ಹಾಕಿ ಪ್ಲಾನ್ ಮಾಡಿದ್ದಾರೆ.

ಅಂತಿಮವಾಗಿ ಹುಣಸೂರಿನ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್‌ನಲ್ಲಿ ದರೋಡೆ ಮಾಡಲು ನಿರ್ಧರಿಸಿದ್ದಾರೆ. ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್ ಇತ್ತೀಚೆಗೆ ತಾನೇ ಆರಂಭಗೊಂಡಿದ್ದು, ಸೆಕ್ಯೂರಿಟಿ ಕೂಡ ಇಲ್ಲದಿರುವ ಹಿನ್ನೆಲೆಯಲ್ಲಿ ದರೋಡೆಗೆ ಇದೇ ಸೂಕ್ತ ಎಂದು ಗ್ಯಾಂಗ್ ನಿರ್ಧಾರ ಮಾಡಿದೆ. ಹುಣಸೂರು ಹಾಗೂ ಪಿರಿಯಾಪಟ್ಟಣದ ಲಾಡ್ಜ್‌ಗಳಲ್ಲಿ ನಾಲ್ಕು ದಿನ ವಾಸ್ತವ್ಯ ಹೂಡಿದ್ದ ನಟೋರಿಯಸ್ ಗ್ಯಾಂಗ್, ಹಲವು ಬಾರಿ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್ ಬಳಿ ಬಂದು ಯೋಜನೆ ಕಾರ್ಯತಂತ್ರ ರೂಪಿಸಿದೆ ಎಂದರು.

ದರೋಡೆಗೆ ಮುಹೂರ್ತ ಫಿಕ್ಸ್ ಮಾಡಿದ ಗ್ಯಾಂಗ್ ಡಿ.28ರಂದು ಮಧ್ಯಾಹ್ನ 2.04 ಗಂಟೆಗೆ ಸರಿಯಾಗಿ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್‌ಗೆ ನುಗ್ಗಿದ್ದಾರೆ. ಅಲ್ಲಿನ ಸಿಬ್ಬಂದಿಗೆ ರಿವಾಲ್ವರ್ ತೋರಿಸಿ 10 ಕೋಟಿ ಮೌಲ್ಯದ 450 ವಿವಿಧ ಮಾದರಿಯ 8.34 ಕೆ.ಜಿ. ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ ಎಂದು ಆರೋಪಿಗಳು ದರೋಡೆ ಮಾಡಿದ ಕೃತ್ಯವನ್ನು ಮಲ್ಲಿಕಾರ್ಜುನ ಬಾಲದಂಡಿ ಎಳೆ ಎಳೆಯಾಗಿ ವಿವರಿಸಿದರು.

ಚಿನ್ನಾಭರಣ ದೋಚಿರುವ ಗ್ಯಾಂಗ್ ಇಬ್ಬರು ಮೂವರ ಗುಂಪುಗಳಾಗಿ ಪ್ರತ್ಯೇಕಗೊಂಡು, ಚಿನ್ನಾಭರಣ ಕೂಡ ಹಂಚಿಕೊಂಡಿದ್ದಾರೆ. ತರುವಾಯ ಅಲ್ಲಿಂದ ಬೇರೆ ಬೇರೆ ಮಾರ್ಗಗಳಲ್ಲಿ ಬಿಹಾರ ತಲುಪಿದ್ದಾರೆ.

ಉಳಿದ ಚಿನ್ನಾಭರಣ ಹಾಗೂ ಆರೋಪಿಗಳ ಪತ್ತೆಗೆ ನಮ್ಮ ಪೊಲೀಸರು ಬಿಹಾರದಲ್ಲೇ ಕಾರ್ಯಾಚರಣೆ ನಿರತರಾಗಿದ್ದಾರೆ. ಈಗ ಬಂಧಿತರಾಗಿರುವ ಪಂಕಜ್ ಕುಮಾರ್ ಹಾಗೂ ರಿಷಿಕೇಶ್‌ಕುಮಾರ್ ಸಿಂಗ್‌ನನ್ನು ಅಲ್ಲಿನ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಮ್ಮ ಕಸ್ಟಡಿಗೆ ತೆಗೆದುಕೊಳ್ಳುತ್ತೇವೆ. ನಂತರ ಮೈಸೂರಿಗೆ ಕರೆ ತಂದು ಆರೋಪಿಗಳನ್ನು ವಿಚಾರಣೆ ಮಾಡಿ, ಮತ್ತಷ್ಟು ಮಾಹಿತಿಗಳನ್ನು ಕಲೆ ಹಾಕುತ್ತೇವೆ ಎಂದು ತಿಳಿಸಿದರು.

ಪ್ರಕರಣವನ್ನು ಭೇದಿಸಲು ಅಡಿಷನಲ್ ಎಸ್ಪಿ ಎಲ್.ನಾಗೇಶ್ ನೇತೃತ್ವದ 5 ತಂಡ ರಚನೆ ಮಾಡಲಾಗಿತ್ತು. ಹುಣಸೂರು ಡಿವೈಎಸ್ಪಿ ರವಿ, ಶ್ರೀಕಾಂತ್, ಇನ್ಸ್‌ಪೆಕ್ಟರ್‌ಗಳಾದ ಸಂತೋಷ್ ಕಶ್ಯಪ್, ದೀಪಕ್, ಪುನೀತ್, ಪ್ರಸನ್ನ ಕುಮಾರ್, ಗಂಗಾಧರ್, ಸುನೀಲ್ ಸೇರಿದಂತೆ 50 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ್ದೇವೆ ಎಂದು ಹೇಳಿದರು.

ಒಂದು ಎಕರೆಯಲ್ಲಿ ಐಷರಾಮಿ ಬಂಗಲೆ; 27 ಪ್ರಕರಣದಲ್ಲಿ ಭಾಗಿ!

ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್ ದರೋಡೆ ಪ್ರಕರಣದ ಮಾಸ್ಟರ್ ಮೈಂಡ್ ಪಂಕಜ್‌ಕುಮಾರ್ ಸಿರಿವಂತ. ಬಿಹಾರದ ಬಾಗಲ್ಪುರ್‌ನಲ್ಲಿ ಸುಮಾರು ಒಂದು ಎಕರೆ ವಿಸ್ತೀರ್ಣದಲ್ಲಿ ಐಷರಾಮಿ ಬಂಗಲೆ ನಿರ್ಮಾಣ ಮಾಡಿದ್ದಾನೆ. ಈತನ ವಿರುದ್ಧ ಈ ತನಕ 27 ಪ್ರಕರಣಗಳು ದಾಖಲಾಗಿದೆ. ಕಳ್ಳತನ, ದರೋಡೆ, ಕೊಲೆ, ಸುಲಿಗೆಯಲ್ಲಿ ಭಾಗಿಯಾಗಿದ್ದಾನೆ. ದರೋಡೆ, ಸುಲಿಗೆ ಇವನ ಮೂಲ ವೃತ್ತಿಯಾಗಿದೆ. ಜೈಲಿನಲ್ಲಿದ್ದಾಗ ಬೇರೆ ಬೇರೆ ಕೈದಿಗಳ ಜೊತೆ ಸಂಪರ್ಕ ಹೊಂದಿದ್ದ ಪಂಕಜ್ ಕುಮಾರ್, ಅಪರಾಧ ಕೃತ್ಯಕ್ಕೆ ಅವರಿಂದ ಮಾಹಿತಿ ಕಲೆ ಹಾಕುತ್ತಿದ್ದನು. ಕಾರಾಗೃಹದಿಂದ ಹೊರಗೆ ಬಂದ ಮೇಲೆ ಮತ್ತೆ ಕಳ್ಳತನ, ದರೋಡೆ ಕೃತ್ಯದಲ್ಲಿ ಭಾಗಿಯಾಗಿದ್ದಾನೆ. ಹುಣಸೂರಿನ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್‌ನಲ್ಲಿ ದರೋಡೆ ನಡೆಸಲು ಗ್ಯಾಂಗ್‌ನವರಿಗೆ ಈತ ತರಬೇತಿ ನೀಡಿದ್ದನು.

ಒಂದು ಸುಳಿವಿಂದ ಸಿಕ್ಕರು!

ಸಿಸಿಟಿವಿ ಫುಟೇಜ್‌ನಲ್ಲಿದ್ದ ಮೂವರ ಮುಖ ಚಹರೆ ಆಧರಿಸಿ ತಾಂತ್ರಿಕ ವಿಧಾನದ ವಿವಿಧ ಆಯಾಮಗಳಿಂದ ತನಿಖೆ ನಡೆಸಿದರು. ಮೂವರು ಆರೋಪಿಗಳ ಮುಖ ಚಹರೆಯನ್ನು ಮೈಸೂರು ಪೊಲೀಸರು ದೇಶದ ವಿವಿಧ ರಾಜ್ಯಗಳ ಪೊಲೀಸ್ ಠಾಣೆಗೆ ರವಾನೆ ಮಾಡಿದ್ದರು. ಆ ವೇಳೆ ಬಿಹಾರ ಪೊಲೀಸರು ಈ ಮೂವರು ಮುಖ ಚಹರೆಯ ಆರೋಪಿಗಳು ನಮ್ಮ ರಾಜ್ಯದ ಅಪರಾಧಿಗಳು ಎಂದು ಮಾಹಿತಿ ನೀಡಿದ್ದರು. ಬಿಹಾರ ಗ್ಯಾಂಗ್ ಕರ್ನಾಟಕದಲ್ಲಿ ನಡೆಸಿದ ಮೊದಲ ಅಪರಾಧ ಕೃತ್ಯವಾಗಿದೆ. ಈ ಗ್ಯಾಂಗ್‌ನಲ್ಲಿರುವ ಕೆಲವರು ಅಪರಾಧ ಪ್ರಕರಣದಲ್ಲಿ ಭಾಗಿಯಾಗಿದ್ದರೂ ಈ ತನಕ ಪೊಲೀಸರ ಬಲೆಗೆ ಬಿದ್ದಿಲ್ಲ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಸ್ಥಳೀಯರ ಕೈವಾಡದ ಬಗ್ಗೆ ತನಿಖೆ: ಬಿಹಾರದಿಂದ ಹುಣಸೂರಿಗೆ ಬಂದು ದರೋಡೆ ಕೃತ್ಯ ಎಸಗಲು ಈ ಗ್ಯಾಂಗ್‌ಗೆ ಸ್ಥಳೀಯರು ಯಾರಾದರೂ ಸಹಕಾರ ನೀಡಿದ್ದಾರೆಯೇ ಎಂಬ ಬಗ್ಗೆ ಕೂಡ ತನಿಖೆ ನಡೆಸುತ್ತಿದ್ದೇವೆ. ದರೋಡೆ ಮಾಡಲೆಂದೇ ಹೊಸ ಬೈಕ್ ಖರೀದಿ ಮಾಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ತನಿಖೆ ನಡೆಯುತ್ತಿದೆ ಎಂದರು.

ನಿತಿನ್ ನಬಿನ್ ಇಂದು ಅಧಿಕಾರ ಸ್ವೀಕಾರ

ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ರಸ್ತೆ ನಿರ್ಮಾಣ ಮತ್ತು ನಗರಾಭಿವೃದ್ಧಿ ಖಾತೆಗಳನ್ನು ಹೊಂದಿದ್ದರು. ನಂತರ ಬಿಜೆಪಿಯ ಕಾರ್ಯಕಾರಿ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಆ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಿಹಾರದಲ್ಲಿ ಜೆಡಿಯು ಜೊತೆಗಿನ ಬಿಜೆಪಿಯ ಮೈತ್ರಿಯನ್ನು ಕಾಯ್ದುಕೊಳ್ಳುವಲ್ಲಿಯೂ ನಿತಿನ್ ಬಹಳ ಮುಖ್ಯ ಪಾತ್ರ ವಹಿಸಿದ್ದಾರೆ. ಬಿಹಾರದಲ್ಲಿ ಎನ್‌ಡಿಎ ಅಧಿಕಾರದಲ್ಲಿರಲು ನಿತಿನ್ ಅವರ ಕೊಡುಗೆಯೂ ಅಪಾರ. ಇದರ ಜೊತೆಗೆ ನಿತಿನ್ ನಬಿನ್ ಛತ್ತೀಸ್‌ಗಢದ ಬಿಜೆಪಿಯ ಉಸ್ತುವಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಸಚಿವ ಜೆ.ಪಿ ನಡ್ಡಾ, ಹಿರಿಯ ನಾಯಕರಾದ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಅವರೊಂದಿಗೆ ಇಂದು ಬಿಜೆಪಿ ಕಾರ್ಯಕಾರಿ ಅಧ್ಯಕ್ಷ ನಿತಿನ್ ನಬಿನ್ ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸಿದರು. ಈ ಮೂಲಕ ಅವರು ಬಿಜೆಪಿಯ 12ನೇ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ.

ಡಿಜಿಪಿ ರಾಮಚಂದ್ರರಾವ್ ರಾಸಲೀಲೆ

ಇದು ವರ್ಷದ ಹಿಂದೆ ಸೆರೆಯಾಗಿದ್ದ ವಿಡಿಯೋ ಎನ್ನಲಾಗಿದೆ.

ವರದಿಗೆ ಸಿಎಂ ಸೂಚನೆ: ಈ ಬಗ್ಗೆ ಇಂದು ಬೆಳಗಾವಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿಡಿಯೋ ಬಗ್ಗೆ ನನಗೆ ಬೆಳಗ್ಗೆಯಷ್ಟೇ ಗೊತ್ತಾಗಿದೆ. ಎಷ್ಟೇ ದೊಡ್ಡವರಾದರೂ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿ ವರದಿ ನೀಡುವಂತೆ ಗೃಹ ಇಲಾಖೆಗೆ ಸೂಚಿಸಿದ್ದೇನೆ ಎಂದರು.

ಈ ಹಿಂದೆ ತಮ್ಮ ಮಲಮಗಳು, ನಟಿ ರನ್ಯಾ ರಾವ್ ಅವರ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ರಾಮಚಂದ್ರರಾವ್ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿತ್ತು. ನಂತರ ಅವರನ್ನು ರಾಜ್ಯ ಸರ್ಕಾರ, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಮರುನೇಮಕ ಮಾಡಿತ್ತು. ರನ್ಯಾರಾವ್ ಚಿನ್ನ ಕಳ್ಳ ಸಾಗಾಣೆ ಪ್ರಕರಣದಲ್ಲೂ ರಾಮಚಂದ್ರರಾವ್ ಭಾಗಿಯಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಆಗ ಸರ್ಕಾರಕ್ಕೆ ತೀವ್ರ ಮುಜುಗರ ಆಗಿತ್ತು. ಈಗ ರಾಸಲೀಲೆ ವಿಡಿಯೋ ವೈರಲ್ ಆಗುತ್ತಲೇ ಮತ್ತೆ ಸರ್ಕಾರಕ್ಕೆ ಮುಜುಗರ ಉಂಟು ಮಾಡಿದೆ.

ಸಚಿವರ ಭೇಟಿಗೆ ಸಿಗದ ಅವಕಾಶ: ವೀಡಿಯೊ ವೈರಲ್ ಆದ ಬೆನ್ನಲ್ಲೆ ಡಿಜಿಪಿ ರಾಮಚಂದ್ರರಾವ್, ಈ ಬಗ್ಗೆ ಸ್ಪಷ್ಟನೆ ನೀಡಲೆಂದು ಗೃಹ ಸಚಿವ ಡಾ.ಪರಮೇಶ್ವರ್ ನಿವಾಸಕ್ಕೆ ಧಾವಿಸಿದ್ದಾರೆ. ಆದರೆ ಭೇಟಿಗೆ ಅವಕಾಶ ಸಿಕ್ಕಿಲ್ಲ. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಡಿಜಿಪಿ ರಾಮಚಂದ್ರರಾವ್, ಈ ಕಾಲದಲ್ಲಿ ಏನು ಬೇಕಾದರೂ ಮಾಡುವ ಸಾಧ್ಯತೆ ಇದೆ. ಎಂಟು ವರ್ಷಗಳ ಹಿಂದೆ ನಾನು ಬೆಳಗಾವಿಯಲ್ಲಿ ಇದ್ದೆ. ತಿರುಚಿದ ವಿಡಿಯೋ ವೈರಲ್ ಮಾಡಿದ್ದಾರೆ. ವಕೀಲರೊಂದಿಗೆ ಮಾತನಾಡಿದ್ದೇನೆ. ಇದು ನನ್ನ ತೇಜೋವಧೆ ಮಾಡಲು ನಡೆಸಿರುವ ವ್ಯವಸ್ಥಿತ ಷಡ್ಯಂತ್ರ. ಇದರ ಬಗ್ಗೆ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಅಜ್ಞಾತ ಸ್ಥಳಕ್ಕೆ ದೌಡು: ಈ ಎಲ್ಲಾ ಬೆಳವಣಿಗೆ ಬಳಿಕ ರಾಮಚಂದ್ರರಾವ್ 10 ದಿನ ರಜೆ ಹಾಕಿ, ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ. ಕಾನೂನಾತ್ಮಕ ಹೋರಾಟದ ಕುರಿತು ರಹಸ್ಯ ಸ್ಥಳದಲ್ಲಿ ವಕೀಲರ ತಂಡದ ಜೊತೆ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದೆ. ಮತ್ತೊಂದೆಡೆ ಮುಖ್ಯಮಂತ್ರಿಯವರೇ ಶಿಸ್ತು ಕಾನೂನು ಕ್ರಮದ ಬಗ್ಗೆ ಸ್ಪಷ್ಟವಾಗಿ ಹೇಳಿಕೆ ನೀಡಿರುವುದರಿಂದ ಯಾವುದೇ ಕ್ಷಣದಲ್ಲಿ ಅಧಿಕಾರಿಯ ಅಮಾನತು ಆದೇಶ ಹೊರ ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಕ್ರೈಂ ಬಾಕ್ಸ್

ರಾಜೀವ್‌ನಗರದಲ್ಲಿ ಮಚ್ಚು-ಲಾಂಗ್ ಹಿಡಿದು ಮಾರಾಮಾರಿ: 6 ಮಂದಿ ಬಂಧನ



ಮೈಸೂರು, ಜ. 19 (ಆರ್‌ಕೆ)- ಮೈಸೂರಿನ ರಾಜೀವ್‌ನಗರದ 2ನೇ ಹಂತದಲ್ಲಿ ಭಾನುವಾರ ಹಾಡಹಗಲೇ ಮಚ್ಚು-ಲಾಂಗ್ ಹಿಡಿದು ಗುಂಪುಗಳು ಕಾದಾಟ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಉದಯಗಿರಿ ಠಾಣೆ ಪೊಲೀಸರು ಆರು ಮಂದಿಯನ್ನು ಬಂಧಿಸಿದ್ದಾರೆ.

ಭಾನುವಾರ ಮಧ್ಯಾಹ್ನ ರಾಜೀವ್ ನಗರ 2ನೇ ಹಂತದ ಬಡಾವಣೆಯ ಪಾರ್ಕ್ ಒಂದರಲ್ಲಿ ಬಾಲಕರು ಕ್ರಿಕೆಟ್ ಆಡುತ್ತಿದ್ದಾಗ ಬಾಲ್, ಎದುರು ಮನೆಯ ಕಿಟಕಿಗೆ ಬಡಿದಿದೆ. ಅದರಿಂದ ಕೋಪಗೊಂಡ ಮನೆಯ ನಿವಾಸಿ ಹೊರ ಬಂದು ಬಾಲಕನ ತಲೆಗೆ ಹೊಡೆದು ಕಳುಹಿಸಿದ್ದರು. ಆ ಬಾಲಕ ಮನೆಗೆ ಹಿಂದಿರುಗಿ ವಿಷಯ ತಿಳಿಸಿದಾಗ ಪೋಷಕರು ಹಾಗೂ ಸಂಬಂಧಿಗಳು ಅದನ್ನು ಪ್ರಶ್ನಿಸಲೆಂದು ತಲೆಗೆ ಹೊಡೆದ ವ್ಯಕ್ತಿಯ ಬಳಿ ಬಂದ ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆದು ಗಲಾಟೆ ಆರಂಭವಾಗಿದೆ.

ಈ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆಯುಂಟಾಗಿ ಮಚ್ಚು-ಲಾಂಗ್‌ಗಳಿಂದ ಮಾರಾಮಾರಿಯೇ ನಡೆದಿದೆ. ಈ ಸಂದರ್ಭ ಗಲಾಟೆಯಲ್ಲಿ ಮೂವರು ಗಾಯಗೊಂಡಿದ್ದು, ಅವರನ್ನು ಮಣಿಪಾಲ್ ಹಾಗೂ ಪ್ರಜ್ವಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಉದಯಗಿರಿ ಠಾಣೆ ಪೊಲೀಸರು ಸ್ಥಳ ಮಹಜರು ಮಾಡಿ ವೈರಲ್ ಆಗಿದ್ದ ಗಲಾಟೆ ವೀಡಿಯೊವನ್ನು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದರು.

ಹಲ್ಲೆಗೊಳಗಾದವರು ನೀಡಿದ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ಭಾನುವಾರ ರಾತ್ರಿ 6 ಮಂದಿಯನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿದ್ದು, ಗಲಾಟೆಯಲ್ಲಿ ಭಾಗಿಯಾಗಿದ್ದರೆನ್ನಲಾದ ಇನ್ನೂ ಹಲವರನ್ನು ವಶಕ್ಕೆ ಪಡೆಯಲು ತೀವ್ರ ಶೋಧ ನಡೆಸುತ್ತಿದ್ದಾರೆ.

ಹಾಡಹಗಲೇ ಕ್ಷುಲ್ಲಕ ಕಾರಣಕ್ಕೆ ಮಚ್ಚು-ಲಾಂಗ್, ದೊಣ್ಣೆ ಇನ್ನಿತರೆ ಮಾರಕಾಸ್ತ್ರಗಳನ್ನು ಹಿಡಿದು ಕದನಕ್ಕೆ ಮುಂದಾಗಿದ್ದರಿಂದ ಸ್ಥಳೀಯ ನಿವಾಸಿಗಳು ಭಯ-ಭೀತರಾಗಿದ್ದು, ಘಟನೆಯ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ರೀತಿ ಹರಿದಾಡುತ್ತಿವೆ. ದೇವರಾಜ ಉಪ-ವಿಭಾಗದ ಎಸಿಪಿ ಕೆ.ರಾಜೇಂದ್ರ ಸಹ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೈಸೂರಿನ ಗಲ್ಲಿಯ ರಸ್ತೆಯಲ್ಲಿ ಅರಣ್ಯಾಧಿಕಾರಿ ಮೃತದೇಹ ಪತ್ತೆ

ಮೈಸೂರು, ಜ. 19 (ಆರ್‌ಕೆ)- ಮೈಸೂರಿನ ಲಷ್ಕರ್ ಮೊಹಲ್ಲಾದ ಗಲ್ಲಿಯ ರಸ್ತೆಯಲ್ಲಿ ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಓ) ಯೊಬ್ಬರ ಮೃತ ದೇಹ ಇಂದು ಬೆಳಗ್ಗೆ ಪತ್ತೆಯಾಗಿದೆ.



ಕಾಂತರಾಜ್ ಚವ್ಹಾಣ್

ಟಿ.ನರಸೀಪುರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಾಂತರಾಜ್ ಎಸ್.ಚವ್ಹಾಣ್ (35) ಆಕಸ್ಮಿಕವಾಗಿ ಸಾವನ್ನಪ್ಪಿದವರಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ ಅವರು ಸ್ಥಳಕ್ಕೆ ಧಾವಿಸಿ ಮೃತದೇಹವನ್ನು ಶವಾಗಾರಕ್ಕೆ ಸಾಗಿಸಲು ಕ್ರಮ ಕೈಗೊಂಡರು.

ಭಾನುವಾರ ರಾತ್ರಿ (ಜ.18) ಸ್ನೇಹಿತ ಮನು ಎಂಬುವವರನ್ನು ಕರೆಸಿಕೊಂಡಿದ್ದ ಚವಾಣ್ ಅವರು ಲಷ್ಕರ್ ಮೊಹಲ್ಲಾದ ಬಿ.ಎನ್. ರಸ್ತೆಯಲ್ಲಿರುವ ಲಾಡ್ಜ್‌ವೊಂದರಲ್ಲಿ ಪಾರ್ಟಿ ಮಾಡಿದ್ದರು. ತಡರಾತ್ರಿ ಇಬ್ಬರು ಹೊರ ಬಂದು ಕೆಲವೆಡೆ ಸುತ್ತಾಡಿಕೊಂಡು ಕೊಠಡಿಗೆ ಮರಳಿ ನಿದ್ದೆಗೆ ಜಾರಿದ್ದರು. ಮುಂಜಾನೆ ಮನು ಎಚ್ಚರಗೊಂಡಾಗ ಚವಾಣ್ ಹಾಸಿಗೆಯಲ್ಲಿರಲಿಲ್ಲ.

ಆದರೆ, ಇಬ್ಬರೂ ಮಲಗಲು ನಿರ್ಧರಿಸಿದ ನಂತರವೂ ಚವಾಣ್ ಲಾಡ್ಜ್‌ನಿಂದ ಹೊರ ಬಂದು ಮಧ್ಯರಾತ್ರಿ ಒಬ್ಬರೇ ಸುತ್ತಾಡುತ್ತಿದ್ದರಂತೆ. ಆ ವೇಳೆ ರಾತ್ರಿ ಗಸ್ತಿನಲ್ಲಿದ್ದ ಲಷ್ಕರ್ ಠಾಣೆ ಕಾನ್ಸ್‌ಟೇಬಲ್‌ಗಳಿಗೆ ತಾನು ಇಲ್ಲೇ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದು, ಹೋಗಿ ಮಲಗುತ್ತೇನೆ ಎಂದು ಹೇಳಿದ್ದರು ಎನ್ನಲಾಗಿದೆ.

ಇಂದು ಬೆಳಗ್ಗೆ ಲಾಡ್ಜ್ ಸಮೀಪದ ಗಲ್ಲಿಯ ರಸ್ತೆಯಲ್ಲಿ ಚವಾಣ್ ಅವರ ಮೃತದೇಹ ಪತ್ತೆಯಾಗಿದೆ. ಮೂಗಿನಲ್ಲಿ ರಕ್ತ ಸುರಿದಿರುವುದನ್ನು ಹೊರತುಪಡಿಸಿದರೆ ಮೃತದೇಹದ ಮೇಲೆ ಯಾವುದೇ ಗಾಯಗಳೂ ಕಂಡು ಬಂದಿಲ್ಲವಾದ್ದರಿಂದ ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿದೆ.

ಗಾಣಿಗನಕೊಪ್ಪಲಲ್ಲಿ ಶ್ರೀ ರಾಮೋತ್ಸವ...



ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕು ಗಾಣಿಗನಕೊಪ್ಪಲಿನಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಶ್ರೀ ರಾಮೋತ್ಸವ ಮೂರ್ತಿಯನ್ನು ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ರಾಮೇಗೌಡ, ಶ್ರೀಧರ್, ತ್ಯಾಗ, ಸೂರಿ, ರವಿ, ಶ್ರವಣ್ ಕುಮಾರ್, ಪ್ರಭು, ಮರಿಯ, ಸೀನೇಗೌಡ, ಧನು ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಖೋ-ಖೋ ತಂಡವನ್ನು ಪ್ರತಿನಿಧಿಸಿದ ಮೈಸೂರಿನ ಪ್ರತಿಭೆಗಳು

ಸಬ್ ಜೂನಿಯರ್ ನ್ಯಾಷನಲ್ ಖೋ-ಖೋ ಚಾಂಪಿಯನ್‌ಶಿಪ್‌ನಲ್ಲಿ ಮೂವರು ಅಮೋಘ ಪ್ರದರ್ಶನ

ಮೈಸೂರು, ಜ.19(ಜಿಎ)-ಇತ್ತೀಚೆಗೆ ಗುಜರಾತ್‌ನ ಸೂರತ್‌ನಲ್ಲಿ ನಡೆದ ಸಬ್ ಜೂನಿಯರ್ ನ್ಯಾಷನಲ್ ಖೋ-ಖೋ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ವಿದ್ಯಾರ್ಥಿಗಳು ಕರ್ನಾಟಕ ಖೋ-ಖೋ ತಂಡವನ್ನು ಪ್ರತಿನಿಧಿಸಿ ಗಮನ ಸೆಳೆದಿದ್ದಾರೆ.

ಏಷಿಯನ್ ಖೋ-ಖೋ ಫೆಡರೇಶನ್ ಹಾಗೂ ಇಂಡಿಯಾ ಸಂಸ್ಥೆ ವತಿಯಿಂದ ಜ.10ರಿಂದ 14ರವರೆಗೆ ಸೂರತ್‌ನಲ್ಲಿ ನಡೆದ ಸಬ್ ಜೂನಿಯರ್ ನ್ಯಾಷನಲ್ ಖೋ-ಖೋ ಚಾಂಪಿಯನ್ ಶಿಪ್‌ನಲ್ಲಿ ಮೈಸೂರಿನ ಬಸವನಗುಡಿಯಲ್ಲಿರುವ ಅಣ್ಣಯ್ಯಪ್ಪ ಭೈರವೇಶ್ವರ ಶಾಲೆಯ ವಿದ್ಯಾರ್ಥಿಗಳಾದ ಜೆ.ನಿತೇಶ್, ಆರ್.ಶಿವರಾಜ್ ಹಾಗೂ ದಕ್ಷಶ್ರೀ ಕರ್ನಾಟಕ ತಂಡ ಪ್ರತಿನಿಧಿಸಿ, ಕರ್ನಾಟಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಕರ್ನಾಟಕ ರಾಜ್ಯ ಬಾಲಕರ ತಂಡವನ್ನು ನಿತೇಶ್ ನಾಯಕತ್ವದಲ್ಲಿ ಮುನ್ನಡೆಸಿ, ಫೈನಲ್ ಪಂದ್ಯದಲ್ಲಿ ತಮಿಳುನಾಡು ತಂಡದ ವಿರುದ್ಧ ಕರ್ನಾಟಕ ತಂಡವು ಅದ್ಭುತ ಪ್ರದರ್ಶನ ನೀಡಿ ಜಯ ಸಾಧಿಸಿದ್ದು, ಶಿವರಾಜ್ ಸಹ ತಂಡವನ್ನು ಪ್ರತಿನಿಧಿಸಿ, ರಾಷ್ಟ್ರಮಟ್ಟದಲ್ಲಿ ಕರ್ನಾಟಕ ಪ್ರಥಮ ಸ್ಥಾನವನ್ನು ಗಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.



ಮೈಸೂರು ಅಣ್ಣಯ್ಯಪ್ಪ ಭೈರವೇಶ್ವರ ಶಾಲೆಯ ಆಡಳಿತ ಮಂಡಳಿ ವತಿಯಿಂದ ಮೂರು ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಶಾಲೆಯ ವಿದ್ಯಾರ್ಥಿನಿಯಾದ ದಕ್ಷಶ್ರೀ ಕರ್ನಾಟಕ ರಾಜ್ಯ ಬಾಲಕಿಯರ ತಂಡವನ್ನು ಪ್ರತಿನಿಧಿಸಿ ಅತ್ಯುತ್ತಮ ಪ್ರದರ್ಶನವನ್ನು ತೋರಿ ಬಾಲಕಿಯರ ತಂಡ ತೃತೀಯ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ.

ಮೈಸೂರಿನ ಭೈರವೇಶ್ವರನಗರದ ನಿವಾಸಿ ಜಗದೀಶ್, ಅಮೂಲ್ಯ ದಂಪತಿಯ ಪುತ್ರನಾದ ಜೆ.ನಿತೇಶ್ ಅಣ್ಣಯ್ಯಪ್ಪ ಭೈರವೇಶ್ವರ ಶಾಲೆಯ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಕಳೆದ ನಾಲ್ಕು ವರ್ಷಗಳಿಂದ ಖೋ-ಖೋದಲ್ಲಿ ಕಠಿಣ ಅಭ್ಯಾಸ ಮಾಡುತ್ತಿದ್ದಾನೆ ಅದರ ಫಲವಾಗಿ ವಲಯ, ಅಂತರ ವಲಯ, ಜಿಲ್ಲಾ, ವಿಭಾಗೀಯ ಹಾಗೂ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ಅದ್ಭುತ ಪ್ರದರ್ಶನ ನೀಡಿ ಬೆಸ್ಟ್ ಆಲ್‌ರೌಂಡರ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾನೆ. ಈಗ ಕರ್ನಾಟಕ ತಂಡದ ನಾಯಕನಾಗಿ ಅಮೋಘ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದಿದ್ದಾನೆ.

ಮೈಸೂರಿನ ಭೈರವೇಶ್ವರನಗರದ ನಿವಾಸಿ ರಘು, ಸರಸ್ವತಿ ದಂಪತಿಯ ಪುತ್ರನಾದ ಆರ್.ಶಿವರಾಜ್ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಕಳೆದ ಮೂರು ವರ್ಷಗಳಿಂದ ಖೋ-ಖೋದಲ್ಲಿ ತೊಡಗಿಸಿಕೊಂಡಿದ್ದು, ವಲಯ ಅಂತರ ವಲಯ, ಜಿಲ್ಲಾ, ವಿಭಾಗೀಯ ಹಾಗೂ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಬೆಸ್ಟ್ ಡಾರ್ಜರ್ ಪ್ರಶಸ್ತಿ ಪಡೆದುಕೊಂಡಿದ್ದು, ಕರ್ನಾಟಕ ತಂಡದಲ್ಲಿಯೂ ಉತ್ತಮ ಪ್ರದರ್ಶನ ನೀಡಿದ್ದಾನೆ.

ಮೈಸೂರಿನ ಭೈರವೇಶ್ವರನಗರದ ನಿವಾಸಿ ಆರ್.ಮಾದೇಶ್, ನಾಗಮಣಿ ದಂಪತಿಯ ಪುತ್ರಿ ದಕ್ಷಶ್ರೀ ಅಣ್ಣಯ್ಯಪ್ಪ ಭೈರವೇಶ್ವರ ಶಾಲೆಯ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಕಳೆದ ಮೂರು ವರ್ಷಗಳಿಂದ ಖೋ-ಖೋ ಅಭ್ಯಾಸ ಮಾಡುತ್ತಿದ್ದು, ವಲಯ ಅಂತರ ವಲಯ, ಜಿಲ್ಲಾ, ವಿಭಾಗೀಯ ಹಾಗೂ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ, ತಂಡ ತೃತೀಯ ಸ್ಥಾನ ಪಡೆದುಕೊಳ್ಳುವಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಮೂರು ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಕ್ರೀಡಾಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆಯನ್ನು ಗುರುತಿಸಿ, ಅಣ್ಣಯ್ಯಪ್ಪ ಭೈರವೇಶ್ವರ ಶಾಲೆಯ ಆಡಳಿತ ಮಂಡಳಿಯೂ ವಿಶೇಷವಾಗಿ ಅಭಿನಂದಿಸಿದೆ.

> “ಖೋ-ಖೋ ಆಟವನ್ನು ಕಠಿಣ ಹಾಗೂ ಶಿಸ್ತುಬದ್ಧವಾಗಿ ಅಭ್ಯಾಸ ಮಾಡಿ, ಶಾಲೆಯ ವಿದ್ಯಾರ್ಥಿಗಳು ಕರ್ನಾಟಕ ತಂಡವನ್ನು ಪ್ರತಿನಿಧಿಸಿರುವುದು ಸಂತಸದ ವಿಚಾರ. ಅದರಲ್ಲಿಯೂ ಕರ್ನಾಟಕದ ಬಾಲಕ ತಂಡ ಪ್ರಥಮ ಹಾಗೂ ಬಾಲಕಿಯರ ತಂಡ ತೃತೀಯ ಸ್ಥಾನ ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿ. ನಮ್ಮ ಶಾಲೆಯ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಮುಂದುವರೆದರೆ ಶಾಲೆಯ ಸಹಕಾರವಿರಲಿದೆ.
>
> -ಎಸ್.ಸೌಮ್ಯ, ನಿರ್ದೇಶಕಿ, ಅಣ್ಣಯ್ಯಪ್ಪ ಭೈರವೇಶ್ವರ ಶಾಲೆ

ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷರಾಗಿ ಧರ್ಮರಾಜ್ ಆಯ್ಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘದಿಂದ ಸುದ್ದಿಗೋಷ್ಠಿ ನಡೆಯಿತು.

ಮೈಸೂರು, ಜ.19(ಜಿಎ)-ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ಜಿಲ್ಲಾಧ್ಯಕ್ಷರನ್ನಾಗಿ ಕೆ.ಆರ್.ನಗರ ತಾಲೂಕಿನ ಧರ್ಮರಾಜ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ನಂಜನಗೂಡು ತಾಲೂಕು ಅಧ್ಯಕ್ಷ ಹೆಚ್.ಡಿ.ಪ್ರಸನ್ನಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ 2018-19ರಲ್ಲಿ ರಾಜ್ಯ ಸಂಘದ ನೇತೃತ್ವದಲ್ಲಿ ರವಿನಂದನ್ ಅವರನ್ನು ಜಿಲ್ಲೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಆದರೆ ಅವರು ಅಂದಿನಿಂದ ಇಂದಿನವರೆಗೂ ಜಿಲ್ಲೆಯ ಮಡಿವಾಳ ಸಮಾಜಕ್ಕೆ ಸಾಮಾಜಿಕ ನ್ಯಾಯ ಕೊಡಿಸುವುದರಲ್ಲಿ ವಿಫಲರಾಗಿದ್ದು, ರವಿನಂದನ್ ಸಮುದಾಯದ ಯಾವುದೇ ಸಭೆ ಸಮಾರಂಭಗಳನ್ನು ನಡೆಸದೇ ತಟಸ್ಥರಾಗಿರುವುದರಿಂದ ಹಾಗೂ ಅವರ ಅವಧಿಯು ಕೂಡ ಮುಗಿದಿರುವುದರಿಂದ ಜಿಲ್ಲೆಯ ಎಲ್ಲಾ ತಾಲೂಕಿನ ಅಧ್ಯಕ್ಷರು, ಕಾರ್ಯದರ್ಶಿಗಳು, ನಗರ ಘಟಕದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಂಘದ ಎಲ್ಲಾ ಪದಾಧಿಕಾರಿಗಳು ಹಲವು ಬಾರಿ ಸಭೆ ಸೇರಿ ಚರ್ಚಿಸಿ ಅಂತಿಮವಾಗಿ ಕಳೆದ ಡಿ.26ರಂದು ನಂಜನಗೂಡು ಪಟ್ಟಣದಲ್ಲಿರುವ ಮಡಿವಾಳರ ಸಮುದಾಯ ಭವನದಲ್ಲಿ ಸಭೆ ಸೇರಿ, ಚರ್ಚಿಸಿ ರವಿನಂದನ್‌ರನ್ನು ವಜಾಗೊಳಿಸಿ, ಅವಿರೋಧವಾಗಿ ಧರ್ಮರಾಜ್ ಅವರನ್ನು ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ ಎಂದರು.

ಈ ಹಿಂದಿನ ಅಧ್ಯಕ್ಷ ರವಿನಂದನ್ ವಜಾಗೊಳಿಸಿದ ಸಂಘ

ನೂತನ ಅಧ್ಯಕ್ಷರಾದ ಕೆ.ಆರ್.ನಗರ ತಾಲೂಕಿನ ಧರ್ಮರಾಜ್ ಮಾತನಾಡಿ, ರವಿನಂದನ್ ಸಮಾಜದ ಪರವಾಗಿ ಕೆಲಸ ಮಾಡದ ಹಿನ್ನೆಲೆಯಲ್ಲಿ ಎಲ್ಲಾ ಮುಖಂಡರು ಒಮ್ಮತದಿಂದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದು, ಎಲ್ಲರಿಗೂ ನಾನು ಆಭಾರಿ. 20 ವರ್ಷಗಳಿಂದ ಸಮಾಜದ ಪರವಾಗಿ ತೊಡಗಿಸಿಕೊಂಡಿದ್ದೇನೆ. ಸಮುದಾಯದ ಮುಖಂಡರು ಕೂತು ಸಭೆ ಮಾಡಲು ಯಾವುದೇ ಸ್ಥಳವಿಲ್ಲ. ಅದನ್ನು ಸದ್ಯದಲ್ಲೇ ಮಾಡುತ್ತೇವೆ. ಸಂಘದಲ್ಲಿ ಇರುವವರು ಯಾರು ಸಮುದಾಯದವನ್ನು ದುರ್ಬಳಕೆ ಮಾಡಿಕೊಳ್ಳಬೇಡಿ ಎಂದರು.

ಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಮಹದೇವು, ನಂಜುಂಡಯ್ಯ, ಜಯರಾಮ್, ಮಾಧುರಾಜ್, ಮಹದೇವ ಸ್ವಾಮಿ, ಬಸವರಾಜ್, ಅರುಣ್‌ಕುಮಾರ್, ಶಂಕರ್, ನಾಗಪ್ಪ ಶೆಟ್ಟಿ ಉಮೇಶ್, ಹರೀಶ್, ಹರೀಶ್, ಮಹೇಶ್ವರ್, ರಂಗಸ್ವಾಮಿ, ಧರಣೀಶ್, ಲೋಕೇಶ್, ದ್ರಾಕ್ಷಾಯಿಣಿ ಮತ್ತಿತರರಿದ್ದರು.

ಮಹದೇವಪುರದಲ್ಲಿ ಸುಗ್ಗಿ ಹಬ್ಬ ಆಚರಣೆ...



ಜಯ ಕರ್ನಾಟಕ ಸಂಘಟನೆ ವತಿಯಿಂದ ಮೈಸೂರಿನ ಮಹದೇವಪುರದಲ್ಲಿ ಸುಗ್ಗಿ ಹಬ್ಬ ಆಚರಿಸಲಾಯಿತು. ಪಶುಗಳಿಗೆ ಆಹಾರ ಸಾಂಸ್ಕೃತಿಕ ಕಾರ್ಯಕ್ರಮ, ಶಾಲಾ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಈ ವೇಳೆ ಸಂಘಟನೆ ಜಿಲ್ಲಾಧ್ಯಕ್ಷ ಶ್ರೀನಿವಾಸ್, ಗೌರವ ಅಧ್ಯಕ್ಷ ಗುರುಪ್ರಸಾದ್, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯಗೌಡ, ಜಿಲ್ಲಾ ಉಪಾಧ್ಯಕ್ಷ ಕಾಂತರಾಜು, ನಗರ ಅಧ್ಯಕ್ಷ ಹರ್ಷ, ಪ್ರಧಾನ ಕಾರ್ಯದರ್ಶಿ ಲಿಂಗರಾಜು, ಪದಾಧಿಕಾರಿಗಳಾದ ಶ್ರೀಧರ್, ವಿನಯ್, ರಾಜು, ಸುರೇಶ್, ರಾಧಾ, ಶಿವರಾಮೇಗೌಡ, ಸತೀಶ್, ಪ್ರಕಾಶ್, ಸಂಜಯ್, ಆಶಾ, ವರಲಕ್ಷ್ಮಿ, ನವೀನ್, ಸಚಿನ್, ಮಾಹಿ ಇನ್ನಿತರರು ಉಪಸ್ಥಿತರಿದ್ದರು.

2 ವರ್ಷಗಳಿಂದ ಸಚಿವರಿಲ್ಲದೆ ಸೊರಗಿದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಸಮುದಾಯದ ಜನರಿಗೆ ಯಾವುದೇ ಕಲ್ಯಾಣ ಕಾರ್ಯಗಳಾಗುತ್ತಿಲ್ಲ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ದ್ಯಾವಪ್ಪ ನಾಯಕ ಮಾತನಾಡಿದರು.

ಮೈಸೂರು, ಜ.19(ಜಿಎ)-ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಖಾತೆಗೆ ಸುಮಾರು 2 ವರ್ಷಗಳಿಂದ ಸಚಿವರಿಲ್ಲದ ಕಾರಣ ಸಮುದಾಯಕ್ಕಾಗಿ ಯಾವುದೇ ಕಲ್ಯಾಣ ಕಾರ್ಯಕ್ರಮ ಕೈಗೊಳ್ಳಲಾಗುತ್ತಿಲ್ಲ. ಹೀಗಾಗಿ ನಾಯಕ ಸಮುದಾಯದ ಶಾಸಕರೊಬ್ಬರಿಗೆ ಇದರ ಹೊಣೆ ನೀಡಬೇಕೆಂದು ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ಗೌರವ ಅಧ್ಯಕ್ಷ ದ್ಯಾವಪ್ಪ ನಾಯಕ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಖಾತೆ ಸಿಎಂ ಸಿದ್ದರಾಮಯ್ಯ ಅವರ ಬಳಿಯೇ ಇದೆ. ಅವರಿಗೆ ಒತ್ತಡ ಹೆಚ್ಚಾಗಿರುವುದರಿಂದಾಗಿ ಇದರತ್ತ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೂಡಲೇ ಸಿಎಂ ಸಮುದಾಯದ ಒಬ್ಬರಿಗೆ ಇದರ ಹೊಣೆ ಹೊರಿಸಬೇಕೆಂದು ಮನವಿ ಮಾಡಿದರು.

ಸುಮಾರು 2 ವರ್ಷಗಳಿಂದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಸಾಲ ಸೌಲಭ್ಯ ಸಹಾಯಧನದ ಸೌಲಭ್ಯಗಳು ಸಮುದಾಯದ ಜನತೆಗೆ ಸರಿಯಾದ ಸಮಯಕ್ಕೆ ತಲುಪುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ ಇಲಾಖೆ ಸಚಿವರು ಇಲ್ಲದಿರುವುದಾಗಿದೆ. ಈ ಹಿಂದೆ ಸಮುದಾಯದ ಮೂವರು ಸಚಿವರು ಇದ್ದರು, ಈಗ ಕೇವಲ ಓರ್ವರು ಇದ್ದಾರೆ. ಇದು ಸಮುದಾಯಕ್ಕೆ ಆಗಿರುವ ರಾಜಕೀಯ ಅನ್ಯಾಯವಾಗಿದೆ ಎಂದರು.

ಸಹಕಾರ ಸಚಿವರಾಗಿದ್ದ ಕೆ.ಎನ್. ರಾಜಣ್ಣನವರು ಯಾವುದೇ ಭ್ರಷ್ಟಾಚಾರದಲ್ಲಿ ತೊಡಗಿಲ್ಲದಿದ್ದರೂ ಏಕಾಏಕಿ ಯಾವುದೇ ಸೂಚನೆ ನೀಡದೆ ಸಚಿವ ಸ್ಥಾನಕ್ಕೆ ದಿಢೀರ್ ರಾಜೀನಾಮೆ ಪಡೆದಿದ್ದು, ಸಮುದಾಯಕ್ಕೆ ಮಾಡಿದ ದೊಡ್ಡ ಅಪಮಾನವಾಗಿದೆ. ರಾಜ್ಯ ಸರ್ಕಾರ ನಾಯಕ ಸಮುದಾಯವನ್ನು ಕಡೆಗಣಿಸುತ್ತಿದೆ. ಪಕ್ಷದ ವಿರುದ್ಧ ಹಲವರು ರಾಜರೋಷವಾಗಿ ಹೇಳಿಕೆ ನೀಡಿದರೂ ಪಕ್ಷದಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದರೆ, ರಾಜಣ್ಣ ಅವರನ್ನು ಮಾತ್ರ ಒಂದು ನೋಟಿಸ್ ನೀಡದೇ ಸಚಿವ ಸ್ಥಾನಕ್ಕೆ ರಾಜನಾಮೆ ಪಡೆದುಕೊಂಡಿದ್ದಾರೆ. ಇದರ ಪ್ರತಿಫಲ ಮುಂದೆ ಅನುಭವಿಸಬೇ ಕಾಗುತ್ತದೆ ಎಂದು ಎಚ್ಚರಿಸಿದ ಅವರು, ಕೂಡಲೇ ರಾಜಣ್ಣನವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ರಾಜ್ಯ ಕಾಂಗ್ರೆಸ್ ಪಕ್ಷದಲ್ಲಿ ಸಮುದಾಯದ 15ಕ್ಕೂ ಹೆಚ್ಚು ಶಾಸಕರಿದ್ದು, ಇವರಲ್ಲಿ ಸೂಕ್ತವಾದವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಾಧ್ಯಕ್ಷ ಪ್ರಭಾಕರ್ ಹುಣಸೂರು, ರಾಜ್ಯಾಧ್ಯಕ್ಷ ಶ್ರೀಧರ್ ಚಾಮುಂಡಿ ಬೆಟ್ಟ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೆರಹಳ್ಳಿ ಮಾದೇಶ್, ನಗರ ಅಧ್ಯಕ್ಷ ರಾಜು ಮಾರ್ಕೆಟ್, ರಾಜ್ಯ ಉಪಾಧ್ಯಕ್ಷ ಜಿ.ಡಿ.ಸ್ವಾಮಿ ಉಪಸ್ಥಿತರಿದ್ದರು.

ಪೋಕ್ಸೋ ಪ್ರಕರಣದ ಸಂತ್ರಸ್ತೆಯ ಹೆಸರು-ವಿಳಾಸ ಬಹಿರಂಗ;

ಮಾಜಿ ಸಚಿವ ಶ್ರೀರಾಮುಲು ವಿರುದ್ಧ ಎಫ್‌ಐಆರ್ ದಾಖಲು

ಬಳ್ಳಾರಿ: ಪೋಕ್ಸೋ ಸಂತ್ರಸ್ತೆ ಹೆಸರು ಮತ್ತು ವಿಳಾಸ ಬಹಿರಂಗಪಡಿಸಿದ್ದ ಮಾಜಿ ಸಚಿವ ಬಿ. ಶ್ರೀರಾಮುಲು ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.



ಬಳ್ಳಾರಿ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಮತ್ತು ಬಾಲ ನ್ಯಾಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಭಾಷಣದ ವೇಳೆ ಸಂವೇದನಾ ಶೀಲ ವಿವರ ಉಲ್ಲೇಖಿಸಿ, ಪೋಕ್ಸೋ ಕಾಯ್ದೆಯನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ. ದೂರಿನನ್ವಯ ಮಾಜಿ ಸಚಿವ ಶ್ರೀರಾಮುಲು ವಿರುದ್ಧ ಪೋಕ್ಸೋ ಅಡಿಯಲ್ಲಿ ಕೇಸ್ ದಾಖಲಾಗಿದೆ. ಜನವರಿ 17ರಂದು ನಡೆದ ಬಿಜೆಪಿಯ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡುವಾಗ ಶ್ರೀರಾಮುಲು ಅವರು ಸಂತ್ರಸ್ತೆಯ ಹೆಸರು ಹಾಗೂ ವಿಳಾಸವನ್ನು ಬಹಿರಂಗಪಡಿಸಿದ್ದರು.

ದೇಶ - ವಿದೇಶ

ದೆಹಲಿ ಮೆಟ್ರೋದಲ್ಲಿ ಅಮೆರಿಕಾ ಮಹಿಳೆಗೆ ಅಪ್ರಾಪ್ತ ಕಿರುಕುಳ

ನವದೆಹಲಿ: ಮೆಟ್ರೋ ರೈಲಿನಲ್ಲಿ ಅಪ್ರಾಪ್ತನೋರ್ವ ಅಮೆರಿಕ ಮೂಲದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿರುವ ಘಟನೆ ದೆಹಲಿಯಲ್ಲಿ ವರದಿಯಾಗಿದೆ.



ನ್ಯೂಜೆರ್ಸಿಯ ಸ್ಟೀವನ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಭಾರತ ಮೂಲದ ಪ್ರಾಧ್ಯಾಪಕ ಗೌರವ್ ಸಬ್ನಿಸ್ ತಮ್ಮ ಎಕ್ಸ್ ಖಾತೆಯಲ್ಲಿ ಸಂತ್ರಸ್ತ ಅಮೆರಿಕ ಮಹಿಳೆ ಕುರಿತ ಪೋಸ್ಟ್ ಹಂಚಿಕೊಂಡಿದ್ದಾರೆ.

ಭಾರತದಲ್ಲಿ ಸ್ನೇಹಿತನ ಮದುವೆಗೆ ಪ್ರಯಾಣಿಸಲು ಮಾಜಿ ವಿದ್ಯಾರ್ಥಿಯೊಬ್ಬರು ಸಲಹೆಗಾಗಿ ತಮ್ಮನ್ನು ಸಂಪರ್ಕಿಸಿದ್ದರು. ನಾನು ಅವರಿಗೆ ಸಂಭಾವ್ಯ ಅಪಾಯಗಳ ಕುರಿತು ಹೇಳಿದ್ದೆ. ಆದರೆ ದುರದೃಷ್ಟವಶಾತ್, ದೆಹಲಿ ಮೆಟ್ರೋದಲ್ಲಿ ಆಕೆ ಲೈಂಗಿಕ ಕಿರುಕುಳ ಎದುರಿಸಿದ್ದಾಳೆ ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ತನ್ನ ತಾಯಿ ಮತ್ತು ಸಹೋದರಿ ಜೊತೆ ಇದ್ದ ಅಪ್ರಾಪ್ತ, ಭುಜದ ಮೇಲೆ ಕೈಹಾಕಿದ. ಈ ವೇಳೆ ನನಗೆ ಆಘಾತವಾಯಿತು. ಬಳಿಕ ಎದೆಗೆ ಕೈಹಾಕಿ ಕಿರುಕುಳ ನೀಡಿದ. ಕೋಪಗೊಂಡು ಆತನನ್ನು ಗಟ್ಟಿಯಾಗಿ ತಳ್ಳಿದೆ. ಆತ ಕೆಳಗೆ ಬಿದ್ದಾಗ ಆತನ ತಾಯಿ ಜೋರಾಗಿ ಮಾತನಾಡಲು ಪ್ರಾರಂಭಿಸಿದರು ಎಂದು ಅಮೆರಿಕ ಮೂಲದ ಸಂತ್ರಸ್ತೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗಾಜಾ ಶಾಂತಿ ಮಂಡಳಿ ಸೇರಲು ಮೋದಿಗೆ ಆಹ್ವಾನ

ವಾಷಿಂಗ್ಟನ್: ಗಾಜಾ ಶಾಂತಿ ಮಂಡಳಿಯ ಭಾಗವಾಗಲು ಭಾರತವನ್ನು ಆಹ್ವಾನಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.



ಗಾಜಾದಲ್ಲಿ ಶಾಶ್ವತ ಶಾಂತಿ ಸ್ಥಾಪನೆ ಹಾಗೂ ಜಾಗತಿಕ ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ ಗಾಜಾ ಶಾಂತಿ ಮಂಡಳಿ ಸ್ಥಾಪಿಸಲಾಗುತ್ತಿದ್ದು, ಇದಕ್ಕೆ ಟ್ರಂಪ್ ಅಧ್ಯಕ್ಷರಾಗಿದ್ದಾರೆ. ಮೋದಿಗೆ ಟ್ರಂಪ್ ಬರೆದಿರುವ ಪತ್ರವನ್ನು ಭಾರತದಲ್ಲಿನ ಅಮೆರಿಕ ರಾಯಭಾರಿ ಸೆರ್ಗಿಯೋ ಗೋರ್, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಶಾಂತಿಯನ್ನು ಗಟ್ಟಿಗೊಳಿಸುವ ನಿರ್ಣಾಯಕ ಐತಿಹಾಸಿಕ ಪ್ರಯತ್ನ ಹಾಗೂ ಜಾಗತಿಕ ಸಂಘರ್ಷವನ್ನು ಪರಿಹರಿಸುವ ಹೊಸ ವಿಧಾನ ಕಂಡುಕೊಳ್ಳಲು ಆಹ್ವಾನ ನೀಡಿರುವುದು ಪ್ರಧಾನಿ ಮೋದಿ ಅವರಿಗೆ ಸಂದಿರುವ ದೊಡ್ಡ ಗೌರವವಾಗಿದೆ. ಮಂಡಳಿಯು ಸ್ಥಿರತೆ ಮತ್ತು ಸಮೃದ್ಧಿ ಸಾಧಿಸಲು ಪರಿಣಾಮಕಾರಿ ಆಡಳಿತವನ್ನು ಬೆಂಬಲಿಸುತ್ತದೆ ಎಂದು ಹೇಳಿದ್ದಾರೆ. ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವಿನ ಕದನ ವಿರಾಮ ಒಪ್ಪಂದದ ಎರಡನೇ ಹಂತದ ಭಾಗವಾಗಿ 'ಗಾಜಾ ಶಾಂತಿ ಮಂಡಳಿ' ಸ್ಥಾಪಿಸಲಾಗುತ್ತಿದೆ.

ಭಯೋತ್ಪಾದಕರೊಂದಿಗೆ ಗುಂಡಿನ ಚಕಮಕಿ; 8 ಸೈನಿಕರಿಗೆ ಗಾಯ

ಜಮ್ಮು ಕಾಶ್ಮೀರ: ಇಲ್ಲಿನ ಕಿಶ್ತ್ವಾರ್ ಜಿಲ್ಲೆಯಲ್ಲಿ ಭದ್ರತಾ ಪಡೆ ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಎಂಟು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ.



ಭಾನುವಾರ ಮಧ್ಯಾಹ್ನದಿಂದ ಕಾರ್ಯಾಚರಣೆ ನಡೆಸುತ್ತಿರುವ ಸೈನಿಕರು, ತಡರಾತ್ರಿ ಮೂರು ಜನ ಉಗ್ರಗಾಮಿಗಳನ್ನು ಸುತ್ತುವರೆದ ಸಂದರ್ಭದಲ್ಲಿ ಮುಂದಿನಿಂದ ಏಕಾಏಕಿ ಗ್ರೆನೇಡ್ ದಾಳಿ ನಡೆದಿದೆ. ಈ ವೇಳೆ ಎಂಟು ಮಂದಿ ಗಾಯಗೊಂಡಿದ್ದು, ಇವರಲ್ಲಿ ಮೂವರನ್ನು ಉಧಮ್‌ಪುರ ಸೇನಾ ನೆಲೆ ಆಸ್ಪತ್ರೆಗೆ ಹೆಲಿಕಾಪ್ಟರ್ ಮೂಲಕ ಕರೆದೊಯ್ಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಿಶ್ತ್ವಾರ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭಾರತೀಯ ಸೇನೆ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾಗ, ಭಯೋತ್ಪಾದಕರು ನಮ್ಮ ಪಡೆಗಳ ಮೇಲೆ ಗುಂಡು ಹಾರಿಸಿದ ತರುವಾಯ ಎನ್‌ಕೌಂಟರ್ ಪ್ರಾರಂಭಿಸಲಾಯಿತು. ಮಂದ್ರಲ್-ಸಿಂಗುರಾ ಬಳಿಯ ಸೋನ್ನಾರ್ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನವೂ ಗುಂಡಿನ ಚಕಮಕಿ ನಡೆದಿದೆ. ಇಲ್ಲಿ ಉಗ್ರಗಾಮಿಗಳು ಅಡಗಿ ಕುಳಿತಿದ್ದು, ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ. ಭದ್ರತಾ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿದ್ದು, ಎಚ್ಚರಿಕೆಯಿಂದ ಇರುವಂತೆ ಹಳ್ಳಿಯವರಿಗೂ ಮಾಹಿತಿ ನೀಡಲಾಗಿದೆ ಎಂದು ಸೇನಾಧಿಕಾರಿಗಳು ತಿಳಿಸಿದ್ದಾರೆ.

ಹೈಸ್ಪೀಡ್ ರೈಲುಗಳ ಡಿಕ್ಕಿ; 21 ಮಂದಿ ಸಾವು

ಸ್ಪೇನ್: ಆಂಡಲೂಸಿಯಾದ ದಕ್ಷಿಣ ಪ್ರದೇಶದಲ್ಲಿ ಎರಡು ಹೈಸ್ಪೀಡ್ ರೈಲುಗಳು ಡಿಕ್ಕಿಯಾಗಿ 21



ಪ್ರಯಾಣಿಕರು ಸಾವನ್ನಪ್ಪಿ, 70ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಮಲಗಾದಿಂದ ಮ್ಯಾಡ್ರಿಡ್‌ಗೆ ಭಾನುವಾರ ಸಂಜೆ ತೆರಳುತ್ತಿದ್ದ ಪ್ರಯಾಣಿಕ ರೈಲೊಂದು ಆಡಮುಜ್ ಬಳಿ ಹಳಿತಪ್ಪಿ, ಇನ್ನೊಂದು ಟ್ರ್ಯಾಕ್‌ನಲ್ಲಿ ಸಂಚರಿಸುವಾಗ ಎದುರುನಿಂದ ಬಂದ ಮತ್ತೊಂದು ರೈಲಿಗೆ ಅಪ್ಪಳಿಸಿದೆ ಎಂದು ಸ್ಪೇನ್‌ನ ಅದಿಫ್ ರೈಲು ನೆಟ್‌ವರ್ಕ್ ಆಪರೇಟರ್ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ 30 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಸಾರಿಗೆ ಸಚಿವ ಆಸ್ಕರ್ ಪುಯೆಂಟೆ ತಿಳಿಸಿದ್ದಾರೆ. ಅಡಮುಜ್‌ನಲ್ಲಿ ಸಂಭವಿಸಿದ ಈ ದುರಂತದಿಂದ ತೀವ್ರ ನೋವಾಗಿದೆ. ಈ ಸಂದರ್ಭದಲ್ಲಿ ದೇಶ ಸಂತ್ರಸ್ತರ ನೆರವಿಗೆ ಇದೆ ಎಂದು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಬೇಸಿಗೆ ಮುನ್ನವೇ ಅರಣ್ಯಗಳಲ್ಲಿ ಕಾಡ್ಗಿಚ್ಚು; ತಜ್ಞರ ಆತಂಕ

ಶ್ರೀನಗರ: ಚಳಿಗಾಲದಲ್ಲೇ ಹಿಮಾಲಯ, ಜಮ್ಮು-ಕಾಶ್ಮೀರ, ಉತ್ತರಾಖಂಡ ಹಾಗೂ ಚಾರ್ಮಾಡಿ ಘಾಟ್‌ನಲ್ಲಿ ಕಾಡ್ಗಿಚ್ಚು ಸಂಭವಿಸಿದ್ದು, ಈ ಹವಾಮಾನ ವೈಪರೀತ್ಯದ ಬಗ್ಗೆ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.



ಹಿಮಾಲಯದ ತಪ್ಪಲಿನಲ್ಲಿ ಕಾಡ್ಗಿಚ್ಚಿನ ಸ್ವರೂಪ ಸಂಪೂರ್ಣವಾಗಿ ಬದಲಾಗುತ್ತಿದೆ. ಹಿಂದೆ ಬೇಸಿಗೆಯ ಆರಂಭದಲ್ಲಿ ಒಣ ಎಲೆಗಳು ಮತ್ತು ಬಿಸಿ ಗಾಳಿಯಿಂದಾಗಿ ಆರಂಭವಾಗುತ್ತಿದ್ದ ಕಾಡ್ಗಿಚ್ಚು, ಈಗ ಚಳಿಗಾಲದ ಅವಧಿಯಲ್ಲೂ ತೀವ್ರವಾಗಿ ಹರಡುತ್ತಿದೆ. ಹವಾಮಾನ ವೈಪರೀತ್ಯವು ಅರಣ್ಯದ ನೈಸರ್ಗಿಕ ಚಕ್ರವನ್ನು ಏರುಪೇರು ಮಾಡಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಉತ್ತರಾಖಂಡದಲ್ಲಿ 1,756 ಬಾರಿ, ಮಹಾರಾಷ್ಟ್ರದಲ್ಲಿ 1,028, ಕರ್ನಾಟಕದಲ್ಲಿ 924, ಮಧ್ಯಪ್ರದೇಶದಲ್ಲಿ 868 ಹಾಗೂ ಛತ್ತೀಸ್‌ಗಢದಲ್ಲಿ 862 ಬಾರಿ ಕಾಡ್ಗಿಚ್ಚು ಅಲರ್ಟ್ ಬಂದಿದೆ. ಕಾಡ್ಗಿಚ್ಚು ಕಡಿಮೆ ಇರಬೇಕಾದ ಸಮಯದಲ್ಲಿ ಮೂರು ವರ್ಷಗಳಲ್ಲೇ ಅತಿ ಹೆಚ್ಚು ಬೆಂಕಿ ಅವಘಡ ಸಂಭವಿಸಿವೆ ಎಂದು 'ಫಾರೆಸ್ಟ್ ಸರ್ವೆ ಆಫ್ ಇಂಡಿಯಾ' ಸರ್ವೆ ನಡೆಸಿ ವರದಿ ಮಾಡಿದೆ. ಹವಾಮಾನ ವೈಪರೀತ್ಯದ ಜೊತೆಗೆ ಕಸ್ತೂರಿ ಮೃಗ ಬೇಟೆಗಾರರು ಹಾಗೂ ಅರಣ್ಯದಂಚಿನ ಹೊಲಗಳಲ್ಲಿ ಕಳೆ ಸುಡುವುದೂ ಕಾಡ್ಗಿಚ್ಚಿಗೆ ಕಾರಣ ಎನ್ನಲಾಗಿದೆ.

ದೈವ ನರ್ತನ ಮಾಡುವವರ ವಿರುದ್ಧ ಕ್ರಮಕ್ಕೆ ಮಹಾಸಭೆ ಆಗ್ರಹ



ದೈವ ಆರಾಧಕರ ಸಂಘದ ಮಹಾಸಭೆಯನ್ನು ಗಣ್ಯರು ಉದ್ಘಾಟಿಸಿದರು.

ಮಡಿಕೇರಿ, ಜ.19–ಕಾರ್ಯಕ್ರಮಗಳಲ್ಲಿ ದೈವ ನರ್ತನಗಳ ಬಳಕೆಯನ್ನು ತೀವ್ರವಾಗಿ ವಿರೋಧಿಸುವುದಲ್ಲದೆ, ಇದರ ವಿರುದ್ಧ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಜಿಲ್ಲಾ ದೈವ ಆರಾಧಕರು ಮತ್ತು ದೈವ ನರ್ತಕರ ಸಂಘದ ಮಹಾಸಭೆ ನಿರ್ಣಯ ಕೈಗೊಂಡಿದೆ.

ನಗರದ ಬಾಲಭವನದ ಸಭಾಂಗಣದಲ್ಲಿ ನಡೆದ ಮಹಾಸಭೆಯಲ್ಲಿ ಪಾಲ್ಗೊಂಡ ದೈವ ಆರಾಧಕರು ಹಾಗೂ ದೈವ ನರ್ತಕರು, ಇತ್ತೀಚಿನ ದಿನಗಳಲ್ಲಿ ತಮ್ಮ ಭಾವನೆಗೆ ಧಕ್ಕೆಯಾಗುತ್ತಿರುವುದನ್ನು ಪ್ರಸ್ತಾಪಿಸಿ ಕಾರ್ಯಕ್ರಮಗಳಲ್ಲಿ ದೈವ ನಿಂದನೆ, ಅವಮಾನ, ಅಪಹಾಸ್ಯವಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಸದಾಶಿವ ರೈ, ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ದೈವ ನರ್ತನದ ಕಾರ್ಯಕ್ರಮಗಳೇ ನಡೆಯುತ್ತಿದ್ದು ದೈವಕ್ಕೆ ಅಪಹಾಸ್ಯ ಮಾಡಿದಂತಾಗುತ್ತಿದೆ. ಅಲ್ಲದೆ ದೈವ ಆರಾಧಾಕರ ಭಾವನೆಗೆ ಧಕ್ಕೆಯಾಗುತ್ತಿದೆ. ಆದ್ದರಿಂದ ದೈವ ನಂಬಿಕೆಗೆ ವಿರುದ್ಧವಾದ ಕಾರ್ಯಕ್ರಮಗಳನ್ನು ಆಯೋಜಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು ಎಂದರು.

ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ.ರವಿ ಪ್ರಸಿದ್ಧ ದೈವ ನರ್ತಕ ಬೊಳಿಮಜಲು ಜಯರಾಮ್, ಪ್ರಮುಖರಾದ ಪವನ್ ಮೊಗೇರ, ಮಂಜುನಾಥ್ ಪೂಜಾರಿ, ಮಂಜುನಾಥ ಕತ್ತಲೆಕಾಡು, ರಾಜೀವ ಲೋಚನ್, ಹರೀಶ್ ಜಿ.ಆಚಾರ್ಯ, ಧರ್ಮಪ್ಪ ಅಡ್ಡಾನಪರೆ ಮಾತನಾಡಿದರು.

ಸುಳ್ಯ, ಸುಬ್ರಹ್ಮಣ್ಯ, ಹುಣಸೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳ ದೈವ ಆರಾಧಕರು ಹಾಗೂ ದೈವ ನರ್ತಕರು ಮಹಾಸಭೆಯಲ್ಲಿ ಪಾಲ್ಗೊಂಡಿದ್ದರು.

ಹಿರಿಯ ಸಲಹೆಗಾರರಾದ ಕೆ.ಕೆ. ದೇವಪ್ಪ, ವಿದ್ಯಾಶ್ರೀ ಪಡುಮಲೆ, ಹಿರಿಯ ಸದಸ್ಯ ರಾಜು ರೈ ಸುಂಟಿಕೊಪ್ಪ, ಖಜಾಂಚಿ ಜನಾರ್ಧನ ಪೂಜಾರಿ, ದೈವ ಆರಾಧಕಿ ಸುಮ ಕೆದಮುಳ್ಳೂರು, ಲೀಲಾ ಶೇಷಮ್ಮ ಉಪಸ್ಥಿತರಿದ್ದರು.

ಮೇ ನಂತರ ಟಾರು ಘಟಕಗಳ ಸ್ಥಳಾಂತರಕ್ಕೆ ನಿರ್ಧಾರ



ವಿರಾಜಪೇಟೆ, ಜ.19–ಹಾತೂರು ಗ್ರಾಪಂ, ವ್ಯಾಪ್ತಿಯ ಈಚೂರು ಗ್ರಾಮದಲ್ಲಿನ ಮೂರು ಟಾರು ಘಟಕಗಳಿಂದ ತೀವ್ರ ವಾಯುಮಾಲಿನ್ಯವಾಗುತ್ತಿದ್ದು, ಮೇ.31 ರ ನಂತರ ಸ್ಥಳಾಂತರಿಸುವ ಬಗ್ಗೆ ತೀರ್ಮಾನಿಸಲಾಯಿತು

2017ರಲ್ಲಿ ನವೀನ್ ಹಾಗೂ ತಿಮ್ಮಯ್ಯ ಎಂಬವರಿಗೆ ಘಟಕ ಆರಂಭಿಸಲು ಅನುಮತಿ ನೀಡಲು ವಾಸ್ತವವಾಗಿ ಗ್ರಾ ಪಂಗೆ, ಅವಕಾಶವಿಲ್ಲವಾದರೂ ನೀಡಿದ್ದಾರೆ. 2021ರಿಂದ ಕೈಗಾರಿಕ ಘಟಕದ ರೀತಿ ಭೂ ಪರಿವರ್ತನೆ ನಿಯಮಾನುಸಾರ ಮಾಡಿಕೊಂಡು ಟಾರು ಘಟಕ ಮತ್ತು ಕಾಂಕ್ರೀಟ್ ಮಿಶ್ರಣ ಘಟಕ ನಡೆಸುತ್ತಿದ್ದಾರೆ. 2024ರಲ್ಲಿ ಗ್ರಾಮಸ್ಥರ ವಿರೋಧದಿಂದಾಗಿ ಗ್ರಾಪಂ ಘಟಕದ ಪರವಾನಿಗೆ ನವೀಕರಿಸಿಲ್ಲ. ಅದಕ್ಕೆ ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆ ತಂದು ಕೆಲಸ ಮುಂದುವರೆಸಿದ್ದಾರೆ. ಗ್ರಾಮಸ್ಥರು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿದ್ದಾರೆ. ಅದರಿಂದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲು ಸಭೆ ಕರೆದಿರುವುದಾಗಿ ಶಾಸಕ ಪೊನ್ನಣ್ಣ ಹೇಳಿದರು.

ಗ್ರಾಮಸ್ಥರಾದ ತಾತೀರ ಬೋಪಯ್ಯ, ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್‌ಗಣಪತಿ ಮಾತನಾಡಿದರು. ಚರ್ಚೆ ನಡೆದು ಕೊನೆಯಲ್ಲಿ ಶಾಸಕರು ಪ್ರಕರಣ ನ್ಯಾಯಾಲಯದಲ್ಲಿದ್ದರೂ ಅದರ ಹೊರಗೆ ತೀರ್ಮಾನಿಸಿಕೊಳ್ಳಿ ಮೇ31ರ ಬಳಿಕ ಘಟಕವನ್ನು ಮುಚ್ಚಿ ಗ್ರಾಮಸ್ಥರಿಗೆ ಸಹಕರಿಸುವಂತೆ ಕೋರಿದಾಗ ಎಲ್ಲರೂ ಸಮ್ಮತಿಸಿದರು.

ಕಾಂಕ್ರೀಟ್ ಘಟಕದಿಂದ ಮಾಲಿನ್ಯ ಆಗದಂತೆ ನೋಡಿಕೊಳ್ಳಬೇಕೆಂದು ವಾಯುಮಾಲಿನ್ಯ ಅಧಿಕಾರಿ ರಘುರಾವ್ ಸೂಚಿಸಿ ಇದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳುತ್ತಾರೆ. ಜನರಿಗೆ ತೊಂದರೆ ಆಗದಂತೆ ಘಟಕವನ್ನು ಬೆಳಿಗ್ಗೆ 8 ರಿಂದ ಸಂಜೆ 6ರವರೆಗೆ ನಡೆಸುವಂತೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಸೋಮಶೇಖರ್, ಎ ಸಿ ನಿತೀನ್ ಚಕ್ಕಿ, ತಾ ಪಂ ಇ ಓ ಅಪ್ಪಣ್ಣ, ತಹಸೀಲ್ದಾರ್ ನವೀನ್, ಎಸಿಫ್ ಕಂಬೆಯಂಡ ಗೋಪಾಲ್, ಡಿವೈ ಎಸ್‌ಪಿ, ಮತ್ತಿತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಗುಂಡು ಹಾರಿಸಿಕೊಂಡು ವೃದ್ಧ ಆತ್ಮಹತ್ಯೆ

ಮಡಿಕೇರಿ, ಜ.19–ಗುಂಡು ಹೊಡೆದುಕೊಂಡು ವೃದ್ಧರೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಸೋಮವಾರಪೇಟೆ ತಾಲೂಕಿನಲ್ಲಿ ನಡೆದಿದೆ. ತೋಳೂರು ಶೆಟ್ಟಳ್ಳಿ ಗ್ರಾಪಂ ವ್ಯಾಪ್ತಿಯ ನಡ್ಲುಕೊಪ್ಪ ಗ್ರಾಮದ ನಿವಾಸಿ ಟಿ.ಕೆ ಸುಬ್ಬಯ್ಯ(78) ಎಂಬವರೇ ಆತ್ಮಹತ್ಯೆ ಮಾಡಿಕೊಂಡವರು. ಇವರು ಕೆಲ ಸಮಯಗಳಿಂದ ಕಾಲು ನೋವಿನಿಂದ ಬಳಲುತ್ತಿದ್ದು, ಇದರಿಂದ ಮನನೊಂದು ಸೋಮವಾರ ಮುಂಜಾನೆ ಮನೆ ಬಳಿಯೇ ಒಂಟಿ ನಳಿಕೆ ಬಂದೂಕಿನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಘಟನಾ ಸ್ಥಳಕ್ಕೆ ಸೋಮವಾರಪೇಟೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಕೃತ್ಯಕ್ಕೆ ಬಳಸಿದ್ದ ಬಂದೂಕನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ

ಜಮ್ಮಬಾಣೆ ಸಮಸ್ಯೆ ಬಗ್ಗೆ ಮಾಜಿ ಶಾಸಕರಿಂದ ದಾರಿ ತಪ್ಪಿಸುವ ಕೆಲಸ : ಆರೋಪ

ಗೋಣಿಕೊಪ್ಪ, ಜ.19– ಜಮ್ಮಬಾಣೆ ಸಮಸ್ಯೆಯ ಬಗ್ಗೆ ಮಾಜಿ ಶಾಸಕ ಕೆ.ಜಿ ಬೋಪಯ್ಯ ಜನರಲ್ಲಿ ಗೊಂದಲ ಸೃಷ್ಟಿಸಿ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಮಾಯಮುಡಿ ಗ್ರಾಪಂ ಅಧ್ಯಕ್ಷ ಟಾಟು ಮೊಣ್ಣಪ್ಪ ಆರೋಪಿಸಿದ್ದಾರೆ.

ಶಾಸಕ ಎ.ಎಸ್.ಪೊನ್ನಣ್ಣ ಅವರ ಪರಿಶ್ರಮದಿಂದ ಜಮ್ಮಬಾಣೆ ಸಮಸ್ಯೆ ಪರಿಹಾರ ಕಂಡುಕೊಂಡಿದೆ. ವಿರೋಧ ಪಕ್ಷದಲ್ಲಿ ಶಾಸಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಕೊಡಗಿನ ಅಭಿವೃದ್ಧಿ ದೃಷ್ಟಿಯಿಂದ ಸಲಹೆ ಸೂಚನೆಗಳನ್ನು ನೀಡುವ ಬದಲು ಮಾಜಿ ಶಾಸಕರು ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಜಮ್ಮಬಾಣೆಯ ಬಗ್ಗೆ ಶಾಸಕರು ಅಂಕಿ ಅಂಶಗಳನ್ನು ಪ್ರಕಟಿಸಿದ್ದಾರೆ. ಇದರ ಬಗ್ಗೆ ಉತ್ತರಿಸದೆ, ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಬಿ.ಶೆಟ್ಟಿಗೇರಿ ಗ್ರಾಪಂ ಅಧ್ಯಕ್ಷ ಕೊಲ್ಲೀರ ಬೋಪಣ್ಣ ಮಾತನಾಡಿ, ಮಾಧ್ಯಮದ ಮೂಲಕ ತಪ್ಪು ಮಾಹಿತಿ ನೀಡಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿ, ತಪ್ಪು ಮಾಹಿತಿ ನೀಡಿ ಜನಾಂಗಗಳಲ್ಲಿ ಒಡಕು ಮೂಡಿಸುತ್ತಿದ್ದಾರೆ ಎಂದರು. ಗ್ರಾಪಂ ಅಧ್ಯಕ್ಷ ಕುಲ್ಲ ಚಂಡ ಪ್ರಮೋದ್ ಗಣಪತಿ, ಪೊನ್ನಂಪೇಟೆ ಗ್ರಾಪಂ ಅಧ್ಯಕ್ಷ ಅಣ್ಣೀರ ಹರೀಶ್ ಇದ್ದರು.

ಬೀದಿಬದಿ ವ್ಯಾಪಾರಿಗಳ ಕಾಂಗ್ರೆಸ್ ಘಟಕ ಅಸ್ತಿತ್ವಕ್ಕೆ



ಬೀದಿ ಬದಿ ವ್ಯಾಪಾರಿಗಳ ಘಟಕವನ್ನು ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಿದರು

ಕುಶಾಲನಗರ, ಜ.19–ಬೀದಿ ಬದಿ ವ್ಯಾಪಾರಿಗಳು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ಶಾಸಕ ಡಾ.ಮಂತರ್ ಗೌಡ ಹೇಳಿದರು.

ಪ್ರದೇಶ ಕಾಂಗ್ರೆಸ್ ಬೀದಿ ಬದಿ ವ್ಯಾಪಾರಿಗಳ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿ, ಹಲವಾರು ಸಮಸ್ಯೆಗಳನ್ನು ಬೀದಿ ಬದಿ ವ್ಯಾಪಾರಿಗಳು ಅನುಭವಿಸುತ್ತಿದ್ದಾರೆ. ಆ ನಿಟ್ಟಿನಲ್ಲಿ ಪಕ್ಷದಲ್ಲಿ ಬೀದಿ ಬದಿ ವ್ಯಾಪಾರಿಗಳ ಘಟಕವನ್ನು ಸ್ಥಾಪಿಸುವ ಮೂಲಕ ಅವರಿಗೆ ಬೆನ್ನೆಲುಬಾಗಿ ನಿಂತು ಅಗತ್ಯ ಸಹಕಾರ ನೀಡಲಾಗುತ್ತಿದೆ

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್ ಮಾತನಾಡಿ, ತಾಜಾ ವಸ್ತುಗಳು ಸಿಗುವ ಬೀದಿಬದಿ ವ್ಯಾಪಾರಿಗಳು ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅವರ ಸಂಕಷ್ಟಕ್ಕೆ ರಾಜ್ಯ ಸರ್ಕಾರ ಶಾಸನ ಬದ್ಧವಾಗಿ ಅಭಯಹಸ್ತ ನೀಡಿದೆ ಎಂದರು. ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್ ಮಾತನಾಡಿ, ಬೀದಿಬದಿ ವ್ಯಾಪಾರಿಗಳು ತಮ್ಮ ಮುಂದಿನ ಭವಿಷ್ಯಕ್ಕೆ ಹಣವನ್ನು ಕೂಡಿಟ್ಟುಕೊಳ್ಳಬೇಕು. ಸರಕಾರದಿಂದ ದೊರೆಯುವ ಸಾಲ ಸೌಲಭ್ಯವನ್ನು ಸಕಾಲಕ್ಕೆ ಮರು ಪಾವತಿ ಮಾಡುವ ಮೂಲಕ ಅತಿ ಹೆಚ್ಚಿನ ಸಾಲ ಪಡೆದು ವ್ಯಾಪಾರ ಅಭಿವೃದ್ಧಿಪಡಿಸಬೇಕು ಎಂದರು.

ಪ್ರದೇಶ ಕಾಂಗ್ರೆಸ್ ಬೀದಿಬದಿ ವ್ಯಾಪಾರಿಗಳ ಜಿಲ್ಲಾಧ್ಯಕ್ಷ ಎಸ್.ಆದಂ ಅಧ್ಯಕ್ಷತೆ ವಹಿಸಿದ್ದರು. ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ಗೋವಿಂದಪ್ಪ, ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಬ್ಲಾಕ್ ಅಧ್ಯಕ್ಷ ಅಬ್ದುಲ್ ರಜಾಕ್, ಪುರಸಭೆ ಮಾಜಿ ನಾಮ ನಿರ್ದೇಶಿತ ಸದಸ್ಯ ಎಸ್.ಎಂ. ಪ್ರಕಾಶ್, ಬೀದಿಬದಿ ವ್ಯಾಪಾರಿಗಳ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸಲೀನಾ ಪೇದ್ರು, ಬೀದಿಬದಿ ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ ಜಗದೀಶ್ ಇದ್ದರು.

ಆತ್ಮಸ್ಥೈರ್ಯದಿಂದ ಸಾಧನೆ ಮಾಡಲು ಸಾಧ್ಯ



ಕಾರ್ಯಾಗಾರವನ್ನು ಹಿರಿಯ ವಕೀಲ ಎಚ್.ಎಸ್.ಚಂದ್ರಮೌಳಿ ಉದ್ಘಾಟಿಸಿದರು

ಮಡಿಕೇರಿ, ಜ.19–ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಇದ್ದರೆ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಹೈಕೋರ್ಟ್‌ನ ಹಿರಿಯ ವಕೀಲ ಎಚ್.ಎಸ್.ಚಂದ್ರಮೌಳಿ ಅಭಿಪ್ರಾಯಪಟ್ಟಿದ್ದಾರೆ

ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮೀಜಿಯವರ ಸಂಸ್ಮರಣೆ ದಾಸೋಹ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಶನಿವಾರಸಂತೆ ಮತ್ತು ಕೊಡ್ಲಿಪೇಟೆ ಹೋಬಳಿ ಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಸಂಬಂಧ 'ನಾನು ಮತ್ತು ಪರೀಕ್ಷೆ' ಎಂಬ ಕಾರ್ಯಾಗಾರವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಶಿಕ್ಷಣ ಕಲಿಕೆಯ ಜೊತೆಯಲ್ಲಿ ಕಷ್ಟ ನೋವಿನ ಅರಿವು ಇರಬೇಕು ಕೀಳರಿಮೆಯನ್ನು ಬಿಟ್ಟು ಆತ್ಮವಿಶ್ವಾಸದ ಮತ್ತು ಆತ್ಮಸ್ಥೈರ್ಯದ ಮನೋಭಾವನೆಯನ್ನು ಬೆಳೆಸಿಕೊಂಡರೆ ಸಾಧನೆಗೆ ಸಹಕಾರಿಯಾಗುತ್ತದೆ ಎಂದರು

ಮನೆಹಳ್ಳಿ ಮಠದ ಮಠಾಧೀಶ ಮತ್ತು ಅನಘ ಫೌಂಡೇಶನ್ ಅಧ್ಯಕ್ಷ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ ಕಾರ್ಯಾಗಾರದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಹತ್ತನೆ ತರಗತಿ ಶಿಕ್ಷಣ ಬದುಕಿನ ಪ್ರಥಮ ಮೆಟ್ಟಿಲು ಆಗಿರುತ್ತದೆ ಯಾವುದೆ ಹಿಂಜರಿಕೆ ಇಲ್ಲದೆ ಪರೀಕ್ಷೆ ಬರೆಯಬೇಕು ಎಂಬ ಉದ್ದೇಶದಿಂದ ಮೂಲ ಗುರುಗಳ ಹೆಸರಿನಲ್ಲಿ ಹತ್ತನೆ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಬಗ್ಗೆ ಕಾರ್ಯಾಗಾರ ಹಮ್ಮಿಕೊಂಡಿದ್ದೇವೆ ಎಂದರು.

ಸೋಮವಾರಪೇಟೆ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ವಕೀಲ ಜಗದೀಶ್ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿ ಎ.ಎಚ್.ಸಾಗರ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಜಿ.ಎಂ. ಕಾಂತರಾಜ್, ಪತ್ರಕರ್ತ ಎಸ್. ಮಹೇಶ್, ಶನಿವಾರಸಂತೆ ಕ್ಲಸ್ಟರ್ ಸಿಆರ್‌ಪಿ ಸಿ.ಕೆ.ದಿನೇಶ್, ಕೊಡ್ಲಿಪೇಟೆ ಕ್ಲಸ್ಟರ್ ಸಿಆರ್‌ಪಿ ರವೀಶ್, ಉಪನ್ಯಾಸಕ ಕೆ.ಪಿ.ಜಯಕುಮಾರ್, ಪ್ರಮುಖರಾದ ಎಸ್.ಸಿ.ಶರತ್ ಶೇಖರ್, ಡಿ.ಬಿ.ಧರ್ಮಪ್ಪ ಮುಂತಾದವರಿದ್ದರು.

ಕೊಡಗು ಗೌಡ ಸಮಾಜದ ಅಧ್ಯಕ್ಷ ಅವಿರೋಧ ಆಯ್ಕೆ



ಮೈಸೂರಿನ ಕೊಡಗು ಗೌಡ ಸಮಾಜದ ನೂತನ ಆಡಳಿತ ಮಂಡಳಿ.

ನಾಪೋಕ್ಲು, ಜ.19 (ದುಗ್ಗಳ)– ಮೈಸೂರಿನ ಕೊಡಗು ಗೌಡ ಸಮಾಜದ ಅಧ್ಯಕ್ಷರಾಗಿ ಕೊಂ ಬಾರನ ಬಸಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಮಾಜದಲ್ಲಿ ಜರುಗಿದ ವಾರ್ಷಿಕ ಮಹಾಸಭೆ ಹಾಗೂ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಕೊಂ ಬಾರನ ಬಸಪ್ಪನವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಅವರೊಂದಿಗೆ ಉಪಾಧ್ಯಕ್ಷರಾಗಿ ಚಂಡೀರ ಬಸಪ್ಪ, ಕಾರ್ಯದರ್ಶಿಯಾಗಿ ಪೊನ್ನೆಟಿ ನಂದ, ಖಜಾಂಚಿಯಾಗಿ ಉಳುವಾರನ ಸುರೇಶ್, ಸಹ ಕಾರ್ಯದರ್ಶಿಯಾಗಿ ನಡುಮನೆ ಚಂಗಪ್ಪನವರು ಆಯ್ಕೆಯಾದರು. ಆಡಳಿತ ಮಂಡಳಿಯ ನಿರ್ದೇಶಕರಾಗಿ ನಡುವಟ್ಟಿರ ಲಕ್ಷ್ಮಣ್, ಪಟ್ಟಡ ಶಿವಕುಮಾರ್, ಹೊಸೂರು ರಾಘವಯ್ಯ, ಕುಂಟು ಪುಣಿ ರಮೇಶ್, ಮೊಟ್ಟನ ಕೌಶಿಕ್, ಹಾಗೂ ಮಹಿಳಾ ನಿರ್ದೇಶಕರಾಗಿ ಕುಂಟುಪುಣಿ ಶೀಲ, ಚಪ್ಪೇರ ಯಮುನಾ, ಶಂಕರನ ಶ್ಯಾಮಲ ಆಯ್ಕೆಯಾಗಿದ್ದಾರೆ.

ಕರ್ನಾಟಕ ಕ್ರೀಡಾಕೂಟದಲ್ಲಿ ಪ್ರಜ್ಞಾಗೆ ಕಂಚಿನ ಪದಕ



ಮಡಿಕೇರಿ, ಜ.19– ತುಮಕೂರಿನಲ್ಲಿ ನಡೆದ ಕರ್ನಾಟಕ ಕ್ರೀಡಾಕೂಟದಲ್ಲಿ ಟೇಕ್ವಾಂಡೋ ವಿಭಾಗದಲ್ಲಿ ನಗರದ ಮರ್ಕರ ಟೇಕ್ವಾಂಡೋ ಕ್ಲಬ್‌ನ ವಿದ್ಯಾರ್ಥಿ ಎನ್.ಕೆ.ಪ್ರಜ್ಞಾ ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾಳೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಂಪಿಕ್ ಸಂಸ್ಥೆಯ ಸಹಯೋಗದಲ್ಲಿ 6 ದಿನಗಳ ಕಾಲ ನಡೆದ ಪಂದ್ಯಾವಳಿಯಲ್ಲಿ ಅಂಡರ್ 73 ಕೆ.ಜಿ ವಿಭಾಗದಲ್ಲಿ ಎನ್.ಕೆ.ಪ್ರಜ್ಞಾ ಜಿಲ್ಲೆಯನ್ನು ಪ್ರತಿ ನಿಧಿಸಿದ್ದಳು. ಈಕೆ ನಗರದ ದೇಚೂರು ನಿವಾಸಿ ಎನ್.ಎನ್. ಕುಶಾಲ್ ಕುಮಾರ್ ಹಾಗೂ ಸಿ.ಪುಷ್ಪಲತ ದಂಪತಿಯ ಪುತ್ರಿ.

ರಾಜ್ಯ ಸರ್ಕಾರದಿಂದ ಕ್ರೀಡೆಗೆ ಹೆಚ್ಚಿನ ಒತ್ತು: ಶಾಸಕ ಎಆರ್‌ಕೆ



ಬಾಲ್ ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್‌ಶಿಪ್‌ಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಚಾಮರಾಜನಗರ, ಜ.19– 2036ರ ವೇಳೆಗೆ ದೇಶದಲ್ಲಿ ಒಲಂಪಿಕ್ ನಡೆಸಲು ಅವಕಾಶ ನೀಡುವಂತೆ ಕೇಂದ್ರ ಸರ್ಕಾರ ಒಲಂಪಿಕ್ ಸಂಸ್ಥೆಗೆ ಮನವಿ ಮಾಡಿಕೊಂಡಿದೆ. ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚು ಒತ್ತು ನೀಡಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಚಾಮರಾಜನಗರ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ ಇವರ ಸಹಯೋಗದಲ್ಲಿ ಆಯೋಜಿಸಿರುವ ಎರಡು ದಿನಗಳ ಕರ್ನಾಟಕ ರಾಜ್ಯ ಮಟ್ಟದ ಜೂನಿಯರ್ಸ್ ಬಾಲಕ ಹಾಗೂ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಜಿಲ್ಲಾ ಕೇಂದ್ರಕ್ಕೆ ಈಜುಕೊಳ ಮಂಜೂರು ಮಾಡಿದ್ದಾರೆ. ಅವರಿಗೆ ಜಿಲ್ಲೆ ಜನತೆಯ ಪರವಾಗಿ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇಗೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾ ಸಚಿವರಾಗಿರುವುದರಿಂದ ನಿಮ್ಮ ಅಸೋಸಿಯೇಷನ್‌ನಿಂದ ಮನವಿ ಸಲ್ಲಿಸಿದರೆ, ಪ್ರಸ್ತಾವನೆ ಸರ್ಕಾರಕ್ಕೆ ಹೋದರೆ ಖಂಡಿತವಾಗಿ ಕ್ರಿಯಾ ಯೋಜನೆಗೆ ಅವಕಾಶವಾಗುತ್ತದೆ ಎಂದರು.

2036ಕ್ಕೆ ದೇಶದಲ್ಲಿ ಒಲಂಪಿಕ್ ನಡೆಸಲು ಕೇಂದ್ರ ಸರ್ಕಾರ ಒಲಂಪಿಕ್ ಸಂಸ್ಥೆಗೆ ಮನವಿ ಮಾಡಿದೆ ಹೀಗಾಗಿ ಇಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳು ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುವಾಗಿ ಹೊರಹೊಮ್ಮಬೇಕು ಎಂದರು.

ಜಿಲ್ಲೆಯಲ್ಲಿ ಮೂವರಿಗೆ ರಾಷ್ಟ್ರ ಮಟ್ಟದ ಏಕಲವ್ಯ ಪ್ರಶಸ್ತಿ ಲಭಿಸಿದೆ. ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಸಿದ್ದಯ್ಯನಪುರದ ವಿದ್ಯಾರ್ಥಿ ಚಂದನ್ ವಿಜೇತರಾಗಿ ಜಿಲ್ಲೆಗೆ ಕೀತಿ ತಂದಿದ್ದಾನೆ. ಗ್ರಾಮೀಣ ಮಕ್ಕಳಿಗೂ ತರಬೇತಿ ಕೊಟ್ಟರೆ ಉತ್ತಮವಾಗಿ ಹೊರಹೊಮ್ಮುತ್ತಾರೆ ಎಂಬುದಕ್ಕೆ ಇವರು ಒಂದು ನಿದರ್ಶನ. ಕ್ರೀಡೆ ವ್ಯಕ್ತಿಯ ದೈಹಿಕ, ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗಿದೆ ಎಂದರು.

ಅಸೋಸಿಯೇಷನ್ ಉಪಾಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಪಟುಗಳ ತವರೂರಾಗಿದೆ. ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯನ್ನು ಒಲಂಪಿಕ್ಸ್‌ಗೆ ಸೇರಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು.

ಉಪಾಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಶಾಶ್ವತವಾದ ಕ್ರೀಡಾ ಅಂಕಣ, ಕುಡಿಯುವ ನೀರು ವ್ಯವಸ್ಥೆ, ಷಟಲ್ ಬ್ಯಾಡ್ಮಿಂಟನ್ ಸಿಂಥೆಟಿಕ್ ಮ್ಯಾಟ್ ಅಳವಡಿಸಿಕೊಡಬೇಕು ಎಂದು ಮನವಿ ಮಾಡಿದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸುರೇಶ್, ಉದ್ಯಮಿ ಶ್ರೀನಿಧಿ ಕುದರ್ ಮಾತನಾಡಿದರು. ಈ ವೇಳೆ ಅಸೋಸಿಯೇಷನ್ ಖಜಾಂಚಿ ಮಹದೇವು, ಏಕಲವ್ಯ ಪ್ರಶಸ್ತಿ ಪುರಸ್ಕೃತ ಸುದರ್ಶನ, ನಿವೃತ್ತ ದೈಹಿಕ ಶಿಕ್ಷಕ ಎಂ.ಮಲ್ಲಪ್ಪ, ತಾಲೂಕು ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಚಿಕ್ಕಬಸವಯ್ಯ, ಕೆಇಬಿ ಲೆಕ್ಕಾಧಿಕಾರಿ ಎನ್. ಮಹೇಶ್, ಅಸೋಸಿಯೇಷನ್ ಅಧ್ಯಕ್ಷ ಎಂ.ವಿಮಲ್ ರಾಜ್, ಪ್ರಧಾನ ಕಾರ್ಯದರ್ಶಿ ಡಿ.ಮಲ್ಲೇಶ್, ಗಿರೀಶ್ ಪೊಲೀಸ್, ಹೇಮಂತ್, ರಾಜೀವ್, ಮಂಜುನಾಥ್, ಮೈಕಲ್, ಯಶವಂತ, ಲೋಕೇಶ್, ನವೀನ್, ಮನೋಜ್ ಹಾಗೂ ಕ್ರೀಡಾ ಪಟುಗಳು, ಕ್ರೀಡಾಭಿಮಾನಿಗಳು, ಭಾಗವಹಿಸಿದ್ದರು.

ಬುದ್ಧಿಮಾಂದ್ಯ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನ

ಆರೋಪಿಗೆ 5 ವರ್ಷ ಕಠಿಣ ಶಿಕ್ಷೆ



ಚಾಮರಾಜನಗರ, ಜ.19– ಬುದ್ಧಿಮಾಂದ್ಯ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ವ್ಯಕ್ತಿಗೆ ನಗರದ ಅಧಿಕ ಜಿಲ್ಲಾ ಮತ್ತು ಸತ್ರ ಎಫ್‌ಟಿಎಸ್ ಸಿ–1 ವಿಶೇಷ ಪೋಕ್ಸೋ ನ್ಯಾಯಾಲಯ 5 ವರ್ಷ ಕಠಿಣ ಶಿಕ್ಷೆ ವಿಧಿಸಿ ಆದೇಶಿಸಿದೆ. ಚಾಮರಾಜನಗರದ ರಾಮಸಮುದ್ರದ 31ನೇ ವಾರ್ಡ್ ನಿವಾಸಿ ಶಿವಮೂರ್ತಿ (ಕರಿಯ) ಶಿಕ್ಷೆಗೊಳಗಾದ ವರು. ಈತ 2020ರಲ್ಲಿ ಸಂತ್ರಸ್ತೆ ತನ್ನ ಮನೆ ಮುಂದೆ ಕುಳಿತಿದ್ದ ವೇಳೆ ಆಕೆಯನ್ನು ಮನೆಯೊಳಗೆ ಕರೆದೊಯ್ದು ಆಗ ಅತ್ಯಾಚಾರಕ್ಕೆ ಯತ್ನಿಸಿದ್ದ. ಆ ವೇಳೆ ಆಕೆ ಕೂಗಿ ಕೊಂಡಿದ್ದರಿಂದ ಅಕ್ಕಪಕ್ಕದ ಮನೆಯವರು ಬಂದು ರಕ್ಷಿಸಿದ್ದರು. ಈ ಸಂಬಂಧ ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ತನಿಖಾಧಿಕಾರಿ ಇನ್ಸ್‌ಪೆಕ್ಟರ್ ಬಿ.ಮಹೇಶ್ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ ನ್ಯಾಎಸ್. ಜೆ.ಕೃಷ್ಣ ಅವರು 5 ವರ್ಷ ಕಠಿಣ ಶಿಕ್ಷೆ, 5 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ.

ಕಳಪೆ ಕಾಮಗಾರಿ ಹೆಸರಲ್ಲಿ ಹಣಕ್ಕೆ ಡಿಮ್ಯಾಂಡ್, ಹಲ್ಲೆ: ನಕಲಿ ಪತ್ರಕರ್ತರು ಅಂದರ್

ಚಾಮರಾಜನಗರ: ಚಾಮರಾಜನಗರದಲ್ಲಿ ನಕಲಿ ಪತ್ರಕರ್ತರ ಹಾವಳಿ ಹೆಚ್ಚಾಗಿದ್ದು, ಪತ್ರಕರ್ತರೆಂದು ರಸ್ತೆ ಕಾಮಗಾರಿ ಸಂಬಂಧ ಮೇಸ್ತ್ರಿ ಬಳಿ ಲಕ್ಷಾಂತರ ರೂ. ಹಣಕ್ಕೆ ಡಿಮ್ಯಾಂಡ್ ಇಟ್ಟಿರುವ ಘಟನೆ ಯಳಂದೂರು ತಾಲೂಕಿನ ವೈ.ಕೆ.ಮೊಳೆ ಬಳಿ ನಡೆದಿದೆ. ಹಣ ಕೊಡಲು ಒಪ್ಪದ ಆತನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದ್ದು, ಪ್ರಕರಣ ಸಂಬಂಧಮೂವರನ್ನು ಪೊಲೀಸರು ಬಂಧಿಸಿದ್ದಾರೆ

ಯಳಂದೂರು–ಬಿ.ಆರ್.ಹಿಲ್ಸ್ ನಡುವೆ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿ ಕಳಪೆ ಎಂದು, ತಾವು ಪತ್ರಕರ್ತರೆಂದು ಹೇಳಿಕೊಂಡಿದ್ದ ಪುನೀತ್, ಶೇಖರ್ ಹಾಗೂ ಪುರುಷೋತ್ತಮ್ ಎಂಬುವರು ಚೆಲುವರಾಜ್ ಎಂಬ ಮೇಸ್ತ್ರಿ ಬಳಿ ಹಣಕ್ಕಾಗಿ ಡಿಮ್ಯಾಂಡ್ ಮಾಡಿದ್ದರು. ಇದಕ್ಕೆ ಒಪ್ಪದ ಆತನ ಮೇಲೆ ಮನಸೋ ಇಚ್ಛೆ ಹಲ್ಲೆ ನಡೆಸಿ ಎಸ್ಕೇಪ್ ಆಗಿದ್ದರು.

ಆವಾಜ್ ಹಾಕಿದ್ದ ಆರೋಪಿಗಳು: ಜನರಿಗೆ ಅಷ್ಟಾಗಿ ಚಿರಪರಿಚಿತವಲ್ಲದ ಯೂಟ್ಯೂಬ್ ಚಾನೆಲ್ ಹೆಸರು ಹೇಳಿ ಪತ್ರಕರ್ತರು ಎಂದು ಪರಿಚಯಿಸಿಕೊಂಡಿದ್ದ ಆರೋಪಿಗಳು, ಇಲ್ಲಿ ಕಾಮಗಾರಿ ನಡೆಯಬೇಕಿದ್ದರೆ ನಮಗೆ 2.5 ಲಕ್ಷರೂ. ನೀಡಬೇಕು. ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಕಾಮಗಾರಿ ಮಾಡಲು ಬಿಡುವುದಿಲ್ಲವೆಂದು ಮೇಸ್ತ್ರಿ ಚೆಲುವರಾಜ್‌ಗೆ ಅವಾಜ್ ಹಾಕಿದ್ದರು. ಈ ವೇಳೆ ಆತ ತನಗೂ ಇದಕ್ಕೂ ಸಂಬಂಧವಿಲ್ಲ. ನೀವು ಗುತ್ತಿಗೆದಾರ ಹಾಗೂ ಇಂಜಿನಿಯರ್ ಸಂಪರ್ಕಿಸಿ ಎಂದಾಗ ರೊಚ್ಚಿಗೆದ್ದು ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಯಳಂದೂರು ಪೊಲೀಸರು ಮೂವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ನಾಳೆ, ನಾಳಿದ್ದು ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ

ಸಂಘದ ಜಿಲ್ಲಾಧ್ಯಕ್ಷೆ ಡಾ.ಸಿ.ಎನ್.ರೇಣುಕಾದೇವಿ



ಸುದ್ದಿಗೋಷ್ಠಿಯಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ.ಸಿ.ಎನ್.ರೇಣುಕಾದೇವಿ ಮಾತನಾಡಿದರು.

ಚಾಮರಾಜನಗರ, ಜ.19– ಜಿಲ್ಲಾಡಳಿತ, ಜಿಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದಿಂದ ಜ.21 ಮತ್ತು 22 ರಂದು ನಗರದಲ್ಲಿ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ.ಸಿ.ಎನ್.ರೇಣಕಾದೇವಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.21ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಕ್ರೀಡಾಕೂಟವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಎಂಎಲ್‌ಸಿ ಗಳಾದ ವಿವೇಕಾನಂದ, ಡಾ.ತಿಮ್ಮಯ್ಯ, ಜಿಲ್ಲಾಧಿಕಾರಿ ಶ್ರೀರೂಪಾ, ಜಿಪಂ ಸಿಇಓ ಮೋನಾರೋತ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

ಪುರುಷರ ವಿಭಾಗದಲ್ಲಿ 40 ವರ್ಷ ಒಳಪಟ್ಟ, 40 ರಿಂದ 50 ಹಾಗೂ 50 ರಿಂದ 60 ವರ್ಷದವರೆಂದು 3 ವಿಭಾಗ ಹಾಗೂ ಮಹಿಳೆಯರ ವಿಭಾಗದಲ್ಲಿ 35 ವರ್ಷ ಒಳಪಟ್ಟವರು ಹಾಗೂ 35 ವರ್ಷ ಮೇಲ್ಪಟ್ಟವರಿಗೆ ಕ್ರೀಡಾಕೂಟ ಆಯೋಜಿಸಲಾಗಿದ್ದು, ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮ ಸಹ ಆಯೋಜಿಸಲಾಗಿದೆ ಎಂದರು.

ಈ ಬಾರಿ ಅಗ್ನಿಶಾಮಕ ಸಿಬ್ಬಂದಿ ಹಾಗೂ ದೈಹಿಕ ಶಿಕ್ಷಕರು ಕ್ರೀಡಾಕೂಟದಲ್ಲಿ ಭಾಗವಹಿಸಬಹುದಾಗಿದೆ. ಕ್ರೀಡಾಕೂಟದಲ್ಲಿ ಭಾಗವಹಿಸುವ ನೌಕರರಿಗೆ 2 ದಿನಗಳ ಓಓಡಿ ಪ್ರಮಾಣಪತ್ರ ನೀಡಲಾಗುವುದು. ಕ್ರೀಡಾಂಗಣದಲ್ಲಿ ಲಭ್ಯವಿರುವ ಕ್ರೀಡೆ ಮಾತ್ರ ನಡೆಸಲಾಗುವುದು. ಉಳಿದಂತೆ ಕ್ರೀಡಾ ಸೌಲಭ್ಯಗಳಿಲ್ಲದ ಕ್ರೀಡೆಗಳನ್ನು ಮೈಸೂರಿನಲ್ಲಿ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಭರತ್ ಭೂಷಣ್, ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ಖಜಾಂಚಿ ಶಿವಕುಮಾರಯ್ಯ, ರಾಜ್ಯ ಪರಿಷತ್ ಸದಸ್ಯ ನಟರಾಜು, ಗೌರವಾಧ್ಯಕ್ಷ ಎಸ್.ಮಹದೇವಯ್ಯ ಹಾಜರಿದ್ದರು.

ಕೇರಳ ಲಾಟರಿ ಮಾರಾಟ ಆರೋಪಿ ಬಂಧನ



ಕೊಳ್ಳೇಗಾಲ, ಜ.19– ಅಕ್ರಮವಾಗಿ ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಮಾಂಬಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಳಂದೂರು ತಾಲೂಕಿನ ಅಗರ ಗ್ರಾಮದ ನಿವಾಸಿ ಮಧುಸೂದನ್ ಬಂಧಿತ ಆರೋಪಿ. ಈತ ತಾಲೂಕಿನ ತೇರಂಬಳ್ಳಿ ಗ್ರಾಮದ ಹೋಟೆಲ್ ಹಿಂಭಾಗ ಅಕ್ರಮವಾಗಿ ಕೇರಳ ಲಾಟರಿ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಮಾಂಬಳ್ಳಿ ಠಾಣಾ ಪೊಲೀಸರು ಆರೋಪಿ ಬಂಧಿಸಿ, ಆತನಿಂದ 48 ಲಾಟರಿ ಟಿಕೆಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಆತನನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ್ದಾರೆ.

ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಲು ಸೂಚನೆ



ಸಭೆಯನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು.

ಹನೂರು, ಜ.19– ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅವರ ಕೆಲಸಗಳನ್ನು ತುರ್ತಾಗಿ ಮಾಡಿ ಕೊಡಲು ಮುಂದಾಗಬೇಕು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜನಸಂಪರ್ಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಮುಖವಾಗಿ ಕಾಡಂಚಿನ ಗ್ರಾಮಗಳಿಗೆ ವಿದ್ಯುತ್ ಹಾಗೂ ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು. ಜೊತೆಗೆ ರೈತಪರ ಯೋಜನೆಗಳನ್ನು ರೂಪಿಸಿಕೊಳ್ಳಲು ಅಧಿಕಾರಿಗಳು ಮುಂದಾಗಬೇಕಿದೆ. ಎಲ್ಲರೂ ತಮ್ಮ ವರ್ತನೆ ಸರಿಪಡಿಸಿಕೊಳ್ಳಬೇಕು. ಇಲ್ಲವಾದರೆ ರೈತರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎಂದರು.

ಪ್ರತಿಧ್ವನಿಸಿದ ಸಮಸ್ಯೆಗಳು: ತಾಲೂಕಿನಲ್ಲಿ ಕಳೆದ 50 ವರ್ಷಗಳ ಹಿಂದೆಯೇ ಸಾಗುವಳಿ ಜಮೀನು ಮಂಜೂರಾಗಿದ್ದು, ಇನ್ನೂ ಸೂಕ್ತ ದಾಖಲೆ ಹಸ್ತಾಂತರಿಸಿಲ್ಲ. ಪರಿಣಾಮ ಸರ್ಕಾರದಿಂದ ಸಿಗುವ ಸೌಲಭ್ಯಗಳು ರೈತರಿಗೆ ಸಿಗುತ್ತಿಲ್ಲ. ಹಾಗಾಗಿ ಆದಷ್ಟು ಬೇಗ ಸರ್ವೆ ಮಾಡಿಸಿ ರೈತರಿಗೆ ನೆರವಾಗಬೇಕಿದೆ. ಕಾಡು ಪ್ರಾಣಿಗಳ ಹಾವಳಿ, ಕೆರೆಗಳಿಗೆ ನೀರು ತುಂಬಿಸಬೇಕು, ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರ ಕೊರತೆ, ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲ, ಜಮೀನುಗಳಿಗೆ ತೆರಳಲು ದಾರಿ ಇಲ್ಲ, ದಂಟಳ್ಳಿ ಏತ ನೀರಾವರಿ ಯೋಜನೆ ಆಗಬೇಕು, ಮತ್ತಿತರ ಸಮಸ್ಯೆಗಳು ಸಭೆಯಲ್ಲಿ ಪ್ರತಿಧ್ವನಿಸಿದವು.

ಜಲಜೀವನ್ ಮಿಷನ್ ಕಳಪೆ: ಹಳ್ಳಿಗಳಿಗೆ ಕುಡಿಯುವ ನೀರು ಒದಗಿ ಸುವ ಜಲಜೀವನ್ ಮಿಷನ್ ಯೋಜನೆ ಯಡಿ ಅಳವಡಿಸಿರುವಂತಹ ವಸ್ತುಗಳು ಕಳಪೆ ಗುಣಮಟ್ಟದ್ದಾಗಿದ್ದು, ಇನ್ನೂ ಕೆಲವೆಡೆ ಕಾಮಗಾರಿ ಪೂರ್ಣಗೊಳಿಸಿಲ್ಲ. ಅಲ್ಲದೆ ಜೆಜೆಎಂಗಾಗಿ ರಸ್ತೆ ಅಗೆದು ದುರಸ್ತಿಗೊಳಿಸಿಲ್ಲ ಎಂಬುದು ಸಭೆಯಲ್ಲಿ ಪ್ರಸ್ತಾಪವಾಯಿತು. ಸಂಸದರು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಸರಿಪಡಿಸುವಂತೆ ಸೂಚನೆ ನೀಡಿದರು.

ನೀರಾವರಿ ಅಧಿಕಾರಿಗಳ ಬೆವರಿಸಿದ ಸಂಸದರು: ದಂಟಳ್ಳಿ ಏತ ನೀರಾವರಿ ಯೋಜನೆ ಬಗ್ಗೆ ನೀರಾವರಿ ಇಲಾಖೆ ಅಧಿಕಾರಿಗಳ ಬಳಿ ಸಮರ್ಪಕ ಮಾಹಿತಿ ಇಲ್ಲದ ಕಾರಣ ಅವರನ್ನು ಸಂಸದ ಸುನೀಲ್ ಬೋಸ್ ತರಾಟೆ ತೆಗೆದುಕೊಂಡರು. ಬಳಿಕ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ವಾರದೊಳಗೆ ಡಿಪಿಆರ್ ಮಾಡಿ ಕೊಡಲು ಸ್ಥಳದಲ್ಲೇ ಸೂಚಿಸಿದರು.

ಸ್ಮಶಾನ ಇಲ್ಲ: ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಇಂದಿಗೂ ದಲಿತರಿಗೆ ಸ್ಮಶಾನ ಇಲ್ಲದೆ ಹಳ್ಳದ ಬದಿ ಹಾಗೂ ಇನ್ನಿತರ ಕಡೆ ಶವ ಸಂಸ್ಕಾರ ಮಾಡುತ್ತಿದ್ದಾರೆ. ಹಾಗಾಗಿ ಸ್ಮಶಾನ ವ್ಯವಸ್ಥೆ ಕಲ್ಪಿಸಬೇಕು ಎಂದು ಡಿಎಸ್‌ಎಸ್ ಅಧ್ಯಕ್ಷ ಬೆಳ್ಳಿಯಪ್ಪ ಒತ್ತಾಯಿಸಿದರು.

ಈ ವೇಳೆ ಜಿಪಂ ಉಪ ಕಾರ್ಯದರ್ಶಿ ಶ್ರುತಿ, ಎಸಿ ದಿನೇಶ್ ಕುಮಾರ್ ಮೀನಾ, ಎಎಸ್ಪಿ ಶಶಿಧರ್, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ರಾಚಪ್ಪ, ಎಸಿಎಫ್ ವಿರಾಜ್ ಸಿ ಹೊಸೂರು, ಡಿವೈಎಸ್‌ಪಿ ಧರ್ಮೇಂದ್ರ, ತಹಸೀಲ್ದಾರ್ ಚೈತ್ರ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ರೈತರು ಉಪಸ್ಥಿತರಿದ್ದರು.

ಬೈಕ್‌ನಿಂದ ಆಯತಪ್ಪಿ ಬಿದ್ದು ಸವಾರ ಸಾವು



ಚಾಮರಾಜನಗರ, ಜ.19– ಬೈಕ್‌ನಿಂದ ಆಯತಪ್ಪಿ ಬಿದ್ದ ಪರಿಣಾಮ ತೀವ್ರವಾಗಿ ಗಾಯಗೊಂಡ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಸಂತೇ ಮರಹಳ್ಳಿ ಬಳಿಯ ಬಾಣಹಳ್ಳಿ ಗ್ರಾಮದಲ್ಲಿ ನಡೆದಿದೆ


ಗ್ರಾಮದ ಪಿಎಸಿಎಸ್ ಅಧ್ಯಕ್ಷರೂ ಆದ ಎಂಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ನಾಗೇಂದ್ರ(42) ಮೃತಪಟ್ಟವರು. ಇವರು ಬೈಕ್‌ನಲ್ಲಿ ತಮ್ಮ ಜಮೀನಿನಿಂದ ಮನೆಗೆ ಹೋಗುವಾಗ ಆಯತಪ್ಪಿ ಬಿದ್ದಿದ್ದಾರೆ. ಪರಿಣಾಮ ತಲೆಗೆ ತೀವ್ರವಾಗಿ ಗಾಯವಾಗಿದ್ದು, ತಕ್ಷಣ ಅವರಿಗೆ ಸಂತೇಮರಹಳ್ಳಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರದ ಸಿಮ್ಸ್‌ಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಂತೇಮರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಸುತ್ತೂರು ಸಂಭ್ರಮ 2026






ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಕಪಿಲಾ ನದಿಯ ತೀರದಲ್ಲಿ ಕಪಿಲಾ ಆರತಿ ಮತ್ತು ತೆಪ್ಪೋತ್ಸವವು ವಿಜೃಂಭಣೆಯಿಂದ ನಡೆಯಿತು. ಚಿತ್ರಗಳು ಸುತ್ತೂರು ನಂಜುಂಡ ನಾಯಕ

ಸುತ್ತೂರು ಜಾತ್ರೆಯಲ್ಲಿ ವಿಜೃಂಭಣೆಯ ಕಪಿಲಾ ಆರತಿ, ತೆಪ್ಪೋತ್ಸವ

ನಂಜನಗೂಡು: ಸುತ್ತೂರು ಶ್ರೀ ಶಿವ ರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಕಪಿಲಾ ನದಿಯ ತೀರದಲ್ಲಿ ಕಪಿಲಾ ಆರತಿ ಮತ್ತು ತೆಪ್ಪೋತ್ಸವವು ವಿಜೃಂಭಣೆಯಿಂದ ಜರುಗಿತು.

ಉತ್ತರಕಾಶಿಯ ಗಂಗಾ ಆರತಿಯಂತೆಯೇ ದಕ್ಷಿಣದ ಕಪಿಲಾ ಆರತಿ ಕಾರ್ಯಕ್ರಮವನ್ನು ನಡೆಸಲಾಯಿತು. ಐದು ಜನರ ವೃತ್ತಿಕರ ತಂಡ ಕಪಿಲಾ ನದಿಗೆ ದೂಪ ದೀಪ ಆರತಿಯನ್ನು ಬೆಳಗಿ ಆರತಿ ಸಲ್ಲಿಸಿದರು. ವಿವಿಧ ಬಗ್ಗೆಯ ವಿದ್ಯುತ್ ದೀಪಗಳಿಂದ ಕಪಿಲಾ ತೀರವನ್ನು ಅಲಂಕೃತಗೊಳಿಸಲಾಗಿತ್ತು. ನಂತರ ನೂತನವಾಗಿ ನಿರ್ಮಿಸಿರುವ 30 ಲಕ್ಷ ರೂ. ವೆಚ್ಚದ ತೆಪ್ಪೋತ್ಸವದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮೂರು ಸುತ್ತು ಹಾಕಿಸಲಾಯಿತು. ನೆರೆದಿದ್ದ ಭಕ್ತರು ತೆಪ್ಪೋತ್ಸವವನ್ನು ಕಣ್ತುಂಬಿಕೊಂಡು ಶ್ರದ್ಧಾ ಭಕ್ತಿಯಿಂದ ನಮಿಸಿದರು.

ಬೆರಗುಗೊಳಿಸಿದ ಬಾಣ ಬಿರುಸು: ತೆಪ್ಪೋತ್ಸವದ ನಂತರ ಬಾಣ ಬಿರುಸುಗಳ ಕಾರ್ಯಕ್ರಮವು ವಿಜೃಂಭಣೆಯಿಂದ ಜರುಗಿತು. ಪಟಾಕಿಯ ಶಬ್ದಕ್ಕೆ ಪುಳಕಿತರಾದ ಜನರು, ಬಾನಂಗಳದಲ್ಲಿ ಮೂಡುವ ಬೆಳಕಿನ ಚಿತ್ತಾರವನ್ನು ಕಂಡು ಜನರು ನಿಬ್ಬೆರಗಾದರು.

ಜನರನ್ನು ರಂಜಿಸಿದ ಭಜನೆಗಳು



ನಂಜನಗೂಡು: ಸುತ್ತೂರಿನ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ 32ನೇ ರಾಜ್ಯ ಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆಯಲ್ಲಿ ರಾಜ್ಯ ಹಾಗೂ ಹೊರ ರಾಜ್ಯದಿಂದ ಭಜನಾ ಕಲಾವಿದರು ಭಾಗವಹಿಸಿ, ಜನರನ್ನು ರಂಜಿಸಿದರು.

ಭಜನೆಗಳು ನಾಡಿನ ಸಂಸ್ಕೃತಿ ಮತ್ತು ಭಕ್ತಿಯ ಪರಂಪರೆಯನ್ನು ಬಿಂಬಿಸುವ ಜೊತೆಗೆ ಮಾನವನ ಆಧ್ಯಾತ್ಮಿಕ ಶಾಂತಿ ಮತ್ತು ಏಕಾಗ್ರತೆ ಪಡೆಯಲು ಸಹಕಾರಿಯಾಗಿದೆ. ಜೊತೆಗೆ ಸಮುದಾಯದ ಸಂಬಂಧಗಳನ್ನು ಬಲಪಡಿಸುವಲ್ಲಿ ಸಹಕಾರಿಯಾಗಿದೆ. ಭಜನೆಗಳನ್ನು ಉಳಿಸಿ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲಿ ಸುತ್ತೂರು ಶ್ರೀ ಮಠವು ಕಳೆದ ಮೂವತ್ತೆರಡು ವರ್ಷಗಳಿಂದ ಭಜನಾ ಮೇಳವನ್ನು ಜಾತ್ರಾ ಮಹೋತ್ಸವದ ಭಾಗವಾಗಿ ಆಯೋಜಿಸಲಾಗಿದೆ.

ಸುತ್ತೂರಿನ ಜಾತ್ರಾ ಮಹೋತ್ಸವದಲ್ಲಿ ಕಳೆದ 4 ದಿನಗಳಿಂದ ತಮಿಳುನಾಡು ಕೇರಳ ಮತ್ತು ರಾಜ್ಯದ ವಿವಿಧ ಜಿಲ್ಲೆಯ ಕಲಾವಿದರು ಭಜನೆಯನ್ನು ಹಾಡಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಹೊರ ರಾಜ್ಯಗಳಿಂದ ನಾಲ್ಕು ತಂಡ, ಸೇರಿದಂತೆ 300ಕ್ಕೂ ಹೆಚ್ಚು ಪುರುಷರ ತಂಡ, 220ಕ್ಕೂ ಹೆಚ್ಚು ಮಹಿಳೆಯರು, 10 ಮಕ್ಕಳ ತಂಡ ಸೇರಿದಂತೆ ಒಟ್ಟು 530ಕ್ಕೂ ಹೆಚ್ಚಿನ ಭಜನಾ ತಂಡಗಳು ಭಾಗವಹಿಸಿ ಭಜನೆಯನ್ನು ಹಾಡುವ ಮೂಲಕ ಜನರನ್ನು ರಂಜಿಸಿದರು.

ಸುತ್ತೂರು ಜಾತ್ರೆಯಲ್ಲಿ ಮೈ ನವಿರೇಳಿಸಿದ ಕುಸ್ತಿ ಪಂದ್ಯಾವಳಿ

ಮೂರು ಗಂಟೆಗಳ ಕಾಲ ನಡೆದ ಮಾರ್ಫಿಟ್ ಕುಸ್ತಿ, ಪರಮೇಶ್ವರ್ ಸುತ್ತೂರು ಕುಮಾರ, ಶಿವರಾಜು ಸುತ್ತೂರು ಕಿಶೋರ ಪ್ರಶಸ್ತಿ






ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಮೈ ನವಿರೇಳಿಸುವ ಕುಸ್ತಿ ಪಂದ್ಯಾವಳಿಯನ್ನು ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ಶಾಸಕ ರಿಜ್ವಾನ್ ಹರ್ಷದ್ ಉದ್ಘಾಟಿಸಿದರು. ಸುತ್ತೂರು ಕುಮಾರ ಪ್ರಶಸ್ತಿ ಪಡೆದ ಪರಮೇಶ್ವರ್ ಅವರನ್ನು ಬಲ ಚಿತ್ರದಲ್ಲಿ ಕಾಣಬಹುದು.

ನಂಜನಗೂಡು(ರಂಗಸ್ವಾಮಿ): ಸುತ್ತೂರು ಶ್ರೀಮಠ ಕುಸ್ತಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ನಡೆಸುವ ಕುಸ್ತಿ ಪಂದ್ಯಾವಳಿ ಜಿಲ್ಲೆಯಲ್ಲಿ ಹೆಸರುವಾಸಿಯಾಗಿದೆ ಎಂದು ಶಾಸಕ ರಿಜ್ವಾನ್ ಹರ್ಷದ್ ತಿಳಿಸಿದರು.

ತಾಲೂಕಿನ ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಸೋಮವಾರ ನಡೆದ ಮೈನವಿರೇಳಿ ಸುವ 80 ಜೊತೆ ಕುಸ್ತಿ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಮಹರಾಜರ ಕಾಲದಲ್ಲಿ ಕುಸ್ತಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿತ್ತು, ಧರ್ಮ, ಜಾತಿಗಳ ಬೇಧವಿಲ್ಲದೆ ಪೈಲ್ವಾನರು ಉತ್ಸಾಹದಿಂದ ಸುತ್ತೂರಿನಲ್ಲಿ ನಡೆಯುವ ಕುಸ್ತಿ ಪಂದ್ಯದಲ್ಲಿ ಭಾಗವಹಿಸುತ್ತಾರೆ, ನಮ್ಮ ಶಿವಾಜಿ ನಗರ ಕ್ಷೇತ್ರದಲ್ಲಿ ಒಂದು ಕೋಟಿ ಅನುದಾನ ಪಡೆದು ಕುಸ್ತಿ ಮಾಡುವ ಪೈಲ್ವಾನರುಗಳಿಗೆ ಅಗತ್ಯ ಸೌಲಭ್ಯ ಒದಗಿಸಿಕೊಡುತ್ತಿದ್ದೇನೆ, ಯುವಕರು ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುತ್ತಿದ್ದಾರೆ, ಪ್ರಾಚೀನ ಕಲೆಯಾದ ಕುಸ್ತಿ ಕ್ರೀಡೆಯಲ್ಲಿ ಭಾಗವಹಿಸುವ ಮೂಲಕ ಯುವಕರು ಉತ್ತಮ ದೇಹದಾರ್ಢ್ಯ,ಆರೋಗ್ಯ ಹೊಂದಬಹುದಾಗಿದೆ ಎಂದು ಹೇಳಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ ಕುಸ್ತಿ ಕಲೆಯ ಮೈಸೂರು ಭಾಗದಲ್ಲಿ ರಾಜಮಹಾರಾಜರ ಕಾಲದಿಂದಾಗಿ ಹೆಸರುವಾಸಿಯಾಗಿ ಜನಮನ್ನಣೆಗಳಿಸಿದೆ, ಈ ಭಾಗದ ಕುಸ್ತಿ ಪೈಲ್ವಾನರುಗಳು ದೇಶ ವಿದೇಶದಲ್ಲಿ ಪ್ರಖ್ಯಾತಿಯನ್ನು ಗಳಿಸಿದ್ದಾರೆ. ಕುಸ್ತಿ ಪಂದ್ಯಾವಳಿಯಿಂದಾಗಿ ಯುವಕರು ದುಶ್ಚಟಗಳಿಂದ ದೂರವಿದ್ದು, ಆರೋಗ್ಯಕರ ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸಬಹುದಾಗಿದೆ ಎಂದರು.

ಸುತ್ತೂರು ಕುಮಾರ ಪ್ರಶಸ್ತಿಗಾಗಿ ಕ್ಯಾತನಹಳ್ಳಿಯ ಪೈ.ಪರಮೇಶ್ ಹಾಗೂ ಮೈಸೂರಿನ ಇಸ್ಮಿಯಾನ್ ಗರಡಿಯ ಜೈದ್ ಖುರೈಸಿ ನಡುವೆ 3 ಗಂಟೆಗಳಿಗೂ ಹೆಚ್ಚು ಕಾಲ ನಡೆದ ಸೋಲು ಗೆಲ್ಲುವ ತನಕ (ಮಾರ್ಫಿಟ್) ಕುಸ್ತಿಯಲ್ಲಿ ಮೊದಲಿನಿಂದಲೂ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದ ಪೈ.ಪರಮೇಶ್ ಜೈದ್ ಕುರೈಸಿಯನ್ನು ಮಣಿಸಿ ಸುತ್ತೂರು ಕುಮಾರ ಪ್ರಶಸ್ತಿ ಪಡೆದರು.

ಸುತ್ತೂರು ಕಿಶೋರ್ ಪ್ರಶಸ್ತಿಗಾಗಿ ನಂಜನಗೂಡಿನ ಪೈ.ಶಿವರಾಜು ಹೊಸಕೋಟೆಯ ಪೈ.ಕುಮಾರ ನಾಯಕ ನಡುವೆ ನಡೆದ ಹಣಾಹಣಿಯಲ್ಲಿ ಅಂತಿಮವಾಗಿ ಪೈ.ಶಿವರಾಜು, ಪೈ.ಕುಮಾರ ನಾಯಕರನ್ನು ಸೋಲಿಸಿ ಸುತ್ತೂರು ಕಿಶೋರ್ ಪ್ರಶಸ್ತಿ ಪಡೆದರು.

ಸುತ್ತೂರು ಕೇಸರಿ ಪ್ರಶಸ್ತಿಗಾಗಿ ಮೈಸೂರಿನ ನಜರ್‌ಬಾದ್ ಗರಡಿಯ ಚೇತನ್ ಗೌಡ–ಗಂಜಾಂನ ಪೈ.ಮಂಜು ನಡುವೆ ಪಂದ್ಯ ನಡೆಯಿತು.

ಹರಿಯಾಣದ ಸೋನಾಪತ್ ಅಖಾಡದ ಪೈ.ಹರ್ಷಕುಮಾರ್ ಚಾದರಿ ಹಾಗೂ ಮಧ್ಯಪ್ರದೇಶದ ಪೈ.ಮುದಾಸಿರ್ ಖಾನ್ ನಡುವೆ ನಡೆದ ಪಂದ್ಯದಲ್ಲಿ ಪೈ.ಹರ್ಷಕುಮಾರ್ ಚಾದರಿ ಗೆಲುವಿನ ನಗೆ ಬೀರಿದರು.

ಪುಣೆಯ ಪೈ.ಅವಿನಾಶ್ ಲಕ್ಷ್ಮಣ್ ಗವಾಡೇ–ಮಹಾರಾಷ್ಟ್ರದ ಸಾಂಗ್ಲಿಯ ಪೈ. ನಾಥ ಲಾವ ಪವಾರ್ ನಡುವೆ ನಡೆದ ಪಂದ್ಯದಲ್ಲಿ ಮಹಾರಾಷ್ಟ್ರದ ಸಾಂಗ್ಲಿಯ ಪೈ. ನಾಥಲಾವ ಪವಾರ್ ಜಯಶಾಲಿಯಾದರು.

ಮಠ–ಮಾನ್ಯಗಳ ಸಹಕಾರವಿರದಿದ್ದರೆ ದೇಶ ವಿಶ್ವಮಾನವ ದೇಶವಾಗುತ್ತಿರಲಿಲ್ಲ




ನಂಜನಗೂಡು(ರಂಗಸ್ವಾಮಿ): ದೇಶದಲ್ಲಿ ಮಠ–ಮಾನ್ಯಗಳು ಶಿಕ್ಷಣಕ್ಕೆ ಒತ್ತು ನೀಡಿ ತನ್ನ ಜವಾಬ್ದಾರಿಯನ್ನು ನಿರ್ವಹಿಸದೆ ಹೋಗಿದ್ದರೆ ಇಂದು ಭಾರತ ದೇಶ ವಿಶ್ವಮಾನವ ದೇಶವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಭವ್ಯ ಭಾರತದ ಭವಿಷ್ಯ ನಿರ್ಮಿಸುವಲ್ಲಿ ಮಠಮಾನ್ಯಗಳ ಕೊಡುಗೆ ಅಪಾರವಾಗಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ನಡೆದ ಭಜನಾ ಮೇಳದ ಸಮರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಮತ್ತು ದೇಶದಲ್ಲಿ ಮಠ–ಮಾನ್ಯಗಳು ಶಿಕ್ಷಣಕ್ಕೆ ಆದ್ಯತೆ ನೀಡಿ ಕೆಲಸ ನಿರ್ವಹಿಸುವ ಮೂಲಕ ದೇಶದ ಅಭಿವೃದ್ಧಿಗೆ ಕಾರಣೀಭೂತವಾಗಿವೆ. ಸುತ್ತೂರು ಮಠವು ದೇಶ ಮತ್ತು ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಶಿಕ್ಷಣ ನೀಡಿ ಗ್ರಾಮೀಣ ಭಾಗದ ಅಭಿವೃದ್ಧಿಗೆ ಮುನ್ನುಡಿ ಬರೆದಿದೆ ಶ್ರೀ ಮಠದ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದ ಲಕ್ಷಾಂತರ ಜನರು ದೇಶ ವಿದೇಶಗಳಲ್ಲಿ ಭಾರತ ದೇಶದ ಪ್ರಖ್ಯಾತಿಯನ್ನು ಪಸರಿಸುತ್ತಿದ್ದಾರೆ. ಅಲ್ಲದೆ ಶ್ರೀ ಮಠವು ಆಧ್ಯಾತ್ಮಿಕ ಮತ್ತು ಶಿಕ್ಷಣಕ್ಕೆ ಸೀಮಿತವಾಗದೆ ಗ್ರಾಮೀಣ ಹಳ್ಳಿಗಳು ಅಭಿವೃದ್ಧಿ ಕಂಡಲ್ಲಿ ದೇಶದ ಅಭಿವೃದ್ಧಿ ಸಾಧ್ಯ ಎಂಬ ಮಹಾತ್ಮ ಗಾಂಧೀಜಿಯವರ ಆಶಯದಂತೆ ಗ್ರಾಮೀಣ ಭಾಗದ ಜನರಿಗೆ ಅವಶ್ಯವಿರುವ ಜ್ಞಾನವನ್ನು ಸವಲತ್ತುಗಳನ್ನು ಒದಗಿಸುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಜಾತ್ರೆಯಲ್ಲಿ ಹಳ್ಳಿಕಾರ್ ಎತ್ತುಗಳ ಕಾರುಬಾರು




ನಂಜನಗೂಡು: ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ 55ನೇ ದನಗಳ ಜಾತ್ರೆಯಲ್ಲಿ ಹಳ್ಳಿಕಾರ್ ಎತ್ತುಗಳ ದರ್ಬಾರು ಹೆಚ್ಚಾಗಿದ್ದು, ಜಾತ್ರೆಯ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿ ಜನರನ್ನು ಆಕರ್ಷಿಸುತ್ತಿದೆ.

ಈ ಹಿಂದೆ ಕುಟುಂಬದ ಸದಸ್ಯರ ಒಂದು ಭಾಗವಾಗಿದ್ದ ಎತ್ತುಗಳು, ಆಧುನಿಕ ಯಾಂತ್ರಿಕೃತ ಜೀವನ ಶೈಲಿಯಿಂದ ಗ್ರಾಮೀಣ ಭಾಗದಲ್ಲೂ ಸಹ ರಾಸುಗಳು ಆವಾಸನದ ಸ್ಥಿತಿಗೆ ತಲುಪಿವೆ. ದೇಸೀಯ ರಾಸುಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಶ್ರೀಮಠವು 54 ವರ್ಷಗಳಿಂದಲೂ ಸಹ ಜಾತ್ರಾ ಮಹೋತ್ಸವದಲ್ಲಿ ದನಗಳ ಜಾತ್ರೆಯನ್ನು ಏರ್ಪಡಿಸುವ ಮೂಲಕ ಉತ್ತಮ ರಾಸುಗಳಿಗೆ ಪ್ರಶಸ್ತಿ ನೀಡಿ ರೈತರಿಗೆ ಉತ್ತೇಜನ ನೀಡುವ ಕೆಲಸಕ್ಕೆ ಮುಂದಾಗಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಮೂರು ದಿವಸ ದನಗಳ ಜಾತ್ರೆಯನ್ನು ನಡೆಸಲಾಗುತ್ತದೆ. ಜಾತ್ರಾ ಮಹೋತ್ಸವದಲ್ಲಿ ಈ ಬಾರಿ ಸುಮಾರು 257ಕ್ಕೂ ಹೆಚ್ಚು ರಾಸುಗಳು ಆಗಮಿಸಿವೆ. ದನಗಳ ಜಾತ್ರೆಯಲ್ಲಿ ಭಾಗಿಯಾಗುವ ರಾಸುಗಳಿಗೆ ಹಾಲು ಹಲ್ಲು, ಎರಡು ಹಲ್ಲು, ನಾಲ್ಕು ಹಲ್ಲು, ಆರು ಹಲ್ಲು, ಮೊಳೆ ಹಲ್ಲು ಹಾಗೂ ಬಾಯಿ ಗೂಡಿದ ಹಲ್ಲುಗಳು ಸೇರಿದಂತೆ ಆರು ವಿಭಾಗಗಳಲ್ಲಿ ದೇಸಿಯ ರಾಸುಗಳಿಗೆ ಬಹುಮಾನ ವಿತರಿಸಲಾಗುತ್ತದೆ. ಪ್ರಥಮ 10 ಸಾವಿರ ನಗದು, ದ್ವಿತೀಯ 7500 ಸಾವಿರ ನಗದು, ತೃತೀಯ 5000 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುತ್ತದೆ.

ಜಾತ್ರಾ ಮಹೋತ್ಸವದಲ್ಲಿ ನರಸೀಪುರ ತಾಲೂಕಿನ ಹೊಳೆ ಕೆಂಪಯ್ಯನ ಹುಂಡಿ ಶಶಿಧರ್ ಅವರ 17 ಲಕ್ಷ ಮೌಲ್ಯದ ಕಡೆ ಹಲ್ಲಿನ ಹಳ್ಳಿಕಾರ್ ಎತ್ತುಗಳು ಜಾತ್ರೆಯ ಪ್ರಮುಖ ಆಕರ್ಷಣೆಯಲ್ಲಿ ಒಂದಾಗಿವೆ. 17 ಲಕ್ಷಕ್ಕೆ ಎತ್ತುಗಳನ್ನು ಕೇಳಿದ್ದಾರೆ. ಮುಂಬರುವ ಭೂಕನ ಜಾತ್ರೆಯಲ್ಲಿ ರಾಸುಗಳನ್ನು ಪ್ರದರ್ಶನ ಮಾಡುವ ಉದ್ದೇಶದಿಂದ ರಾಸುಗಳನ್ನು ಮಾರಾಟ ಮಾಡಿಲ್ಲ ಎಂದರು.

ಅಲ್ಲದೆ ಬನ್ನೂರಿನ ಆಯುರ್ವೇದ ವೈದ್ಯ ರಾಹುಲ್ ಗೌಡ ಅವರ 14 ಲಕ್ಷ ಮೌಲ್ಯದ ಒಂದು ಜೊತೆ, 9 ಲಕ್ಷ ಮೌಲ್ಯದ ಒಂದು ಜೊತೆ, 7 ಲಕ್ಷ ಮೌಲ್ಯದ ಹಳ್ಳಿಕಾರ್ ಎತ್ತುಗಳು ದನಗಳ ಜಾತ್ರೆಯಲ್ಲಿ ಭಾಗಿಯಾಗಿವೆ.

ಈ ಬಾರಿಯ ಜಾತ್ರಾ ಮಹೋತ್ಸವದಲ್ಲಿ ಕೊಳ್ಳೇಗಾಲದ ಮುಡಿಗುಂಡ ಗ್ರಾಮದ ಶಿವು ತಮಿಳುನಾಡಿನ ಕಂಗಾಯಂ ತಳಿಯನ್ನು ಜಾತ್ರಾ ಮಹೋತ್ಸವದಲ್ಲಿ ಕರೆತಂದಿದ್ದು ತಮಿಳುನಾಡಿನ ಕಾಂಗಯಂ ತಳಿಯನ್ನು ಕರ್ನಾಟಕದಲ್ಲಿ ಸಂತತಿ ಹೆಚ್ಚಿಸಲು ಖರೀದಿಸಿದ್ದೇನೆ. ಇದನ್ನು ಮಾರಾಟ ಮಾಡುವುದಿಲ್ಲ ಎಂದರು.

ಸುತ್ತೂರು ಜಾತ್ರೆಯಲ್ಲಿ ಕಾರು ಹರಿದು ಯುವಕ ಸಾವು; ಮತ್ತೋರ್ವನಿಗೆ ಗಾಯ

ನಾಟಕ ನೋಡಿ ಪಾರ್ಕಿಂಗ್ ಸ್ಥಳದಲ್ಲಿ ಮಲಗಿದ್ದಾಗ ದುರಂತ

ನಂಜನಗೂಡು, ಜ.19– ಶ್ರೀ ಕ್ಷೇತ್ರ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನಾಟಕ ನೋಡಿ, ರಸ್ತೆ ಬದಿ ಮಲಗಿದ್ದವರ ಮೇಲೆ ಕಾರು ಹರಿದು ಯುವಕ ನೋರ್ವ ಸ್ಥಳದಲ್ಲಿಯೇ ಮೃತಪಟ್ಟು ಮತ್ತೋರ್ವ ತೀವ್ರವಾಗಿ ಗಾಯಗೊಂಡಿದ್ದಾನೆ. ಘಟನೆ ಸೋಮವಾರ ಮುಂಜಾನೆ ಜರುಗಿದೆ.

ನಂಜನಗೂಡು ತಾಲೂಕಿನ ಘಟ್ಟವಾಡಿ ಗ್ರಾಮದ ಪ್ರದೀಪ್ ಕುಮಾರ್ (33) ದುರಂತದಲ್ಲಿ ಮೃತಪಟ್ಟ ದುರ್ದೈವಿ. ಆತನ ಸ್ನೇಹಿತ ಅದೇ ಗ್ರಾಮದ ರವಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟ್ಟವಾಡಿ ಗ್ರಾಮದ ಪ್ರದೀಪ್‌ಕುಮಾರ್ ಭಾನುವಾರ ರಾತ್ರಿ ಸುತ್ತೂರು ಶ್ರೀ ಕ್ಷೇತ್ರದ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ, ರಾತ್ರಿ ನಾಟಕ ನೋಡಿದ ಬಳಿಕ ಊರಿಗೆ ತೆರಳಲು ಬಸ್ಸು ಇಲ್ಲದ ಕಾರಣ ಕುಪ್ಪರವಳ್ಳಿ ರಸ್ತೆಯ ತಾತ್ಕಾಲಿಕ ಪಾರ್ಕಿಂಗ್ ಸ್ಥಳದಲ್ಲಿ ಟಿಕೆಟ್ ವಿತರಣೆ ಕೆಲಸ ಮಾಡುತ್ತಿದ್ದ ತನ್ನ ಸ್ನೇಹಿತ ಘಟ್ಟವಾಡಿ ಗ್ರಾಮದ ರವಿ ಎಂಬಾತನೊಂದಿಗೆ ಮಲಗಿದ್ದಾರೆ. ಸೋಮವಾರ ಮುಂಜಾನೆ 2:30ರಿಂದ 3 ಗಂಟೆ ವೇಳೆಯಲ್ಲಿ ಕಾರು (ಕೆಎ03 ಸಿ.3498), ಚಾಲಕನ ಅಜಾಗರೂಕತೆಯಿಂದ ನಿದ್ರೆಯಲ್ಲಿದ್ದ ಪ್ರದೀಪ್‌ಕುಮಾರ್ ಮತ್ತು ರವಿ ಮೇಲೆ ಹರಿದಿದೆ. ಕಾರಿನ ಚಕ್ರ ತಲೆಯ ಮೇಲೆ ಹರಿದ ಪರಿಣಾಮ ಪ್ರದೀಪ್‌ಕುಮಾರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ನೇಹಿತ ರವಿ ಮೇಲೂ ಕಾರಿನ ಚಕ್ರ ಹರಿದು ತಲೆ, ಮುಖ ಮತ್ತು ಕಾಲಿಗೆ ತೀವ್ರವಾದ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಮೃತ ಪ್ರದೀಪ್‌ಕುಮಾರ್ ಪತ್ನಿ ಅಂಬಿಕಾ ಬಿಳಿಗೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರು ದಾಖಲಿಸಿಕೊಂಡಿರುವ ಪೊಲೀಸರು ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ, ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಿದರು.

ಶಾಸಕರ ಸಾಂತ್ವನ: ಶಾಸಕ ದರ್ಶನ್ ಧ್ರುವನಾರಾಯಣ ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ವೈಯಕ್ತಿಕ ನೆರವು ನೀಡಿ, ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದ್ದಾರೆ.

ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಆಹಾರೋತ್ಪಾದನೆಯಲ್ಲಿ ಸವಾಲು ಎದುರಿಸಲು ಕೃಷಿ ಕ್ಷೇತ್ರ ಬಲಯುತವಾಗಬೇಕು

ಸುತ್ತೂರು ಜಾತ್ರೆಯ ಕೃಷಿ ಮೇಳ, ದನಗಳ ಜಾತ್ರೆ ಸಮಾರೋಪ

ನಂಜನಗೂಡು, ಜ19–ದೇಶ ಸ್ವಾತಂತ್ರ್ಯಾನಂತರ ಆಹಾರೋತ್ಪಾದನೆಯಲ್ಲಿ ಸ್ವಾವಲಂಭನೆ ಸಾಧಿಸಿದ್ದರೂ ಬದಲಾದ ಸನ್ನಿವೇಶದಲ್ಲಿ ಆಹಾರೋತ್ಪಾದನೆಯಲ್ಲಿ ಹೊಸ ಸವಾಲುಗಳು ಎದುರಾಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ಎದುರಿಸಲು ಕೃಷಿ ಕ್ಷೇತ್ರವನ್ನು ಬಲಯುತಗೊಳಿಸಬೇಕಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಅವರು ಸೋಮವಾರ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳ ಮತ್ತು ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಬದಲಾದ ಸನ್ನಿವೇಶದಲ್ಲಿ ಮಿತಿಮೀರಿದ ರಾಸಾಯನಿಕ ಬಳಕೆಯಿಂದಾಗಿ ಕೃಷಿ ಭೂಮಿ ವಿಷಯುಕ್ತವಾಗುತ್ತಿದೆ ಹೀಗಾಗಿ ಭವಿಷ್ಯದಲ್ಲಿ ಸಾವಯವ ಕೃಷಿಗೆ ಒತ್ತು ನೀಡಬೇಕಿದ್ದು ಆ ಮೂಲಕ ಸುಸ್ಥಿರ ಕೃಷಿಯೊಂದಿಗೆ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡಬೇಕಿದೆ. ವಿಶ್ವಮಟ್ಟದಲ್ಲಿ ಭಾರತಕ್ಕೆ ವ್ಯಾಪಕ ಮನ್ನಣೆಯಿದ್ದು ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆಯಾಗಿರುವ ಭಾರತ ಭವಿಷ್ಯದಲ್ಲಿ ಆಧುನಿಕ ಮತ್ತು ಶಕ್ತಿಶಾಲಿ ರಾಷ್ಟ್ರವಾಗಿಯೂ ಗುರ್ತಿಸಿಕೊಳ್ಳಬೇಕಾದಲ್ಲಿ ದೇಶದ 140 ಕೋಟಿಗೂ ಹೆಚ್ಚು ಸಂಖ್ಯೆಯ ಜನರ ಬುದ್ದಿಶಕ್ತಿಯನ್ನು ಬಳಸಿಕೊಂಡು ಪ್ರಗತಿಯತ್ತ ಸಾಗಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದನಗಳ ಜಾತ್ರೆಯಲ್ಲಿ ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ತೋರಿದ ರಾಸುಗಳಿಗೆ ಬಹುಮಾನ ವಿತರಿಸಲಾಯಿತು. ಸಭೆಯನ್ನುದ್ದೇಶಿಸಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್ ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ನಿರಂಜನ್ ಕುಮಾರ್, ಮೈಲ್ಯಾಕ್ ಮಾಜಿ ಅಧ್ಯಕ್ಷ ವೆಂಕಟೇಶ್, ಮೂಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ವೇಲುಸ್ವಾಮಿ, ಶರವಣನ್, ಉಪಾಧ್ಯಕ್ಷ ಸತೀಶ್, ಮುತ್ತುಕುಮಾರ್ ಮೊದಲಾದವರು ಭಾಗವಹಿಸಿದ್ದರು.

ದನಗಳ ಜಾತ್ರೆ ಬಹುಮಾನ ವಿಜೇತರ ವಿವರ

ಎತ್ತುಗಳ ವಿಭಾಗ: ಹಾಲು ಹಲ್ಲಿನ ಜೋಡಿ ರಾಸುಗಳು– ಶಿವಕುಮಾರ್, ಗಂಜಾಂ (ಪ್ರಥಮ), ನಾಗರಾಜು, ಮಳವಳ್ಳಿ (ದ್ವಿತೀಯ), ಮಹೇಶ್, ಲಲಿತಾದ್ರಿಪುರ(ತೃತೀಯ).

ಎರಡು ಹಲ್ಲಿನ ಜೋಡಿ ರಾಸುಗಳು– ಶಿವರಾಮು, ಗಂಜಾಂ(ಪ್ರಥಮ), ನವೀನ್ ಎಂ ಕೆ, ಮಾಡ್ರಹಳ್ಳಿ(ದ್ವಿತೀಯ), ಶಿವಮೂರ್ತಿ, ಮಾಡ್ರಹಳ್ಳಿ(ತೃತೀಯ).

ನಾಲ್ಕು ಹಲ್ಲಿನ ಜೋಡಿ ರಾಸುಗಳು– ಮಹದೇವಪ್ರಸಾದ್, ದೇವರಸನಹಳಿ (ಪ್ರಥಮ), ಜಗದೀಶ, ಕನ್ನಹಳ್ಳಿ (ದ್ವಿತೀಯ) ಪ್ರಮೋದ್ ಎಂ, ಇಮ್ಮಾವು(ತೃತೀಯ)

ಆರು ಹಲ್ಲಿನ ಜೋಡಿ ರಾಸುಗಳು– ಮನು, ಮಾದಯ್ಯನ ಹುಂಡಿ(ಪ್ರಥಮ), ಜಯರಾಮ, ಬೊಮ್ಮನಾಯಕನಹಳ್ಳಿ (ದ್ವಿತೀಯ), ಮಹೇಶ ಬಿ, ಜಂತಗಳ್ಳಿ (ತೃತೀಯ)

ಬಾಯಿಗೂಡಿದ ಹಲ್ಲಿನ ಜೋಡಿ ರಾಸುಗಳು– ಡಾ.ರಾಹುಲ್‌ಗೌಡ, ಬನ್ನೂರು (ಪ್ರಥಮ), ಗಂಗಸೇನಾ, ಬನ್ನೂರು (ದ್ವಿತೀಯ) ಶಶೀಧರ, ಹಳೆ ಕೆಂಪಯ್ಯನ ಹುಂಡಿ(ತೃತೀಯ)

ಮೊಳೆ ಹಲ್ಲಿನ ಜೋಡಿ ರಾಸುಗಳು– ಎಸ್ ಎಂ ದೀವಾಕರ್, ಸಿದ್ದಲಿಂಗಪುರ (ಪ್ರಥಮ), ನಟೇಶ್, ಗಂಜಾಂ (ದ್ವಿತೀಯ) ಹಾಗೂ ಮೂರನೆಯ ಬಹುಮಾನ ಎಂ ಎನ್ ನಂಜುಂಡಸ್ವಾಮಿ, ಮಂಡಕಳ್ಳಿ

ಉಳುವ ಹಸುಗಳ ವಿಭಾಗ: ಹಾಲು ಹಲ್ಲಿನ ಜೋಡಿ ರಾಸುಗಳು–ಮೊದಲನೆಯ ಬಹುಮಾನ, ಮಲ್ಲಿಕಾರ್ಜುಸ್ವಾಮಿ (ಕಳ್ಳೀಪುರ) ಎರಡನೆಯ ಬಹುಮಾನ ಅಭಿಷೇಕ್, ಕನ್ನಹಳ್ಳಿ, ಮೂರನೆಯ ಬಹುಮಾನ ಬಹುಗುಣ, ಕೂಡನಹಳ್ಳಿ

ಎರಡು ಹಲ್ಲಿನ ಜೋಡಿ ರಾಸುಗಳು– ಮೊದಲನೆಯ, ಬಹುಮಾನ ಬಸವಣ್ಣ, ಕಳ್ಳೀಪುರ, ಎರಡನೆಯ ಬಹುಮಾನ ಮಾದೇಶ (ಬಿ ಸೀಹಳ್ಳಿ), ಮೂರನೆಯ ಬಹುಮಾನ ಶಿವಣ್ಣಶೆಟ್ಟಿ, ಕಳ್ಳೀಪುರ

ನಾಲ್ಕು ಹಲ್ಲಿನ ಜೋಡಿ ರಾಸುಗಳು– ಮೊದಲನೆಯ ಬಹುಮಾನ ಸಂಜಯ್ ಎಂ.ಎಂ, ಮಲ್ಲಿಗೆ ಹಳ್ಳಿ

ಆರು ಹಲ್ಲಿನ ಜೋಡಿ ರಾಸುಗಳು– ಮೊದಲನೆಯ ಬಹುಮಾನ, ಆರ್. ಚಂದನ್, ಚೊಕ್ಕನಹಳ್ಳಿ, ಎರಡನೆಯ ಬಹುಮಾನ ಮಹದೇವನಾಯಕ, ಆಲತ್ತೂರು, ಮೂರನೆಯ ಬಹುಮಾನ ಪ್ರಶಾಂತ್ ಪಿ, ತಾಯುರು

ಬಾಯಿಗೂಡಿದ ಹಲ್ಲಿನ ಜೋಡಿ ರಾಸುಗಳು–ಮೊದಲನೆಯ ಬಹುಮಾನ ಮೋಹನ್, ಸಜ್ಜೆಹುಂಡಿ, ಎರಡನೆಯ ಬಹುಮಾನ ಪರಶಿವಮೂರ್ತಿ, ಮುದ್ದಾರ ಲಿಂಗಯ್ಯನಹುಂಡಿ, ಮೂರನೆಯ ಬಹುಮಾನ ಚಿಕ್ಕಸ್ವಾಮಿ, ರಾಗಿಬೊಮ್ಮನಹಳ್ಳಿ

ಮೊಳೆ ಹಲ್ಲಿನ ಜೋಡಿ ರಾಸುಗಳು– ಮೊದಲನೆಯ ಬಹುಮಾನ ರಾಜಯ್ಯ, ರಂಗನಾಥಪುರ, ಎರಡನೆಯ ಬಹುಮಾನ ಹುಚ್ಚೇಗೌಡ, ಬೀಡನ ಹಳ್ಳಿ, 3ನೇ ಬಹುಮಾನ ಲಕ್ಷ್ಮೀ, ಕೀಳನಪುರ

ಬಿತ್ತನೆ ಹೋರಿ ವಿಭಾಗ: ಮೊದಲನೆಯ ಬಹುಮಾನ ಪ್ರಶಾಂತ್, ಕೆ.ಆರ್, ಕುಪ್ಪರವಳ್ಳಿ, ಎರಡನೆಯಬಹುಮಾನ ರಘು, ಸುತ್ತೂರು, ಮೂರನೆಯ ಬಹುಮಾನ ಶಿವಶಂಕರ್ ಆರ್, ಮುಡಿಗುಂಡ

ಕುರಿಗಳ ವಿಭಾಗ: ಮೊದಲನೆಯ ಬಹುಮಾನ ಮಲ್ಲಿಕಾರ್ಜುನಸ್ವಾಮಿ, ಕಳ್ಳೀಪುರ



ಕೃಷಿ ಮೇಳ ಮತ್ತು ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿದರು.

ಮೈಸೂರು ಮಿತ್ರ

ಮಂಗಳವಾರ 20 ಜನವರಿ 2026

ಮಾದಿಗ ಸಮುದಾಯಕ್ಕೆ ಬಲ ತುಂಬಲು ಮಾದಾರ ಮಹಾಸಭಾ ಅಸ್ತಿತ್ವಕ್ಕೆ

ಇತರ ಸಮುದಾಯಗಳಿಗೆ ಇರುವಂತೆ ಮಾದಿಗ ಸಮುದಾಯಕ್ಕೂ ಮೆಡಿಕಲ್, ಇಂಜಿನಿಯರ್ ಕಾಲೇಜು ಆರಂಭ



ತಿ.ನರಸೀಪುರ ಪಟ್ಟಣದಲ್ಲಿನ ಮಾಜಿ ಎಂಎಲ್ಸಿ ಆರ್.ಧರ್ಮಸೇನಾ ನಿವಾಸಕ್ಕೆ ಭೇಟಿ ನೀಡಿದ್ದ ಸಚಿವ ಕೆ.ಹೆಚ್.ಮುನಿಯಪ್ಪ, ಸಮುದಾಯದ ಮುಖಂಡರೊಂದಿಗೆ ನಡೆಸಿದ ಸಮಾಲೋಚನೆ ಸಭೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿದರು.

> ರಾಜ್ಯದಲ್ಲಿ ಮಾದಿಗ ಸಮುದಾಯಕ್ಕೆ ನೈತಿಕ ಬಲವನ್ನು ನೀಡಲು, ಬಡವರ ಮಕ್ಕಳ ಶೈಕ್ಷಣಿಕ ವ್ಯಾಸಂಗಕ್ಕೆ ನೆರವಾಗಲು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕಲ್ಪಿಸಲು ಮಾದರ ಮಹಾಸಭಾ ವನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ತಾಲೂಕಿನಲ್ಲಿಯೂ ಸಾವಿರಾರು ಸಂಖ್ಯೆಯಲ್ಲಿ ಸದಸ್ಯತ್ವವನ್ನು ನೋಂದಣಿ ಮಾಡುವ ಮೂಲಕ ಮಹಾಸಭಾವನ್ನು ಬಲಗೊಳಿಸಬೇಕು.
> **–ಕೆ.ಹೆಚ್.ಮುನಿಯಪ್ಪ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವ**

ತಿ.ನರಸೀಪುರ, ಜ.19– ರಾಜ್ಯದಲ್ಲಿ ಸರ್ಕಾರದ ಸ್ವಾಯತ್ತ ಸಂಸ್ಥೆಯಂತೆ ಕಾನೂನು ಬದ್ಧವಾಗಿ ಅಸ್ತಿತ್ವಕ್ಕೆ ಬಂದಿರುವ ಮಾದಾರ ಮಹಾಸಭಾ ಮಾದಿಗ ಸಮುದಾಯಕ್ಕೆ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಬಲವನ್ನು ಕಲ್ಪಿಸಲು ಹಾಗೂ ಸಾಮಾಜಿಕ ನ್ಯಾಯದಂತೆ ಸಮಾನ ಅವಕಾಶಕ್ಕೆ ಕಾರ್ಯನಿರ್ವಹಿಸಲಿದೆ ಎಂದು ರಾಜ್ಯ ಸಮಿತಿ ಸದಸ್ಯರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ತಿಳಿಸಿದ್ದಾರೆ.

ಹಿರಿಯ ದಲಿತ ನಾಯಕ ಎನ್.ರಾಚಯ್ಯ ಅವರ ಪುತ್ರ ಚಿತ್ತಬೋದ್ ನಿಧನರಾಗಿದ್ದ ಹಿನ್ನೆಲೆಯಲ್ಲಿ ಪಟ್ಟಣದ ಗೋಪಾಲಪುರದಲ್ಲಿರುವ ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ಅವರ ನಿವಾಸಕ್ಕೆ ಸಚಿವ ಕೆ.ಹೆಚ್.ಮುನಿಯಪ್ಪ ಅವರೊಂದಿಗೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದ ಬಳಿಕ ಸಮುದಾಯ ಮುಖಂಡರೊಂದಿಗೆ ನಡೆದ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು ಇತರೆ ಸಮಾಜಗಳಿಗೆ ಇರುವಂತೆ ಮಾದಿಗ ಸಮುದಾಯಕ್ಕೆ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜ್ ತೆರೆಯಲಾಗುವುದು. ಈಗಾಗಲೇ 2 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರಿನಲ್ಲಿ ಕಾರ್ಯಾಲಯ ಕಾರ್ಯಾರಂಭಿಸಿದೆ ಎಂದರು.

ಇತ್ತೀಚೆಗೆ ನಿಧನರಾದ ಚಿತ್ತಬೋದ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಕುಟುಂಬದ ಸದಸ್ಯರಿಗೆ ಸಂತಾಪಕದ ನುಡಿಗಳನ್ನು ತಿಳಿಸಿದ ಸಚಿವ ಕೆಹೆಚ್.ಮುನಿಯಪ್ಪ ಸಮುದಾಯ ಮುಖಂಡರು ಹಾಗೂ ಸಾರ್ವಜನಿಕರ ಅಹವಾಲು ಆಲಿಸಿದರು. ಇದೇ ವೇಳೆ ಜನಕಲ್ಯಾಣ ಸಂಘದ ಅಧ್ಯಕ್ಷ ಡಿ.ಶಂಕರ್ ಸೇರಿದಂತೆ ಅರುಂಧತಿ ನೌಕರರ ಸಂಘ ಹಾಗೂ ಎನ್.ರಾಚಯ್ಯ ಸಹಕಾರ ಸಂಘದ ಪದಾಧಿಕಾರಿಗಳು ಮಾದಿಗ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮಗಳಿಗೆ ಪ್ರತ್ಯೇಕವಾಗಿ ಹೆಚ್ಚುವರಿ ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿಕೊಂಡರು. ಸ್ಥಳದಲ್ಲಿಯೇ ಇದ್ದ ಆಹಾರ ಇಲಾಖೆ ಉಪನಿರ್ದೇಶಕ ಮಂಟೇಸ್ವಾಮಿ ಅವರಿಗೆ ಈ ಬಗ್ಗೆ ಪರಿಶೀಲನೆ ನಡೆಸುವಂತೆ ಸಚಿವರು ತಾಕೀತು ಮಾಡಿದರು.

ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ, ಸಿ.ರಮೇಶ್, ಋತ್ವಿಕ್ ಬೋದ್, ಕಾರ್ತಿಕ್ ಬೋದ್, ಗೌತಮ್, ಆರ್.ಶಾರದ, ಸಚಿವರ ಆಪ್ತ ಸಹಾಯಕ ಪ್ರೇಮನಾಥ್, ಎಸ್ಸಿ ಕಾಂಗ್ರೆಸ್ ನಗರಾಧ್ಯಕ್ಷ ಕೆ.ರಮೇಶ್, ಮಹಾಸಭಾ ಚಾ.ನಗರ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ, ಅರುಂಧತಿ ನೌಕರರ ಸಂಘದ ಅಧ್ಯಕ್ಷ ಕೆಂಚಪ್ಪ, ಟಿಬಿಟಿ ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ಸಿ.ನಿಂಗರಾಜು, ಪುರಸಭೆ ಸದಸ್ಯ ಎಲ್.ಮಂಜುನಾಥ, ವಕೀಲರಾದ ರಂಗನಾಥ್, ಸುಮಿತ್ರ, ತಾ.ಪಂ ಮಾಜಿ ಸದಸ್ಯರಾದ ಕೆಬ್ಬೆ ಶಿವಸ್ವಾಮಿ, ರಂಗಸ್ವಾಮಿ, ಮೂಗೂರು ಸಿದ್ದರಾಜು, ಸಿ.ಮಹದೇವ, ಮುಖಂಡರಾದ ಹೆಚ್.ನಾಗರಾಜು, ಪಾಳ್ಯ ರಾಚಪ್ಪ, ಬಾಲರಾಜು, ಮುಳ್ಳೂರು ಮಂಜು, ರವಿ, ರವಿಪ್ರಕಾಶ್, ಮಹದೇವ ಗಾಣಿಗ, ರಾಕೇಶ್ ಕುಮಾರ್, ಕುಮಾರ ಸ್ವಾಮಿ, ರಾಜಶೇಖರ್, ಬೂದಬಾಳ್ ಮಹದೇವ್, ಕೆಜಗದೀಶ್, ಸಂದೇಶ, ಜಯಶಂಕರ್, ಎಂ.ರಾಜು ಹಾಗೂ ಇತರರು ಇದ್ದರು.

ಗ್ರಾಮಸ್ವರಾಜ್ ಯೋಜನೆ ತೆಗೆದುಹಾಕಲು ಹೊರಟಿರುವ ಕೇಂದ್ರದ ವಿರುದ್ಧ ಪ್ರತಿಭಟನೆ

ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಕೇಂದ್ರದ ವಿರುದ್ಧ ವಾಗ್ದಾಳಿ



ಹಂಪಾಪುರ ಗ್ರಾಪಂ ನೂತನ ಕಟ್ಟಡವನ್ನು ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಕೆ.ಆರ್.ನಗರ: ಗ್ರಾಮೀಣ ಭಾಗದಲ್ಲಿ ದುಡಿಯುವವರ ಉದ್ಯೋಗ ಕಿತ್ತುಕೊಂಡು ಮಹಾತ್ಮಗಾಂಧಿ ಅವರ ಕನಸಿನ ಯೋಜನೆ ಗ್ರಾಮ ಸ್ವರಾಜ್ ಯೋಜನೆ ತೆಗೆದು ಹಾಕಲು ಕೇಂದ್ರ ಸರ್ಕಾರ ಹೊರಟಿದ್ದು, ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಮೈಸೂರು ಜಿಲ್ಲಾ ಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಆಪಾದಿಸಿದರು.

ತಾಲೂಕಿನ ಹಂಪಾಪುರ ಗ್ರಾಮ ಪಂಚಾಯತಿಯ 40 ಲಕ್ಷ ವೆಚ್ಚದ ನೂತನ ಕಟ್ಟಡ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ದೇಶದ 19 ಕೋಟಿ ಜನರು ನರೇಗ ಯೋಜನೆಯಿಂದ ಬದುಕು ನಡೆಸುತ್ತಿದ್ದರು. 12 ಕೋಟಿ ಜನರು ವಲಸೆ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅವರ ಸ್ಥಿತಿಗತಿ ಬಗ್ಗೆ ಚಿಂತಿಸಿ ರಾಜ್ಯ ಸರ್ಕಾರ ನರೇಗ ಯೋಜನೆ ಬಗ್ಗೆ ಹೋರಾಟ ಮಾಡ ಲಾಗುತ್ತಿದೆ ಎಂದರು.

ಪಂಚಾಯತಿ ಆಡಳಿತವನ್ನು ಕೇಂದ್ರ ಸರ್ಕಾರ ದುರ್ಬಲಗೊಳಿಸಲು ಹೊರಟಿದೆ, ಈ ಕಾಯ್ದೆ ವಿರುದ್ದ ಜನರು ಹೋರಾಟ ಮಾಡಬೇಕು. ಗಾಂಧಿಜೀ ಅವರ ಸ್ವರಾಜ್ ಕಲ್ಪನೆಯ ಹಕ್ಕುಗಳು ಉಳಿಯಬೇಕು. ಇದಕ್ಕಾಗಿ ಎಲ್ಲಾ ಕಡೆ ಚರ್ಚೆಗಳು ನಡೆಯುತ್ತಿವೆ ಎಂದರು.

ದೇಶದಲ್ಲಿ ಸಂವಿಧಾನ ಅರಿತು ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರು ಕರ್ತವ್ಯ ನಿರ್ವಹಿಸಿದರೆ ದೇಶದಲ್ಲಿ ಯಾವುದೇ ಘರ್ಷಣೆ, ಗಲಾಟೆ, ಕೋಮು ಗಲಭೆ ನಡೆಯುವುದಿಲ್ಲ ಎಂದು ರಾಜ್ಯ ಸರ್ಕಾರದ ಜೊತೆ ಚರ್ಚೆ ಮಾಡದೇ ಏಕಾಏಕಿ ನರೇಗ ಯೋಜನೆಯನ್ನು ಕಿತ್ತು ಹಾಕಿದ್ದು ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ತೊಂದರೆಯಾಗಿದ್ದು ಕೇಂದ್ರ ಸರ್ಕಾರದ ಹೊಸ ಕಾಯ್ದೆಯಿಂದ ಗ್ರಾಮ ಆಡಳಿತ ನಿಷ್ಕ್ರಿಯವಾಗಿದೆ ಎಂದರು.

ಬಳಿಕ ಶಾಸಕ.ಡಿ.ರವಿಶಂಕರ್ ಮಾತನಾಡಿ, ಹಂಪಾಪುರ ಗ್ರಾಮದ ಜನತೆಯ ಬಹುದಿನದ ಬೇಡಿಕೆಯಾಗಿದ್ದ ಸ್ಮಶಾನಕ್ಕೆ ಹೋಗಲು ನಾಲೆಗೆ 74 ಲಕ್ಷವೆಚ್ಚದಲ್ಲಿ ಸೇತುವೆ ನಿರ್ಮಾಣ ಮಾಡಲಾಗಿದೆ ಎಂದರು.

ಜಿ.ಪಂ. ಸಿಇಓ ಯುಕೇಶ್ ಕುಮಾರ್, ತಾ.ಪಂ. ಆಡಳಿತ ಅಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಗ್ರಾಪಂ ಅಧ್ಯಕ್ಷೆ ವಿದ್ಯಾನಾರಾಯಣ ಶೆಟ್ಟಿ, ತಾ.ಪಂ.ಇಓ ವಿ.ಪಿ.ಕುಲದೀಪ್, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ಸದಸ್ಯರಾದ ಉಪಾಧ್ಯಕ್ಷ ಬಿ.ಎನ್.ರೇವಣ್ಣ, ಸದಸ್ಯರಾದ ಹರಿರಾಜು, ಹೆಚ್.ಕೆ.ನಾಗರಾಜು, ಕಲಾವತಿ, ಚೈತ್ರಾಲೋಕೇಶ್, ಹೆಚ್.ಎಸ್.ರಾಮೇಗೌಡ, ನಾಗಮಣಿ ರಮೇಶ್, ಎಂ.ಮಾನಸ, ಹೆಚ್.ಡಿ.ನಾಗೇಶ್, ಮಹದೇವಕುಮಾರ್, ಎಸ್.ವೈ.ಸೌಮ್ಯ, ಕಾರ್ತೀಕ, ಗೌರಮ್ಮ, ಜಿ.ಎನ್.ರಮ್ಯ, ಎಂ.ಬಿ.ಲೋಕೇಶ್, ಎಂ.ಎಸ್.ಗಿರೀಶ್, ರವಿಕುಮಾರ್, ಪಿಡಿಓ ವಿ.ಎ.ಅಶ್ವಿನಿ, ಸಹಕಾರ ಸಂಘದ ಅಧ್ಯಕ್ಷ ಹೆಚ್.ಪಿ.ಪ್ರಶಾಂತ್, ಜಿ.ಪಂ.ಎಇಇ ಎಲ್.ವಿನುತ್, ಗ್ರಾಮೀಣ ಕುಡಿಯುವ ನೀರು ಇಲಾಖೆ ಎಇಇ ಆನಂದ್, ಕೆಆರ್‌ಡಿಎಲ್ ಎಇಇ ಶೋಭಾ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಶಂಕರ್ ಮೂರ್ತಿ, ಕಟ್ಟಡದ ಗುತ್ತಿಗೆದಾರ ಜಗದೀಶ್ ಮೊದಲಾದವರು ಇದ್ದರು.

ಕೇರಳ ಲಾಟರಿ ಮಾರುತ್ತಿದ್ದ ವ್ಯಕ್ತಿ ಬಂಧನ

ಹೆಚ್.ಡಿ.ಕೋಟೆ ಬಳಿ 40 ಸಾವಿರ ರೂ. ಮೌಲ್ಯದ ಲಾಟರಿಗಳ ವಶ



ಹೆಚ್.ಡಿ.ಕೋಟೆ: ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಮಾರುತ್ತಿದ್ದ ಓರ್ವನನ್ನು ಅಂತರಸಂತೆ ಪೊಲೀಸರು ಬಂಧಿಸಿದ್ದಾರೆ.

ಹುಣಸೂರು ತಾಲೂಕಿನ ಬಸವಳ್ಳಿ ಗ್ರಾಮದ ಗೋವಿಂದನಾಯಕ ಬಂಧಿತ ಆರೋಪಿ. ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಮಾರಾಟ ಮಾಡುತ್ತಿದ್ದ, ಖಚಿತ ಮಾಹಿತಿ ಮೇರೆಗೆ ಅಂತರ ಸಂತೆ ಠಾಣೆಯ ಪಿಎಸ್ಐ ಚಂದ್ರಹಾಸ ಅವರು ಆರೋಪಿಯನ್ನು ಬಂಧಿಸಿ 40 ಸಾವಿರ ರೂ. ಮೌಲ್ಯದ ಕೇರಳ ಲಾಟರಿಯನ್ನು ವಶಪಡಿಸಿಕೊಂಡಿದ್ದಾರೆ.

ಈತ ಪ್ರತಿದಿನ ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಗ್ರಾಮದ ಬಳಿ ತನ್ನ ಬೈಕ್ ನಿಲ್ಲಿಸಿ ಮೈಸೂರು ಕಡೆಯಿಂದ ಬರುವ ಕೇರಳ ಬಸ್ಸಿನಲ್ಲಿ ತೆರಳಿ ಅಲ್ಲಿ ಲಾಟರಿ ಟಿಕೆಟ್ ಖರೀದಿಸಿ ನಂತರ ಅದೇ ಮಾರ್ಗವಾಗಿ ಕೇರಳ ಬಸ್ಸಿನಲ್ಲಿ ವಾಪಸ್ ಮಾದಾಪುರ ಬಳಿ ಇಳಿದು ಬೈಕಿನಲ್ಲಿ ಹೆಚ್.ಡಿ.ಕೋಟೆ ಮತ್ತು ಹುಣಸೂರು ಭಾಗಕ್ಕೆ ತೆರಳಿ ಅಲ್ಲಿ ಕೇರಳ ಲಾಟರಿ ಟಿಕೆಟ್‌ಗಳನ್ನು ಮಾರುತ್ತಿದ್ದಾನೆ ಎಂದು ಪೊಲೀಸರಿಗೆ ಖಚಿತ ಮಾಹಿತಿ ತಿಳಿದು, ಹೆಚ್.ಡಿ.ಕೋಟೆ ತಾಲೂಕಿನ ಉದ್ಬೂರು ಬಳಿ ಬಸ್ಸಿನಲ್ಲಿ ಬರುತ್ತಿದ್ದಾಗ ಪೊಲೀಸರು ಈತನನ್ನು ಬಂಧಿಸಿದ್ದಾರೆ ಎನ್ನಲಾಗಿದೆ.

ತಾಲೂಕಿನಲ್ಲಿ ಲಾಟರಿ ಜೊತೆಗೆ ಡ್ರಗ್ಸ್ ಮಾಫಿಯ ಹೆಚ್ಚಾಗುತ್ತಿದೆ. ಅಂತಹವರನ್ನು ಪೊಲೀಸರು ಬಂಧಿಸಬೇಕು. ಕೇರಳ ಲಾಟರಿ ಹಾಗೂ ಡ್ರಗ್ಸ್ ಮಾಫಿಯಾ ನಮ್ಮ ತಾಲೂಕಿನಲ್ಲಿ ಸಂಪೂರ್ಣ ನಿಲ್ಲಿಸಬೇಕು. ಇಂಥ ದಂಧೆಗಳನ್ನ ಪೊಲೀಸರು ಮಟ್ಟ ಹಾಕಬೇಕು ಎಂದು ಸಾರ್ವಜನಿಕರು ಪೊಲೀಸರಲ್ಲಿ ಮನವಿ ಮಾಡಿದ್ದಾರೆ. ಕಾರ್ಯಾಚರಣೆಯಲ್ಲಿ ಗೋಪಾಲಕೃಷ್ಣ, ನಾಗನಾಯಕ, ಚಾಲಕ ರಾಮಕೃಷ್ಣ ಇದ್ದರು.

ನಂಜನಗೂಡು ಲಲಿತಾ ಚಿತ್ರಮಂದಿರಕ್ಕೆ ಬಿಗ್ ಶಾಕ್

ಅನಧಿಕೃತ ಚಿತ್ರ ಪ್ರದರ್ಶನ ಆರೋಪ: ಅಧಿಕಾರಿಗಳ ದಿಢೀರ್ ಭೇಟಿ, ಪರಿಶೀಲನೆ



ನಂಜನಗೂಡು: ನಂಜನಗೂಡಿನ ಲಲಿತಾ ಚಿತ್ರಮಂದಿರದಲ್ಲಿ ಅನಧಿಕೃತವಾಗಿ ಚಿತ್ರ ಪ್ರದರ್ಶನ ನಡೆಸಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ತಾಲೂಕು ಕಚೇರಿ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಿತ್ರಮಂದಿರದ ರಹದಾರಿ ನವೀಕರಣ ಮಾಡಿಸದೇ ನಿಯಮ ಉಲ್ಲಂಘನೆ ಮಾಡಿಕೊಂಡು ಚಿತ್ರ ಪ್ರದರ್ಶನ ನಡೆಸಲಾಗುತ್ತಿದೆ ಎಂದು ಮಾಜಿ ನಗರಸಭಾ ಸದಸ್ಯ ದೇವಾ.ಪಿ, ಅವರು ಎರಡು ತಿಂಗಳ ಹಿಂದೆ ಜಿಲ್ಲಾಧಿಕಾರಿಗಳ ಕಚೇರಿಗೆ ದೂರು ಸಲ್ಲಿಸಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ತಹಸೀಲ್ದಾರ್ ಕಚೇರಿಗೆ ಪತ್ರ ಬರೆಯಲಾಗಿತ್ತು.

ಅದರಂತೆ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್ ಅವರು ರಾಜಸ್ವ ನಿರೀಕ್ಷಕರಿಗೆ ಪರಿಶೀಲನೆ ನಡೆಸುವಂತೆ ಸೂಚನೆ ನೀಡಿದ್ದರು. ಇಂದು ರಾಜಸ್ವ ನಿರೀಕ್ಷಕರಾದ ಹರೀಶ್ ಹಾಗೂ ಗ್ರಾಮ ಲೆಕ್ಕಾಧಿಕಾರಿ ಪ್ರೀತಮ್ ಅವರು ಲಲಿತಾ ಚಿತ್ರಮಂದಿರಕ್ಕೆ ಭೇಟಿ ನೀಡಿದಾಗ, ಅಲ್ಲಿ ಕನ್ನಡ ಚಿತ್ರ ಪ್ರದರ್ಶನವಾಗುತ್ತಿರುವುದು ಕಂಡು ಬಂದಿದೆ

ಚಿತ್ರಮಂದಿರ ನಿರ್ಮಾಣಗೊಂಡು ಹಲವು ವರ್ಷಗಳು ಕಳೆದಿದ್ದು, ಮೇಲ್ಛಾವಣಿ ಹಾಗೂ ಗೋಡೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಡಿಜೆ ಶಬ್ದದ ರಭಸದಿಂದ ಗೋಡೆಗಳು ಮತ್ತಷ್ಟು ದುರ್ಬಲಗೊಂಡಿದ್ದು, ಮೇಲ್ಛಾವಣಿ ಉದುರುವ ಸ್ಥಿತಿಯಲ್ಲಿದೆ. ಯಾವುದೇ ಕ್ಷಣದಲ್ಲಿ ಅನಾಹುತ ಸಂಭವಿಸುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರ ಸುರಕ್ಷತೆ ಬಗ್ಗೆ ಆತಂಕ ವ್ಯಕ್ತವಾಗಿದೆ.

ಇದಲ್ಲದೆ, ಚಿತ್ರಮಂದಿರದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಸೇರಿದಂತೆ ಹಲವು ದೂರುಗಳು ಇದ್ದರೂ ಸಹ ಚಿತ್ರ ಪ್ರದರ್ಶನ ಮುಂದುವರಿಸಲಾಗುತ್ತಿರುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ರಹದಾರಿ ನವೀಕರಣವೂ ಆಗದೆ ಇರುವುದರಿಂದ ನಿಯಮ ಉಲ್ಲಂಘನೆ ಸ್ಪಷ್ಟವಾಗಿದೆ.

ಇಷ್ಟೆಲ್ಲಾ ಗಂಭೀರ ದೂರುಗಳಿದ್ದರೂ ತಾಲೂಕು ಆಡಳಿತ ಮೌನ ವಹಿಸಿರುವುದು ಏಕೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಿದೆ. ಅನಾಹುತ ಸಂಭವಿಸಿದ ನಂತರ ಕ್ರಮ ಕೈಗೊಳ್ಳುವ ಬದಲು, ಈಗಲೇ ಜಿಲ್ಲಾ ಹಾಗೂ ತಾಲೂಕು ಆಡಳಿತ ಎಚ್ಚೆತ್ತುಕೊಂಡು ಚಿತ್ರಮಂದಿರ ಮಾಲೀಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬ್ರಹ್ಮಕುಮಾರಿ ಪ್ರಜಾಪಿತ ಈಶ್ವರೀಯ ವಿವಿಯಲ್ಲಿ ಬಾಬಾ ಲೇಖ್‌ರಾಜ್‌ರ ಸ್ಮೃತಿ ದಿನ ಆಚರಣೆ



ಹುಣಸೂರಿನ ಬ್ರಹ್ಮಕುಮಾರಿ ಪ್ರಜಾಪಿತ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಬಾಬಾ ಲೇಖ್‌ರಾಜ್ ಅವರ 57ನೇ ಸ್ಮೃತಿ ದಿನವನ್ನು ಆಚರಿಸಲಾಯಿತು.

ಹುಣಸೂರು, ಜ.19– ಪಟ್ಟಣದ ಬ್ರಹ್ಮಕುಮಾರಿ ಪ್ರಜಾಪಿತ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಬಾಬಾ ಲೇಖ್ ರಾಜ್ ಅವರ 57ನೇ ಸ್ಮೃತಿ ದಿನವನ್ನು ಆಚರಿಸಲಾಯಿತು.

ಬ್ರಹ್ಮಕುಮಾರಿ ಸಂಚಾಲಕಿ ನಾಗಶ್ರೀ ಅಕ್ಕನವರು ಬಾಬಾ ಅವರ ಪುಣ್ಯಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ವಿಶ್ವಾದ್ಯಂತ ಬಾಬಾ ಅವರ ಸ್ಮೃತಿ ದಿನಾಚರಣೆಯನ್ನು ಆಚರಿಸುತ್ತಿದ್ದು, 1876ರಲ್ಲಿ ಸಿಂಧು ಹೈದರಾಬಾದ್ ಕರಾಚಿಯಲ್ಲಿ ಕೃಪಾಲಾನಿ ವಂಶದ ಮುಖ್ಯೋಪಾಧ್ಯಾಯರ ಮಗನಾಗಿ ಜನಿಸಿದ ಬಾಬಾ ಲೇಖರಾಜ್ ಚಿಕ್ಕ ವಯಸ್ಸಿನಲ್ಲಿ ತಂದೆ ತಾಯಿಯನ್ನು ಕಳೆದುಕೊಳ್ಳುತ್ತಾರೆ. ಚಿಕ್ಕಪ್ಪನ ಆಶ್ರಯದಲ್ಲಿ ಗೋಧಿ ವ್ಯಾಪಾರದಲ್ಲಿ ತೊಡಗಿ ನಂತರ ದೊಡ್ಡ ವಜ್ರದ ವ್ಯಾಪಾರಿಯಾಗಿ ರಾಜ ಮಹಾರಾಜರ ಸಂಪರ್ಕದಲ್ಲಿಯೂ ಸಹ ಇರುತ್ತಾರೆ ಎಂದರು.

ಇವರು ಮೈಸೂರಿಗೂ ಸಹ ಆಗಮಿಸಿದ್ದು ಅವರ 60ನೇ ವಯಸ್ಸಿನಲ್ಲಿ ಈ ಜಗತ್ತಿನ ಪರಿವರ್ತನೆ ಹಾಗೂ ಹೊಸ ಪ್ರಪಂಚದ ಸ್ಥಾಪನೆಯ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ವಿಶ್ವದ ಶಕ್ತಿ ಪರಮಾತ್ಮನ ಆದೇಶದಂತೆ ಅವರ ತನುವನ್ನು ಸಹಕಾರ ಮಾಧ್ಯಮವಾಗಿ ಮಾಡಿಕೊಂಡು ಹೊಸ ಜಗತ್ತಿನ ಸ್ಥಾಪನೆಯಾಗಿ ಸಿಂಧು ಹೈದರಾಬಾದ್ ಕರಾಚಿಯಲ್ಲಿ 500 ಜನ ಮಾತೆಯರ ಕನ್ಯೆಯರ ನೇತೃತ್ವದಲ್ಲಿ ಓಂ ಮಂಡಳಿ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಹುಟ್ಟುಹಾಕಿ ಸರ್ವಸ್ವವನ್ನು ಅವರಿಗೆ ಅರ್ಪಣೆ ಮಾಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೂರ್ತಿ ಅಣ್ಣನವರು ಮಾತನಾಡಿದರು. ಬಾಬಾ ಅವರ ಪುಣ್ಯಸ್ಮೃತಿ ಕಾರ್ಯಕ್ರಮದಲ್ಲಿ ಸತ್ಯ ಎಂಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಸತ್ಯನಾರಾಯಣ, ಅನ್ನಪೂರ್ಣಕ್ಕ ಸಂದೀಪ, 150ಕ್ಕೂ ಹೆಚ್ಚು ಮಹಿಳೆಯರು, ಸಮಸ್ತ ಬ್ರಹ್ಮಕುಮಾರಿ ಸಮಾಜದ ಭಕ್ತಾದಿಗಳು ಭಾಗವಹಿಸಿದ್ದು ಸ್ಮರಣೆ ಕಾರ್ಯಕ್ರಮಕ್ಕೆ ಆಗಮಿಸಿದ ಬಂಧುಗಳಿಗೆ ಬೆಳಗಿನ ತಿಂಡಿ ಹಾಗೂ ಮಧ್ಯಾಹ್ನದ ಉಪಹಾರ ನೀಡಲಾಯಿತು.

ಹ್ಯಾಂಡ್ ಪೋಸ್ಟ್‌ನಿಂದ ಕೋಟೆವರೆಗೆ ಜೋಡಿ ರಸ್ತೆ

ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಘೋಷಣೆ



ವಾಯ್ಸ್ ಆಫ್ ಒಬಿಸಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರುಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

> ಶಾಸಕ ಅನಿಲ್ ಚಿಕ್ಕಮಾದುರವರ ಜೊತೆ, ನಮ್ಮ ತಂದೆ ಧ್ರುವನಾರಾಯಣ್ ಅವರು ಇದ್ದ ರೀತಿಯಲ್ಲೇ ನಾನು ಕೂಡ ಸಹೋದರನಾಗಿ ಅವರ ಜೊತೆಯಲ್ಲೇ ಸದಾ ಇರುತ್ತೇನೆ.
> **– ದರ್ಶನ್ ಧ್ರುವನಾರಾಯಣ್**

ಹೆಚ್.ಡಿ.ಕೋಟೆ: ಕೆಲವೊಂದು ಪಕ್ಷಗಳು ಒಂದು ಜಾತಿ ಅಥವಾ ಧರ್ಮಕ್ಕೆ ಮಾತ್ರ ಸೀಮಿತವಾಗಿವೆ, ಆದರೆ ಕಾಂಗ್ರೆಸ್ ಪಕ್ಷ ಸರ್ವ ಧರ್ಮಕ್ಕೂ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದ ಶಾಸಕ ಅನಿಲ್ ಚಿಕ್ಕಮಾದು ಹ್ಯಾಂಡ್ ಪೋಸ್ಟ್‌ನಿಂದ ಹೆಚ್.ಡಿ.ಕೋಟೆವರೆಗೆ ಜೋಡಿ ರಸ್ತೆಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಮತ್ತು ಹೆಚ್.ಡಿ.ಕೋಟೆ ಮತ್ತು ಸರಗೂರು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮ, ದೀರ್ಘಾವಧಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರಿಗೆ ಅಭಿನಂದನೆ, ಹಿರಿಯ ಕಾಂಗ್ರೆಸ್ ಮುಖಂಡರಿಗೆ ಸನ್ಮಾನ, ಅತಿ ಹೆಚ್ಚು ಡಿಜಿಟಲ್ ಸದಸ್ಯರ ನೊಂದಣಿ ಮಾಡಿದವರಿಗೆ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಓಬಿಸಿ ಜನಾಂಗವನ್ನು ಮುಂಚೂಣಿಗೆ ತರುವ ಉದ್ದೇಶದಿಂದ ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮವನ್ನು ನಮ್ಮ ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ನಾನು ತಾಲೂಕಿಗೆ ಶಾಸಕನಾಗಿ ಬಂದಾಗಿನಿಂದ ನನ್ನ ನೇತೃತ್ವದಲ್ಲಿ 5 ಚುನಾವಣೆಗಳು ನಡೆದಿದೆ. ಈ ಎಲ್ಲಾ ಚುನಾವಣೆಗಳಲ್ಲಿ ನಮ್ಮ ಪಕ್ಷವೇ ಮುಂಚೂಣಿಯಲ್ಲಿದೆ ಎಂದ ಅವರು ಮುಂದಿನ ದಿನಗಳಲ್ಲಿ ಗ್ರಾಪಂ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಯಲಿದ್ದು, ಚುನಾವಣೆ ಎದುರಿಸಲು ಪಕ್ಷವು ಸನ್ನದ್ಧವಾಗಿದೆ. ಬೂತ್ ಮಟ್ಟದಿಂದ ಕೆಲಸಗಳು ನಡೆಯುತ್ತಿದೆ ಎಂದರು.


ಮಳವಳ್ಳಿಯಿಂದ ಮಾನಂದವಾಡಿಯವರೆಗೆ 1600 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಯೋಜನೆ ರೂಪಿಸಲಾಗಿದ್ದು ಡಿಪಿಆರ್ ಸಿದ್ದಗೊಂಡಿದೆ. ಮುಂದಿನ ಮೂರು ನಾಲ್ಕು ತಿಂಗಳಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದ ಅವರು ಹ್ಯಾಂಡ್ ಪೋಸ್ಟ್‌ನಿಂದ ಹೆಚ್.ಡಿ.ಕೋಟೆಯವರೆಗೆ ಜೋಡಿ ರಸ್ತೆಗೆ 9 ಕೋಟಿ ರೂ. ಮಂಜೂರು ಮಾಡಿಸಲಾಗುತ್ತಿದೆ ಎಂದರು.

ಇದರೊಂದಿಗೆ ಹ್ಯಾಂಡ್ ಪೋಸ್ಟ್ ವೃತ್ತವನ್ನು ಅತ್ಯಾಧುನಿಕವಾಗಿ ನಿರ್ಮಾಣ ಮಾಡಲು ಸರ್ಕಾರದಿಂದ ಸುಮಾರು ನಾಲ್ಕು ಕೋಟಿ ರೂ. ಮಂಜೂರಾಗಿದೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು. ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮದಲ್ಲಿ ಓಬಿಸಿಗಳಿಗಾಗಿ ಆಯೋಜಿಸಿರುವ ಯೋಜನೆಗಳನ್ನು ದೊಡ್ಡ ಎಲ್‌ಇಡಿ ಪರದೆಯ ಮೇಲೆ ಬಿತ್ತರಿಸಲಾಯಿತು. ಕಾಂಗ್ರೆಸ್ ಹಿರಿಯ ಮುಖಂಡರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ವಾಯ್ಸ್ ಆಫ್ ಓಬಿಸಿ ಜಿಲ್ಲಾ ಉಸ್ತುವಾರಿ ಎನ್.ಆರ್. ನಾಗೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಕಂದೇಗಾಲ ಶಿವರಾಜು, ರಾಜ್ಯ ಉಪಾಧ್ಯಕ್ಷ ವಿನೋದ್ ರಾಜ್, ಕಾರ್ಯದರ್ಶಿ ಜಿತೀಶ್, ಕೋಟೆ, ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಏಜಾಜ್ ಪಾಷ, ಮಾದಪ್ಪ ಕೋಟೆ, ಸರಗೂರು, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷರುಗಳಾದ ಚಾಮರಾಜು, ಚಲುವ ರಾಜು, ಕೋಟೆ ಸರಗೂರು, ಓಬಿಸಿ ತಾಲೂಕು ಅಧ್ಯಕ್ಷರುಗಳಾದ ಭೈರೇಗೌಡ, ಚಿಕ್ಕಣ್ಣ, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪಕೋಟೆ, ಮಾಲೇಗೌಡ, ತಮ್ಮಣ್ಣೇಗೌಡ, ಚಿಕ್ಕ ವೀರನಾಯ್ಕ, ಬಿ.ಸಿ.ಬಸಪ್ಪ ಇದ್ದರು.

ಕಂಪಲಾಪುರದಲ್ಲಿ ಕೊಪ್ಪಲು ಮಹದೇಶ್ವರ ಪೂಜಾ ಮಹೋತ್ಸವ



ಕಂಪಲಾಪುರ ಕೊಪ್ಪಲು ಮಹದೇಶ್ವರ ದೇವಸ್ಥಾನದಲ್ಲಿ ಸೋಮವಾರ ಬಸವನಿಗೆ ದೀಕ್ಷೆ, ಪೂಜಾ ಮಹೋತ್ಸವ ನಡೆಯಿತು, ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಬೃಹತ್ ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ವರುಣ ವ್ಯಾಪ್ತಿಯ ಗ್ರಾಮಗಳನ್ನೂ ಸೇರಿಸಿ

ವರುಣ ಬಿಜೆಪಿ ಆರ್ಥಿಕ ಪ್ರಕೋಷ್ಠ ಸಂಚಾಲಕ ವರುಣ ಮಂಜು ಆಗ್ರಹ

> **ಬಸ್ ನಿಲುಗಡೆ ಇಲ್ಲ...**
> ಆಲಗೂಡು ಗ್ರಾಮ ತಿ.ನರಸೀಪುರ ಪುರಸಭೆಯ ಕಟ್ಟಕಡೆಯ ಗ್ರಾಮವಾಗಿದ್ದು ಇಲ್ಲಿ ಶೇ 80 ರಷ್ಟು ಪ.ಜಾತಿ, ವರ್ಗದ ಜನರು ವಾಸ ಮಾಡುತ್ತಿದ್ದು ಬಹುತೇಕ ಮಹಿಳೆಯರು ಹೊಟ್ಟೆ ಪಾಡಿಗಾಗಿ ಸೊಪ್ಪು ಮಾರಿ ಜೀವನ ಮಾಡುತ್ತಿದ್ದು, ವ್ಯಾಪಾರಕ್ಕಾಗಿ ಮೈಸೂರಿಗೆ ತೆರಳಲು ಸರ್ಕಾರಿ ಬಸ್‌ಗಳನ್ನು ಅವಲಂಭಿಸಿದ್ದಾರೆ. ಆದರೆ ಈ ಕಡೆ ಕುರುಬೂರು, ಆ ಕಡೆ ಗರ್ಗೇಶ್ವರಿ ವರೆಗೂ ನಿಲುಗಡೆ ನೀಡುವ ಬಸ್‌ಗಳು ಆಲಗೂಡು ಗ್ರಾಮದಲ್ಲಿ ಮಾತ್ರ ನಿಲ್ಲಿಸದೇ ತೆರಳುತ್ತಿದ್ದು ಇದರಿಂದ ಗ್ರಾಮಸ್ಥರು ತೀವ್ರ ತೊಂದರೆಗೆ ಸಿಲುಕಿದ್ದು, ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳು ಆಲಗೂಡು ಗ್ರಾಮದಲ್ಲಿ ನಿಲುಗಡೆ ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.



ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಆರ್ಥಿಕ ಪ್ರಕೋಷ್ಠ ಸಂಚಾಲಕ ವರುಣ ಮಂಜು ಮಾತನಾಡಿದರು.

ತಿ.ನರಸೀಪುರ, ಜ.19– ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಿದ್ದರಾಮಯ್ಯನವರ ತವರು ಕ್ಷೇತ್ರ ವರುಣ ಹೋಬಳಿಯ ಚಿಕ್ಕಹಳ್ಳಿ, ಚೋರನಹಳ್ಳಿ, ವಾಜಮಂಗಲ, ಯಾಂದಹಳ್ಳಿ, ವರುಣ ಗ್ರಾಮಗಳನ್ನು ಸೇರ್ಪಡೆ ಮಾಡಬೇಕೆಂದು ವರುಣ ಬಿಜೆಪಿ ಆರ್ಥಿಕ ಪ್ರಕೋಷ್ಠ ಸಂಚಾಲಕ ವರುಣ ಮಂಜು ಒತ್ತಾಯಿಸಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸಿದ್ದರಾಮಯ್ಯ ಅವರ ತವರು ಕ್ಷೇತ್ರ ವರುಣ ಹೋಬಳಿಯಾಗಿದ್ದು ಈ ವ್ಯಾಪ್ತಿಯ ಗ್ರಾಮಗಳಲ್ಲಿ ಶೇ70 ರಷ್ಟು ಭಾಗದಲ್ಲಿ ಈಗಾಗಲೇ ಬಡಾವಣೆಗಳ ನಿರ್ಮಾಣವಾಗಿದೆ. ಜನ ಅಲ್ಲಿ ವಾಸ ಮಾಡುತ್ತಿದ್ದಾರೆ, ಕೇವಲ 30 ರಷ್ಟು ರೈತರು ಮಾತ್ರವೇ ವ್ಯವಸಾಯ ಮಾಡುತ್ತಿದ್ದಾರೆ, ರೈತರ ಜಮೀನುಗಳಿಗೆ ಮಾಮೂಲಿನಂತೆ ತೆರಿಗೆ ವಿಧಿಸಬೇಕು. ಉಳಿದಂತೆ ಚಿಕ್ಕಹಳ್ಳಿ, ಚೋರನಹಳ್ಳಿ, ವಾಜಮಂಗಲ, ವರುಣ, ಯಾಂದಹಳ್ಳಿ ಗ್ರಾಮಗಳನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆ ಗೊಳಿಸಬೇಕು ಎಂದು ಒತ್ತಾಯಿಸಿದರು. ಈ ಗ್ರಾಮಗಳು ನಗರೀಕರಣವಾಗು ತ್ತಿದ್ದು, ಒಳಚರಂಡಿ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದರು.

ಐಟಿಐ ಕಾಲೇಜು ನಿರ್ಮಾಣವಾಗಲಿ: ವರುಣ ಹೋಬಳಿಯಲ್ಲಿ ಐಟಿಐ ಕಾಲೇಜು ನಿರ್ಮಿಸುವ ಮೂಲಕ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಚಿಂತನೆ ನಡೆಸಬೇಕಿದೆ ಎಂದ ಅವರು ಈಗಾಗಲೇ ಮೂಡಲಹುಂಡಿ ಬಳಿ ಐಟಿಐ ಕಾಲೇಜು ನಿರ್ಮಾಣ ಮಾಡಲಾಗಿದೆಯಾದರೂ ಅಲ್ಲಿ ಬಸ್ ಸಂಪರ್ಕದ ಕೊರತೆ ಇದೆ ಎಂದರು.

ಚಿಕ್ಕಹಳ್ಳಿಯವರೆಗೆ ನಿರ್ಮಿಸಲಾಗಿರುವ ದ್ವಿಪಥ ರಸ್ತೆಯನ್ನು ವರುಣ ಗ್ರಾಮದ ವೃತ್ತದ ವರೆಗೆ ವಿಸ್ತರಿಸುವ ಮೂಲಕ ಈ ಭಾಗದ ಸಂಸದರಾಗಿರುವ ಸುನೀಲ್ ಬೋಸ್‌ರವರು ಸಂಚಾರ ಸಮಸ್ಯೆಯಿಂದ ಉಂಟಾಗುತ್ತಿರುವ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಶ್ರಮಿಸಬೇಕು ಎಂದು ಆಗ್ರಹಿಸಿದರು.

ವರುಣ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಮುಖ್ಯಮಂತ್ರಿಗಳು ವಿಶೇಷ ಪ್ಯಾಕೇಜ್ ಘೋಷಿಸುವಂತೆ ಅವರು ಇದೇ ವೇಳೆ ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ವೆಂಕಟರಮಣಶೆಟ್ಟಿ ಮಾತನಾಡಿ ಚಾಮುಂಡೇಶ್ವರಿ ಕ್ಷೇತ್ರದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ರಾಜಕೀಯ ಪುನರ್ಜನ್ಮ ನೀಡಿದ ವರುಣ ಕ್ಷೇತ್ರದ ಚಿಕ್ಕಹಳ್ಳಿ, ವಾಜಮಂಗಲ ಗ್ರಾಮಗಳನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆಯಿಂದ ಹೊರಗಿಟ್ಟಿರುವುದು ದುರಂತವೇ ಸರಿ,ಈ ಗ್ರಾಮಗಳು ಮಹಾನಗರ ಪಾಲಿಕೆಗೆ ಕೂಗಳತೆ ದೂರದಲ್ಲೇ ಇವೆ, ಆದರೆ ಮುಖ್ಯಮಂತ್ರಿಗಳು ಯಾಕೆ ಈ ಗ್ರಾಮಗಳನ್ನು ಕೈಬಿಟ್ಟರು ಎಂಬುದು ಗೊತ್ತಿಲ್ಲ, ಹಾಗಾಗಿ ಮುಂದಿನ ದಿನಗಳಲ್ಲಿ ಮತ್ತೆ ಮಲತಾಯಿ ಧೋರಣೆ ತೋರಿದರೆ ಕಾಂಗ್ರೆಸ್ ಪಕ್ಷ ಹಾಗು ಸಿದ್ದರಾಮಯ್ಯರಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಈ ವೇಳೆ ಬಿಜೆಪಿ ಉಪಾಧ್ಯಕ್ಷ ಡಿ.ಎಲ್.ಮಹದೇವಪ್ಪ, ಮಾಧ್ಯಮ ವಕ್ತಾರ ಕಿರಗಸೂರು ಮಹದೇವಸ್ವಾಮಿ, ಗ್ರಾ.ಪಂ. ಸದಸ್ಯ ನಿರಂಜನ್, ಶಿವರಾಜು ಉಪಸ್ಥಿತರಿದ್ದರು.

ಕಾವೇರಿ ನದಿಯಲ್ಲಿ ವೈಭವದ ಚುಂಚನಕಟ್ಟೆ ಶ್ರೀರಾಮ ದೇವರ ತೆಪ್ಪೋತ್ಸವ



ಚುಂಚನಕಟ್ಟೆ: ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಕಾವೇರಿ ನದಿಯಲ್ಲಿ ಇತಿಹಾಸ ಪ್ರಸಿದ್ಧ ಶ್ರೀ ರಾಮ ದೇವರ ತೆಪ್ಪೋತ್ಸವ ಅದ್ದೂರಿಯಾಗಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ರಾತ್ರಿ ನಡೆಯಿತು.

ರಾತ್ರಿ 7ರ ಸುಮಾರಿನಲ್ಲಿ ಇಲ್ಲಿನ ರಾಮ ದೇವರ ದೇವಾಲಯದಿಂದ ರಾಮ, ಲಕ್ಷ್ಮಣ, ಸೀತಾಮಾತೆ ದೇವರುಗಳ ಉತ್ಸವ ಮೂರ್ತಿಗಳನ್ನು ಭಾರೀ ಪಟಾಕಿ ಸಿಡಿಸುವ ಮೂಲಕ ಜಯ ಘೋಷದೊಂದಿಗೆ ಅದ್ದೂರಿ ಮೆರವಣಿಗೆ ಮೂಲಕ ತರಲಾಯಿತು.

ಬಳಿಕ ಕಾವೇರಿ ನದಿಯ ದಡದಲ್ಲಿ ದೇವಾಲಯದ ಸಮೀಪವಿರುವ ಆಂಜನೇಯ ಗುಡಿಯ ಬಳಿ ವರ್ಣರಂಜಿತ ವಿದ್ಯುತ್ ಲೈಟ್‌ಗಳು ಮತ್ತು ಹೂವಿನ ಅಲಂಕಾರಗಳಿಂದ ಶೃಂಗಾರಗೊಂಡಿದ್ದ ತೆಪ್ಪದಲ್ಲಿ ಉತ್ಸವ ಮೂರ್ತಿಗಳನ್ನು ವಿಶೇಷ ಪೂಜೆ ಮತ್ತು ಮಂಗಳಾರತಿ ಮಾಡಿ ಪ್ರತಿಷ್ಠಾಪಿಸಲಾಯಿತು.

ಆನಂತರ ತೆಪ್ಪದಲ್ಲಿ ದೇವರ ಉತ್ಸವ ಮೂರ್ತಿಗಳನ್ನು ರಾತ್ರಿ 8 ಸಮಯದಲ್ಲಿ ಕಾವೇರಿ ನದಿಯ ಮಧ್ಯ ಭಾಗಕ್ಕೆ ತೆಗೆದುಕೊಂಡು ಹೋಗಿ ಮೂರು ಭಾರಿ ತಿರುಗಿ ಸುತ್ತಿದ್ದಂತೆಯೇ ತೆಪ್ಪದಲ್ಲಿದ್ದ ಹಿರಿಯ ಆಗಮಿಕ ವಿಜಯಕುಮಾರ್, ಅರ್ಚಕ ವೇಣು ಉತ್ಸವ ಮೂರ್ತಿಗಳಿಗೆ ಮಂಗಳಾರತಿ ಮಾಡಿದಾಗ ನೆರೆದಿದ್ದ ಸಾವಿರಾರು ಭಕ್ತಾಧಿಗಳು ರಾಮನಿಗೆ ಜೈಕಾರ, ಶ್ರೀರಮಣನ ಗೋವಿಂದಾ ಗೋವಿಂದಾ ಎಂಬ ಘೋಷಣೆಗಳನ್ನು ಮೊಳಗಿಸಿದರು. ನಂತರ ದಡಕ್ಕೆ ಬಂದ ಉತ್ಸವ ಮೂರ್ತಿಗಳಿಗೆ ಭಕ್ತರು ಚಪ್ಪಾಳೆ ತಟ್ಟಿ ಸ್ವಾಗತಿಸಿ ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ಪ್ರಾರ್ಥಿಸಿ ಪೂಜಾ ಕೈಂಕರ್ಯಗಳನ್ನು ಮಾಡಿದ ಬಳಿಕ ಮೂರ್ತಿಗಳನ್ನು ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಲಾಯಿತು. ಅಲ್ಲದೇ ತೆಪ್ಪೋತ್ಸವದ ಅಂಗವಾಗಿ ಗುಂಡ್ಲುಪೇಟೆಯ ಆನಂದ್ ಎಂಬುವರು ಭಾರೀ ಪಟಾಕಿ ಸಿಡಿಸಿ ತೆಪ್ಪೋತ್ಸವಕ್ಕೆ ಕಳೆ ತಂದರು.

ತೆಪ್ಪೋತ್ಸವಕ್ಕೆ ಬಂದ ಭಕ್ತಾಧಿಗಳಿಗೆ ದೇವಾಲಯದ ವತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಮೈಸೂರಿನ ಗುಡಮಾದನಹಳ್ಳಿಯಲ್ಲಿ 100 ಕೋಟಿ ವೆಚ್ಚದಲ್ಲಿ ನಿಮ್ಹಾನ್ಸ್ ಮಾದರಿ ಆಸ್ಪತ್ರೆ ನಿರ್ಮಾಣ

- ಒತ್ತುವರಿ ತೆರವುಗೊಳಿಸಿದ್ದ ಭೂಮಿಯಲ್ಲಿ 20 ಎಕರೆ ಆಸ್ಪತ್ರೆ ನಿರ್ಮಾಣಕ್ಕೆ ಹಸ್ತಾಂತರ
- ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ.ದಾಕ್ಷಾಯಿಣಿ ವಶಕ್ಕೆ ಭೂ ದಾಖಲೆ




ಗುಡಮಾದನಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಒತ್ತುವರಿ ತೆರವುಗೊಳಿಸಿದ ಭೂಮಿಯಲ್ಲಿ 20 ಎಕರೆಯನ್ನು ಮೈಸೂರು ಮೆಡಿಕಲ್ ಕಾಲೇಜು ಸುಪರ್ದಿಗೆ ಹಸ್ತಾಂತರಿಸಲಾಯಿತು.

ಮೈಸೂರು,ಜ.19(ಎಂಟಿವೈ)– ಮೈಸೂರು ಹೊರವಲಯದಲ್ಲಿ 100 ಕೋಟಿ ವೆಚ್ಚದಲ್ಲಿ ನಿಮ್ಹಾನ್ಸ್ ಮಾದರಿ 160 ಹಾಸಿಗೆಯುಳ್ಳ ಆಸ್ಪತ್ರೆ ನಿರ್ಮಾಣಕ್ಕೆ ಮೈಸೂರು ತಾಲೂಕಿನ ಗುಡಮಾದನಹಳ್ಳಿ ಗ್ರಾಮದಲ್ಲಿ ಇತ್ತೀಚೆಗಷ್ಟೇ ಒತ್ತುವರಿ ತೆರವುಗೊಳಿಸಿದ ಭೂಮಿಯಲ್ಲಿ 20 ಎಕರೆಯನ್ನು ಮೈಸೂರು ಮೆಡಿಕಲ್ ಕಾಲೇಜು ಸುಪರ್ದಿಗೆ ಹಸ್ತಾಂತರಿಸಲಾಗಿದೆ.

ಬೆಂಗಳೂರು ನಂತರ ವೇಗವಾಗಿ ಬೆಳೆಯುತ್ತಿರುವ ಮೈಸೂರು ಜನತೆಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ರಾಜ್ಯ ಸರ್ಕಾರ ನಿರ್ಧರಿಸಿ, ನಿಮ್ಹಾನ್ಸ್ ಮಾದರಿಯ ಬೃಹತ್ ಆಸ್ಪತ್ರೆ ನಿರ್ಮಾಣಕ್ಕೆ ಅಸ್ತು ಎಂದಿದೆ. ಅದಕ್ಕಾಗಿ ಹಂತ ಹಂತವಾಗಿ 100 ಕೋಟಿ ರೂ. ನೀಡಲಿದೆ. ಆಸ್ಪತ್ರೆ ನಿರ್ಮಾಣಕ್ಕಾಗಿ ಈ ಹಿಂದೆಯೇ ಗುರುತಿಸಲ್ಪಟ್ಟಿದ್ದ ಮೈಸೂರು ತಾಲೂಕು ವರುಣಾ ಹೋಬಳಿ ಗುಡಮಾದನಹಳ್ಳಿ ಸರ್ವೆ ನಂ.8ರಲ್ಲಿ 5.05 ಎಕರೆ, ಸರ್ವೆ ನಂ.60ರಲ್ಲಿ 6.10 ಎಕರೆ ಹಾಗೂ ಸರ್ವೆ ನಂ.68 ರಲ್ಲಿ 8.25 ಎಕರೆ ಸೇರಿದಂತೆ 20 ಎಕರೆ ಭೂಮಿಯ ದಾಖಲೆಗಳನ್ನು ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ.ದಾಕ್ಷಾಯಿಣಿ ಅವರಿಗೆ ಹಸ್ತಾಂತರಿಸಲಾಗಿದೆ.

ವಿಭಾಗಗಳು: ಉದ್ದೇಶಿತ ನಿಮ್ಹಾನ್ಸ್ ಮಾದರಿ ಆಸ್ಪತ್ರೆಯಲ್ಲಿ ನ್ಯೂರಾಲಜಿ, ನ್ಯೂರೋ ಸರ್ಜರಿ, ನ್ಯೂರೋ ರೇಡಿಯಾಲಜಿ, ನ್ಯೂರೋ ಅನಸ್ತೇಷಿಯಾ, ನ್ಯೂರೋ ಸೈಕ್ಯಾಟ್ರಿ, ಪುನರ್ವಸತಿ ಕೇಂದ್ರ(ರಿಹ್ಯಾಬಿಲಿಟೇಷನ್), ರಕ್ತನಿಧಿ, ಪ್ರಯೋಗಾಲಯ ಹೊಂದಿರುತ್ತವೆ.

160 ಹಾಸಿಗೆಯುಳ್ಳ ಆಸ್ಪತ್ರೆ: ಹೊಸದಾಗಿ ನಿರ್ಮಿಸಲಾಗುತ್ತಿರುವ ಆಸ್ಪತ್ರೆಯಲ್ಲಿ ವಿವಿಧ ವಾರ್ಡ್ ಹಾಗೂ ಪುನರ್ವಸತಿ ಕೇಂದ್ರ ಸೇರಿದಂತೆ 160 ಹಾಸಿಗೆ ಸಾಮರ್ಥ್ಯವಿದ್ದು, ಈ ಆಸ್ಪತ್ರೆ ನಿರ್ಮಾಣವಾದರೆ ಕೆ.ಆರ್.ಆಸ್ಪತ್ರೆ, ಜಿಲ್ಲಾಸ್ಪತ್ರೆ ಮೇಲಿನ ಒತ್ತಡ ನಿವಾರಣೆಯಾಗಲಿದೆ.

ಟೆಂಡರ್ ಪ್ರಕ್ರಿಯೆ: ಹೊಸ ಆಸ್ಪತ್ರೆ ನಿರ್ಮಾಣ ಸಂಬಂಧ ಟೆಂಡರ್ ಪ್ರಕ್ರಿಯೆ ಆರಂಭಿಸಲು ಸೂಚನೆ ನೀಡಲಾಗಿದೆ. ಈಗಾಗಲೇ ಆಸ್ಪತ್ರೆಯ ನೀಲಿನಕ್ಷೆ ಸಿದ್ಧಪಡಿಸಲಾಗಿದ್ದು, ವೈದ್ಯಕೀಯ ಸೇವೆ ಹಾಗೂ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸೌಲಭ್ಯ ಒದಗಿಸಲು ಪೂರಕ ವಾತಾವರಣವಿರುವ ಕಟ್ಟಡ ನಿರ್ಮಾಣಕ್ಕೆ ನೀಲಿನಕ್ಷೆ ರೂಪುಗೊಂಡಿದೆ. ಮುಂದಿನ 15 ದಿನದೊಳಗೆ ಟೆಂಡರ್ ಪ್ರಕ್ರಿಯೆ ನಡೆಯಲಿದ್ದು, ಅದಾದ ಬಳಿಕ ಆಸ್ಪತ್ರೆ ನಿರ್ಮಾಣ ಕಾಮಗಾರಿ ಆರಂಭಿಸಲು ಚಿಂತನೆ ನಡೆಸಲಾಗಿದೆ.

ಮೈಸೂರು ತಾಲೂಕು, ವರುಣ ಹೋಬಳಿ ವ್ಯಾಪ್ತಿಯ ಗುಡಮಾದನಹಳ್ಳಿಯಲ್ಲಿ ಹೊಸ ಆಸ್ಪತ್ರೆ ನಿರ್ಮಾಣಕ್ಕೆ ಈ ಹಿಂದೆಯೇ ಸ್ಥಳ ಗುರುತಿಸಲಾಗಿತ್ತು ಸರ್ಕಾರಿ ಆಸ್ತಿಯಲ್ಲಿಯೇ ಆಸ್ಪತ್ರೆ ನಿರ್ಮಾಣಕ್ಕೆ ಉದ್ದೇಶಿಸಲಾಗಿತ್ತು. ಆದರೆ, ಉದ್ದೇಶಿತ ಭೂಮಿಯನ್ನು 17 ಮಂದಿ ಒತ್ತುವರಿ ಮಾಡಿಕೊಂಡಿದ್ದರಿಂದ ಭೂಮಿ ಹಸ್ತಾಂತರ ಪ್ರಕ್ರಿಯೆಗೆ ತೊಡಕಾಗಿತ್ತು. ಕಳೆದ ತಿಂಗಳು ಭೂಮಿ ಸರ್ವೆ ಮಾಡಲು ಹೋಗಿದ್ದ ವರುಣಾ ಉಪ ತಹಶೀಲ್ದಾರ್ ಕಚೇರಿಯ ಸಿಬ್ಬಂದಿಗೆ ತಡೆಯೊಡ್ಡಿ, ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿತ್ತು ಈ ಸಂಬಂಧ ಪ್ರಕರಣವೂ ದಾಖಲಾಗಿತ್ತು.

ಈ ಹಿನ್ನೆಲೆಯಲ್ಲಿ ಮೈಸೂರು ತಹಶೀಲ್ದಾರ್ ಮಹೇಶ್ ಕುಮಾರ್, ಪೊಲೀಸರ ಬಿಗಿಭದ್ರತೆಯಲ್ಲಿ ಒತ್ತುವರಿಯಾಗಿದ್ದ ನಂ.8ರಲ್ಲಿ 5.05 ಎಕರೆ, ಸರ್ವೆ ನಂ.60 ರಲ್ಲಿ 6.10 ಎಕರೆ ಹಾಗೂ ಸರ್ವೆ ನಂ.68 ರಲ್ಲಿ 8.25 ಎಕರೆ ಗೋಮಾಳದ ಜಾಗವನ್ನು ಒತ್ತುವರಿ ತೆರವು ಮಾಡಿ, ತಮ್ಮ ವಶಕ್ಕೆ ಪಡೆದಿದ್ದರು. ಈ ವೇಳೆ ಒತ್ತುವರಿದಾರರು ಅಡ್ಡಿಪಡಿಸಿ, ಪ್ರತಿಭಟಿಸಿದ್ದರೂ, ತಹಶೀಲ್ದಾರ್ ಮುಲಾಜಿಲ್ಲದೆ ಸರ್ಕಾರಿ ಭೂಮಿ ವಶಕ್ಕೆ ಪಡೆದಿದ್ದರು.

ಒತ್ತುವರಿ ತೆರವುಗೊಳಿಸುತ್ತಿದ್ದಂತೆ ಆಸ್ಪತ್ರೆ ನಿರ್ಮಾಣದ ಭೂಮಿ ಹಾಗೂ ಭೂಮಿಯ ದಾಖಲೆಯನ್ನು ವರುಣ ನಾಡ ಕಚೇರಿಯ ಉಪತಹಶೀಲ್ದಾರರು, ಆರ್‌ಐ, ವಿಎ ಸೇರಿದಂತೆ ಇನ್ನಿತರರು ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ.ದಾಕ್ಷಾಯಿಣಿ, ಸಿಎಓ ಮಹೇಶ್ ಅವರಿಗೆ ಹಸ್ತಾಂತರಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತಲೈವಾರ್ ತಂಬಿ ತಲೈಮೈಯಿಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ವಾ ವಾಥಿಯಾರ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ ಅರಿವಿಗೆ ವಿಭಿನ್ನ ಸ್ಪರ್ಧೆ

ಮೈಸೂರು, ಜ.19– ಸ್ವಚ್ಛ ಭಾರತ ಅಭಿಯಾನ ಹಾಗೂ ಸ್ವಚ್ಛ ಸರ್ವೇಕ್ಷಣೆ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯು ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ ಅರಿವು ಮೂಡಿಸುವ ನಿಟ್ಟಿನಲ್ಲಿ ಎರಡು ವಿಭಿನ್ನ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

'ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ' ವಿಷಯದಡಿ 'ಪೋಸ್ಟರ್ ತಯಾರಿಕೆ ಸ್ಪರ್ಧೆ' ಹಾಗೂ 'ತ್ಯಾಜ್ಯದಿಂದ ಕಲಾಕೃತಿ ತಯಾರಿ(Waste to Artefact)' ಸ್ಪರ್ಧೆಗಳನ್ನು ಜ.22ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರ ಪಾಲಿಕೆ ಮುಖ್ಯ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದೆ.


ಪೋಸ್ಟರ್ ಅನ್ನು ಸ್ಥಳದಲ್ಲೇ ರಚಿಸಬೇಕಿದ್ದು, ಕಸದಿಂದ ನಿರ್ಮಿಸುವ ಕಲಾಕೃತಿಯನ್ನು ಮೊದಲೇ ಸಿದ್ಧಪಡಿಸಿಕೊಂಡು ತಂದು ಪ್ರದರ್ಶಿಸಬಹುದು. ಪ್ರತಿ ಸ್ಪರ್ಧೆಯಲ್ಲೂ ಪ್ರಥಮ ಸ್ಥಾನ ಪಡೆದವರಿಗೆ 5,000 ರೂ., ದ್ವಿತೀಯ ಸ್ಥಾನಕ್ಕೆ 3,000 ರೂ. ಹಾಗೂ ತೃತೀಯ ಸ್ಥಾನಕ್ಕೆ 2,000 ರೂ. ನಗದು ಬಹುಮಾನ ನೀಡಲಾಗುವುದು.

ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವ ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮೈಸೂರು ಮಹಾನಗರ ಪಾಲಿಕೆ(ಎಂಸಿಸಿ) ಸಾಮಾಜಿಕ ಜಾಲತಾಣ ಪುಟ(mysurucity corporation)ದಲ್ಲಿ ಪ್ರಕಟಿಸಿರುವ ಪೋಸ್ಟರ್‌ನಲ್ಲಿರುವ ಕ್ಯೂಆರ್ ಕೋಡ್ ಮೂಲಕ ಮುಂಚಿತವಾಗಿ ನೋಂದಣಿ ಮಾಡಿಕೊಳ್ಳಬೇಕು. ಇಲ್ಲವಾದರೆ ತಮ್ಮ ಶಾಲೆ/ಕಾಲೇಜಿನಿಂದ ಅನುಮತಿ ಪತ್ರ ತರಬೇಕು. ಹೆಚ್ಚಿನ ಮಾಹಿತಿಗೆ 9449841195 ಅಥವಾ 9449841196 ಸಂಪರ್ಕಿಸಬಹುದು ಎಂದು ನಗರ ಪಾಲಿಕೆ ಪ್ರಕಟಣೆ ತಿಳಿಸಿದೆ.

ಜ.25 ಮೈಸೂರಲ್ಲಿ ಮಹಾಜನ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ 'ಮಹಾ ಅನುಬಂಧ' ಕಾರ್ಯಕ್ರಮ

ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿ ಅನನ್ಯ ಭಟ್, ಕಂಪನಿ ಮಾಲೀಕ ಶ್ರೇಯಾಬಾಬು, ಬಿಗ್‌ಬಾಸ್ ವಿಜೇತ ಕಾರ್ತಿಕ್ ಮಹೇಶ್ ಸೇರಿ ದೇಶ-ವಿದೇಶಗಳ ಮೂರು ಸಾವಿರ ವಿದ್ಯಾರ್ಥಿಗಳು ಭಾಗಿ


ಕಾರ್ತಿಕ್ ಮಹೇಶ್


ಅನನ್ಯ ಭಟ್

ಮೈಸೂರು, ಜ.19(ಜಿಎ)–ಮಹಾಜನ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ 'ಮಹಾ ಅನುಬಂಧ' ಕಾರ್ಯಕ್ರಮವನ್ನು ಜ.25ರಂದು ಆಯೋಜಿಸಿದ್ದು, ಕಾಲೇಜಿನ ಹಿರಿಯ ವಿದ್ಯಾರ್ಥಿ ಖ್ಯಾತ ಗಾಯಕಿ ಅನನ್ಯ ಭಟ್, ರಿಲೆಂಟ್ ಕ್ರಿಯೇಷನ್ ಸೆಲೆಬ್ರಿಟಿ ಮ್ಯಾನೇಜ್‌ಮೆಂಟ್ ಕಂಪನಿ ಮಾಲೀಕ ಶ್ರೇಯಾಬಾಬು, ಬಿಗ್‌ಬಾಸ್ ವಿಜೇತರಾದ ಕಾರ್ತಿಕ್ ಮಹೇಶ್ ಸೇರಿದಂತೆ ದೇಶ–ವಿದೇಶಗಳಿಂದ ಮೂರು ಸಾವಿರ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರುಳೀಧರ್ ಈ ವಿಷಯ ತಿಳಿಸಿ, ಅಂದು ಸಂಜೆ 5ಗಂಟೆಗೆ ಜಯಲಕ್ಷ್ಮಿ ಪುರಂನ ಮಹಾಜನ ಪಿಯು ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ತಿರುಪತಿಯ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಐಐಎಸ್‌ಇಆರ್) ಮಾಜಿ ನಿರ್ದೇಶಕರಾದ ಡಾ.ಟಿ.ಎನ್.ಗಣೇಶ್ ಉದ್ಘಾಟಿಸಲಿದ್ದಾರೆ ಎಂದರು.

ಶಾಸಕರುಗಳಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಹೆಚ್‌ಎಂಟಿ ಕಂಪನಿಯ ನಿವೃತ್ತ ನಿರ್ದೇಶಕ ಎನ್. ರಾಮಾನುಜ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ವಿಶೇಷ ಆಹ್ವಾನಿತರಾಗಿ ಹಿರಿಯ ವಿದ್ಯಾರ್ಥಿಗಳಾದ ಪತ್ರಕರ್ತ ರವಿಕೋಟಿ, ಹಿನ್ನಲೆ ಗಾಯಕಿ ಅನನ್ಯ ಭಟ್, ರಿಲೆಂಟ್ ಕ್ರಿಯೇಷನ್ ಸೆಲೆಬ್ರಿಟಿ ಮ್ಯಾನೇಜ್‌ಮೆಂಟ್ ಕಂಪನಿ ಮಾಲಿಕರಾದ ಶ್ರೇಯಾಬಾಬು, ಬಿಗ್‌ಬಾಸ್ ವಿಜೇತರಾದ ಕಾರ್ತಿಕ್ ಮಹೇಶ್, ಹಾಸ್ಯ ಕಲಾವಿದ ಮನೋಹರ್ ಗೌಡ ಹಾಗೂ ಮಹಾಜನ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ದೇಶ–ವಿದೇಶಗಳಲ್ಲಿರುವ ಮೂರು ಸಾವಿರ ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಸಂಜೆ 4.30 ಗಂಟೆಗೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಲಘು ಉಪಹಾರದ ವ್ಯವಸ್ಥೆ ಇರುತ್ತದೆ. ಶಿಕ್ಷಣ ಸಂಸ್ಥೆಗೆ ಸಾರ್ಥಕ ಸೇವೆ ಸಲ್ಲಿಸಿದ ಅಧ್ಯಾಪಕರನ್ನು ಮತ್ತು ಸಾಧಕರನ್ನು ಗೌರವಿಸಲಾಗುವುದು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಹೆಚ್.ಆರ್. ತಿಮ್ಮೇಗೌಡ, ಡಾ.ಹೆಚ್. ಶ್ರೀಧರ್, ಡಾ.ಬಿ. ಆರ್.ಜಯಕುಮಾರಿ ಮತ್ತಿತರರು ಉಪಸ್ಥಿತರಿದ್ದರು.

ಸಂಕ್ರಾಂತಿ ಮನುಷ್ಯ ಸಂಬಂಧ ವೃದ್ಧಿಸುವ ಹಬ್ಬ

ಕವಿ, ಡಾ.ಜಯಪ್ಪ ಹೊನ್ನಾಳಿ ಬಣ್ಣನೆ



ಮೈಸೂರು, ಜ. 19– ನಮ್ಮ ದೇಶದ ಸನಾತನ ಸಂಸ್ಕೃತಿಯ ಪ್ರತಿಯೊಂದೂ ಹಬ್ಬದ ಹಿನ್ನೆಲೆಯಲ್ಲೂ ಕೇವಲ ಆಚರಣೆಗಳಿಲ್ಲ, ಬದಲಾಗಿ ಅಲ್ಲೊಂದು ಬ್ರಹ್ಮಾಂಡ ಸತ್ಯವಿದೆ. ಖಗೋಳ ವಿಜ್ಞಾನವಿದೆ. ಆಧ್ಯಾತ್ಮದ ಜೊತೆಗೆ ಮಾನವರನ್ನು ಒಂದಾಗಿಸುವ ಪ್ರಜ್ಞಾಪೂರ್ಣ ಪಾಠವೂ, ಸುಸಂಸ್ಕಾರವೂ ಇದೆ. ಅಂತೆಯೇ ಸಂಕ್ರಾಂತಿ ಮನುಷ್ಯ ಸಂಬಂಧ ವೃದ್ಧಿಸುವ ಹಬ್ಬವಾಗಿದೆ ಎಂದು ಕವಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ ಹೇಳಿದರು.

ಮೈಸೂರಿನ ಉತ್ತರ ಕರ್ನಾಟಕ ಬಳಗ, ಬಿ.ಇ.ಎಂ.ಎಲ್, ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಆಚರಿಸಿದ ಸಂಕ್ರಾಂತಿ ಸಂಭ್ರಮ–2026 ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜ್ಯೋತಿ ಬೆಳಗುವ ಮೂಲಕ ಉದ್ಘಾಟನೆ ಮಾಡಿ, ಮುಖ್ಯ ಅತಿಥಿಯ ನುಡಿಗಳನ್ನಾಡುತ್ತಿದ್ದ ಅವರು, ಸಂಕ್ರಾಂತಿ ಹಬ್ಬದ ಹಿನ್ನೆಲೆ ಹಾಗೂ ಎಳ್ಳು ಬೆಲ್ಲಗಳ ಹಿಂದಿರುವ ಅರ್ಥ ಆಶಯಗಳ ಕುರಿತು ವಿವರಿಸಿದರು.

ಈ ದಿನವನ್ನು ರಾಮನು ರಾವಣನನ್ನು ಕೊಂದು ಸೀತೆಯನ್ನು ಅಯೋಧ್ಯೆಗೆ ಕರೆ ತಂದ ದಿನವೆಂತಲೂ, ವೇದಗಳ ಕದ್ದೊಯ್ದ ಶಂಕಾಸುರನ ಶಿವ ಕೊಂದ ದಿನವೆಂತಲೂ, ಪಿತೃಗಳು ಸ್ವರ್ಗದಿಂದ ಅದೃಶ್ಯರಾಗಿ ನಮ್ಮ ಮನೆಗಳಿಗೆ ಬರುವ ದಿನವೆಂತಲೂ, ಸಾಯಲು ಹಾಗೂ ಹುಟ್ಟಲು ಅಮೃತಕಾಲ ಆರಂಭವಾಗುವ ದಿನವೆಂತಲೂ, ಸೂರ್ಯದೇವ ತಾನೇ ದೂರಮಾಡಿಕೊಂಡಿದ್ದ ತನ್ನ ಹೆಂಡತಿ ಛಾಯಾ ಹಾಗೂ ಮಗ ಶನಿಯನ್ನು ಅವರಿರುವ ಮಕರ ರಾಶಿಗೇ ಹೋಗಿ, ಪ್ರೀತಿಯಿಂದ ಅಪ್ಪಿ ಒಪ್ಪಿಕೊಂಡ ದಿನವೆಂತಲೂ ನಂಬಲಾಗಿದೆ. ಇದೇ ದಿನ ಸ್ವರ್ಗದ ಬಾಗಿಲು ತೆರೆಯಲಿದೆಯೆಂದೇ ಭೀಷ್ಮ ಬಾಣಗಳ ಹಾಸಿಗೆಯ ಮೇಲೆ ಸಾವನ್ನು ಮುಂದೂಡುತ್ತ ಈ ದಿನಕ್ಕಾಗಿ ಕಾದದ್ದು, ಈ ದಿನದಿಂದ ದೇವತೆಗಳ ಹಗಲು ಹೆಚ್ಚಾಗಿ, ರಾಕ್ಷಸರ ಇರುಳು ಕಡಿಮೆಯಾಗಲಿದೆಯೆಂದೂ ಹಿರಿಯರಲ್ಲಿ ನಂಬಿಕೆಯಿದೆ ಎಂದರು.

ಬೆಮೆಲ್ ಲಿಮಿಟೆಡ್ ಹಿರಿಯ ವ್ಯವಸ್ಥಾಪಕರಾದ ಮಹಮ್ಮದ್ ಉಸ್ಮಾನ್ ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ, ಬೆಮೆಲ್ ಬಳಕೆದಾರರ ಸಹಕಾರ ಸಂಘದ ನಿರ್ದೇಶಕರಾದ ಮಧುಸೂದನ ಪಿ., ಬೆಂಗಳೂರಿನ ಬೆಮೆಲ್ ಸಹಕಾರ ಸಂಘದ ನಿರ್ದೇಶಕ ಶೇಕನಗೌಡ ಕೆ. ಪಿ., ಬಳಗದ ಅಧ್ಯಕ್ಷ ಬಸವರಾಜ ಸಂಗಾಪುರ ಉಪಸ್ಥಿತರಿದ್ದರು.


ಎಸ್ ಎಸ್ ಪಾಟೀಲ್, ಗೋವಿಂದ ರೆಡ್ಡಿ, ವೆಂಕಟೇಶ್ ಆರ್ ಇನಾಮ್ದಾರ್, ಗಂಗಾಧರ ತಡಲಗಿ, ಮಹವೀರ್ ಬಿ.ಜೈನ್, ನಾರಾಯಣರೆಡ್ಡಿ, ಗಂಗಾರಾಮ್ ತರ್ಸೆ, ಶೇಷಾಚಲ ಜಿ., ಚಂದ್ರಶೇಖರ ಪುರಾಣಿಕ್, ಮಂಜುನಾಥ ಎಸ್ ಡಿ , ಜಂಬುಕೇಶ್ವರ, ಬಸವರಾಜ ಕಂಬಾರ, ಅಶೋಕ್ ಕುಮಾರ್ ಆರ್ ಎಲ್, ನವೀನ್ ಬಸ್ತಿ, ಚಂದ್ರಶೇಖರ ಶಿರಿಯಾಳಶೆಟ್ಟಿ, ಶ್ರೀ ಶೈಲ ಬಂಡೆ, ಚನ್ನಬಸಪ್ಪ ಈಟಿ, ವೀರಣ್ಣ ಅಡ್ಮನಿ ಪದಾಧಿಕಾರಿಗಳಾದ ಅಶೋಕ ಹೊಸಗುಂಟಿ, ಪಾಗುಂಟಪ್ಪ ಜೂಕೂರು, ನವೀನ ಬಸ್ತಿ, ಮಲ್ಲೇಶ್ ಗುರಿಕಾರ, ಶರಣಬಸಪ್ಪ, ಅರುಣಕುಮಾರ್ ಸಿಂಗ್, ಮಂಜುನಾಥ ಕೆ., ಅಂದಪ್ಪ ತಳವಾರ, ಶಿವಾನಂದ ಮಂಡಗನೂರು, ವಿಶ್ವರಾಧ್ಯ, ಮಧುಸೂದನ ಪಿ. ಮಲ್ಲೇಶಿ ಗುರಿಕಾರ, ಬಸವರಾಜ ಪಲ್ಲಕಿ ಮುಂತಾದವರು ಹಾಜರಿದ್ದರು.

ಜೆಎಸ್‌ಎಸ್ ರೇಡಿಯೋದಲ್ಲಿ ಅಪ್ರತಿಮ ಭಾಷಣಕಾರ ಮಾಸ್ಟರ್ ಹನುಮನಾಳು ಮಹೇಶ್



ಮೈಸೂರು, ಜ. 19– ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಸಮುದಾಯ ಬಾನುಲಿ ಕೇಂದ್ರದ ಕಾರ್ಯಕ್ರಮಗಳಲ್ಲಿ ಒಂದಾದ ಪ್ರತಿಭಾ ವಿಲಾಸ ಕಾರ್ಯಕ್ರಮದಲ್ಲಿ ತನ್ನ 12ನೇ ವಯಸ್ಸಿನಲ್ಲಿ 14 ಗಂಟೆ 2ನಿಮಿಷಗಳ ಕಾಲ ನಿರಂತರವಾಗಿ ಸ್ವಾಮಿ ವಿವೇಕಾನಂದರ ಕುರಿತು ಭಾಷಣ ಮಾಡುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದ ಮೈಸೂರಿನ ಪೂರ್ಣಚೇತನ ಶಾಲೆಯ ಮಾಸ್ಟರ್ ಹನುಮನಾಳು ಮಹೇಶ್ ಜ. 20ರಂದು ಬೆಳಗ್ಗೆ 8 ಗಂಟೆಗೆ ಹಾಗೂ ಸಂಜೆ 7 ಗಂಟೆಗೆ ಜೆಎಸ್‌ಎಸ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಲಿದ್ದಾರೆ. ಇವರನ್ನು ಶಿವಕುಮಾರ್ ಸಂದರ್ಶಿಸಲಿದ್ದಾರೆ ಶಿವಕುಮಾರ್.

ಕಂಚಿನ ಪದಕ ವಿಜೇತ



ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿ ಎನ್. ಮಣಿಕಂಠ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ 17ನೇ ಕರಾಟೆ ಚಾಂಪಿಯನ್ ಶಿಪ್ –2026 ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದಾನೆ.

ಮಹಿಳೆಯರ ಸ್ವಾವಲಂಬನೆ ಇಂದಿನ ಅಗತ್ಯ

ರೋಟರಿ ಡಿಸ್ಟ್ರಿಕ್ ಗವರ್ನರ್ ಪಿ.ಕೆ.ರಾಮಕೃಷ್ಣ ಪ್ರತಿಪಾದನೆ



ರೋಟರಿ ಡಿಸ್ಟ್ರಿಕ್ ಗವರ್ನರ್ ಪಿ.ಕೆ.ರಾಮಕೃಷ್ಣ ಮಾತನಾಡುತ್ತಿರುವುದು

ಮೈಸೂರು, ಜ. 19– ಉನ್ನತ ವ್ಯಾಸಂಗ ಮಾಡಿದ ಹಲವು ಮಹಿಳೆಯರು ತಮ್ಮದೇ ಆದ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಉನ್ನತ ಸಾಧನೆ ಮಾಡಿದ್ದಾರೆ. ಮಹಿಳೆಯರ ಸ್ವಾವಲಂಬನೆ ಇಂದಿನ ಅಗತ್ಯವಾಗಿದೆ ಎಂದು ರೋಟರಿ ಡಿಸ್ಟ್ರಿಕ್ ಗವರ್ನರ್ ಪಿ.ಕೆ.ರಾಮಕೃಷ್ಣ ಹೇಳಿದರು.

ರೋಟರಿ ಬೃಂದಾವನ್ ಶಾಲೆಯ ಸಭಾಂಗಣದಲ್ಲಿ ಬೃಂದಾವನ್ ರೋಟರಿ ಕ್ಲಬ್ ಮಹಿಳೆಯರಿಗಾಗಿ ಆಯೋಜಿಸಿದ್ದ ಒಂದು ದಿನದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಈ ರೀತಿಯ ಕಾರ್ಯಾಗಾರಗಳು ಮಹಿಳೆಯರಿಗೆ ಅರಿವನ್ನು ಮೂಡಿಸುವ ಮೂಲಕ ಅವರು ತಮ್ಮ ಕಾಲ ಮೇಲೆ ನಿಂತುಕೊಳ್ಳಲು ಅನುವು ಮಾಡಿಕೊಡುತ್ತವೆ ಎಂದು ತಿಳಿಸಿದ ಅವರು ಮಹಿಳೆಯರು ಉದ್ಯಮ ರಂಗವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರೋಟೇರಿಯನ್ ರವೀಂದ್ರ ಭಟ್ ಅವರು ಸರ್ಕಾರ ಮಹಿಳೆಯರ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ, ಅವುಗಳ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು. ಮಹಿಳೆಯರು ಸಮಾಜದಲ್ಲಿ ಹಲವು ಪಾತ್ರಗಳನ್ನು ನಿಭಾಯಿಸುವುದರಲ್ಲಿ ನಿಪುಣರಾಗಿದ್ದು ಮನೆಯ ಒಳಗೆ ಮತ್ತು ಹೊರಗೆ ಎರಡೂ ಕಡೆಯೂ ಉತ್ತಮ ಸಾಧನೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಎಲ್ಲಾ ಕ್ಷೇತ್ರದಲ್ಲಿಯೂ ಗಂಡಸರಿಗಿಂತ ಮಹಿಳೆಯರಿಗೆ ಹೆಚ್ಚು ಸವಾಲುಗಳಿದ್ದು ಉದ್ಯಮ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ತಾಳ್ಮೆಯನ್ನು ಮುಖ್ಯ ಎಂದು ತಿಳಿಸಿದ ರೋಟರಿ ಪಾಸ್ಟ್ ಡಿಸ್ಟ್ರಿಕ್ ಗವರ್ನರ್ ಹೆಚ್. ಆರ್. ಕೇಶವ್ ಮಹಿಳೆಯರು ಮುಂದೆ ಬರದಂತೆ ಕಾಲೆಳೆಯುವವರಿಂದ ದೂರ ಇರಬೇಕು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೋಟರಿ ಬೃಂದಾವನ್ ಕ್ಲಬ್ ನ ಅಧ್ಯಕ್ಷರಾದ ಕೆ.ವಿ. ಮಂಜುನಾಥ್ ಮನವಿ ಮಾಡಿದರು. ರೊ. ಅರುಣಾ ದೇವಿ ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಯಶಸ್ವಿ ಉದ್ಯಮಿ ಸುಧಾಮಣಿಯವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಸಬಲೀಕರಣ ಸಮಿತಿಯ ಅಧ್ಯಕ್ಷೆ ರೊ. ಮನೋರಮ ಭಟ್, ಉಪಾಧ್ಯಕ್ಷರಾದ ರೊ.ಶ್ರೀನಿಧಿಮೂರ್ತಿ, ರೋಟರಿ ಬೃಂದಾವನ್ ಕ್ಲಬ್‌ನ ಕಾರ್ಯದರ್ಶಿ ರೊ.ಜಯ ಶೆಟ್ಟಿ, ರೊ. ಚಂದ್ರಕಾಂತ್, ರೊ.ಸೋಮಶೇಖರ್, ರೋ. ಹರೀಶ್ ಕುಲಕರ್ಣಿ, ರೊ. ಮಹಾಂತೇಶ್ ಹಾಜರಿದ್ದರು.

ಚಾಮುಂಡಿಬೆಟ್ಟದಲ್ಲಿ ಪ್ರಸಾದ ಕಾಮಗಾರಿ ವಿರೋಧಿಸಿ ಹಿಂದೂಪರ ಸಂಘಟನೆ ಕಾರ್ಯಕರ್ತರು, ಗ್ರಾಮಸ್ಥರ ಪ್ರತಿಭಟನೆ

- ಕಾಮಗಾರಿ ಪ್ರದೇಶದ ಸುತ್ತ ಬ್ಯಾರಿಕೇಡ್ ಅಳವಡಿಕೆ
- ಪೊಲೀಸರು–ಪ್ರತಿಭಟನಾಕಾರರ ನಡುವೆ ವಾಗ್ವಾದ





ಚಾಮುಂಡಿಬೆಟ್ಟದಲ್ಲಿ ಪ್ರಸಾದ್ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಯನ್ನು ವಿರೋಧಿಸಿ ಹಿಂದೂಪರ ಸಂಘಟನೆಯ ಕಾರ್ಯಕರ್ತರು ಮತ್ತು ಚಾಮುಂಡಿಬೆಟ್ಟದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಬಲಚಿತ್ರದಲ್ಲಿ ಪೊಲೀಸರ ಸರ್ಪಗಾವಲಿನಲ್ಲಿ ಕಾಮಗಾರಿ ನಡೆಯುತ್ತಿರುವುದು.

ಮೈಸೂರು, ಜ.19(ಜಿಎ)–ಚಾಮುಂಡಿ ಬೆಟ್ಟದಲ್ಲಿ ನಡೆಯುತ್ತಿರುವ ಪ್ರಸಾದ್ ಯೋಜನೆಯ ಕಾಮಗಾರಿಯನ್ನು ವಿರೋಧಿಸಿ ಹಿಂದೂಪರ ಸಂಘಟನೆಯ ಕಾರ್ಯಕರ್ತರು ಮತ್ತು ಚಾಮುಂಡಿಬೆಟ್ಟದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಈ ಮಧ್ಯೆ ಪೊಲೀಸರ ಸರ್ಪಗಾವಲಿನಲ್ಲಿ ಕಾಮಗಾರಿ ಮುಂದುವರೆದಿದೆ.

ಚಾಮುಂಡಿಬೆಟ್ಟದ ದೇವಸ್ಥಾನದ ಪಕ್ಕದಲ್ಲಿ ಸೋಮವಾರ ಬೆಳಗ್ಗೆ ಕಾಮಗಾರಿ ಆರಂಭವಾಗುತ್ತಿದ್ದಂತೆ ಸ್ಥಳಕ್ಕೆ ಶ್ರೀರಂಗಪಟ್ಟಣ ಹನುಮ ಮಾಲದಾರಿಗಳ ಸಮಿತಿಯ ಪದಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಕಾಮಗಾರಿಯನ್ನು ನಿಲ್ಲಿಸುವಂತೆ ಆಗ್ರಹಿಸಿದರು. ಈ ವೇಳೆ ಗ್ರಾಮಸ್ಥರು ಅವರೊಡನೆ ಸೇರಿಕೊಂಡು ಪ್ರತಿಭಟನೆ ಮಾಡಲು ಮುಂದಾದರು.

ಬಿಗಿ ಪೊಲೀಸ್ ಭದ್ರತೆಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ನಡೆಯುತ್ತಿರುವ ಸುತ್ತಲೂ ಬ್ಯಾರಿಕೇಡ್ ಅಳಡಿಸಲಾಗಿತ್ತು. ಈ ನಡುವೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಗ್ವಾದವೂ ನಡೆಯಿತು. ನಂತರ ಚಾಮುಂಡಿಬೆಟ್ಟದ ಗ್ರಾಮ ಪಂಚಾಯಿತಿ ಕಚೇರಿ ಮುಂಭಾಗ ಕುಳಿತು ಜಿಲ್ಲಾಡಳಿತ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಶ್ರೀರಂಗಪಟ್ಟಣ ಹನುಮ ಮಾಲದಾರಿಗಳ ಸಮಿತಿಯ ವಿಭಾಗೀಯ ಸಂಚಾಲಕ ಲೋಹಿತ್ ಅರಸ್ ಮಾತನಾಡಿ, ದೇವಸ್ಥಾನದ 20 ಮೀಟರ್ ದೂರದಲ್ಲಿಯೇ ಭೂಮಿ ಅಗೆಯುತ್ತಿರುವುದರಿಂದ ರಾಜಗೋಪುರಕ್ಕೆ ಹಾನಿಯಾಗುತ್ತದೆ. ಜನರ ವಿರೋಧದ ನಡುವೆಯೂ 200 ವರ್ಷ ಹಳೆಯ ಪುರಾತನ ಕಲ್ಲು, ಮಣ್ಣನ್ನು ತೆಗೆದಿದ್ದಾರೆ. ಇದರಿಂದ ರಾಜಗೋಪುರಕ್ಕೆ ಹಾನಿಯಾಗುತ್ತದೆ ಎಂದು ಗ್ರಾಮಸ್ಥರು ಹೇಳಿದರೂ ಜಿಲ್ಲಾಡಳಿತ ಪ್ರಾಧಿಕಾರವನ್ನು ಕೇಳಿಸಿಕೊಳ್ಳುತ್ತಿಲ್ಲ ಎಂದು ಕಿಡಿಕಾರಿದರು.

ಪ್ರಸಾದ್ ಯೋಜನೆಯಂತೆ ಕಾಮಗಾರಿ ನಡೆಯುತ್ತಿಲ್ಲ. ಪಾರಂಪರಿಕತೆಯನ್ನು ಉಳಿಸಿಕೊಂಡು ಕಾಮಗಾರಿ ಮಾಡುವಂತೆ ಯೋಜನೆಯಲ್ಲಿ ಈಗಾಗಲೇ ತಿಳಿಸಲಾಗಿದ್ದು, ಅದನ್ನು ಮರೆತು ಪಾರಂಪರಿಕತೆಗೆ ಧಕ್ಕೆಯಾಗುವಂತೆ ಕೆಲಸ ಮಾಡಲಾಗುತ್ತದೆ. ಕಾಮಗಾರಿ ಕೈಬಿಡುವವರೆಗೂ ಹೋರಾಟ ಮುಂದುವರೆಯುತ್ತದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಚಂದನ್, ಮನು, ರವಿ, ಶ್ರೀನಿವಾಸ್, ಹಿಂದೂಪರ ಸಂಘಟನೆಯ ಮುಖಂಡರು ಹಾಗೂ ಚಾಮುಂಡಿ ಬೆಟ್ಟದ ಗ್ರಾಮಸ್ಥರು ಪಾಲ್ಗೊಂಡಿದ್ದರು.

ತಮ್ಮನ 40 ಬಾರಿ ಇರಿದು ಕೊಂದ ಅಣ್ಣ, ಅತ್ತಿಗೆ, ಮಕ್ಕಳ ಬಂಧನ!



ಲಿಂಗರಾಜು



ದರ್ಶನ್ ಮತ್ತು ಭರತ್

ಮಂಡ್ಯ,ಜ.19– ಇಡೀ ಜಿಲ್ಲೆಯನ್ನೇ ಬೆಚ್ಚಿ ಬೀಳಿಸಿದ್ದ ಆಸ್ತಿಗಾಗಿ ಸ್ವಂತ ಅಣ್ಣನೇ ತಮ್ಮನನ್ನು 40 ಬಾರಿ ಇರಿದು ಕೊಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ನಾಲ್ವರನ್ನು ಬಂಧಿಸಿದ್ದು, ಇನ್ನೋರ್ವರಿಗೆ ಶೋಧ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದರು.

ನಗರದ ತಮ್ಮ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.16ರಂದು ಮಂಡ್ಯ ತಾಲೂಕಿನ ಕೆರಗೋಡು ಪೊಲೀಸ್ ಠಾಣಾ ವ್ಯಾಪ್ತಿಯ ಮಾಯಪ್ಪನಹಳ್ಳಿಯ ಎಂ.ಎನ್. ಯೋಗೇಶ್ ಎಂಬಾತನನ್ನು ಆತನ ಅಣ್ಣ ಎಂ.ಎನ್. ಲಿಂಗರಾಜು, ಆತನ ಪತ್ನಿ ಹಾಗೂ ಮಕ್ಕಳು ಸೇರಿ ಮುಂಜಾನೆ ಮನೆಯ ದನದ ಕೊಟ್ಟಿಗೆಯಲ್ಲಿ ಅತೀ ಅಮಾನುಷವಾಗಿ ಹರಿತವಾದ ಚಾಕುವಿನಿಂದ ಹೊಟ್ಟೆ, ಬೆನ್ನು, ಕತ್ತಿನ ಭಾಗಕ್ಕೆ ಸರಿಸುಮಾರು 40 ಬಾರಿ ಇರಿದು ಕೊಂದಿದ್ದರು ಎಂದು ವಿವರಿಸಿದರು.

ಘಟನೆ ಸಂಬಂಧ ಮೃತ ಯೋಗೇಶ್ ಅವರ ಮತ್ತೋರ್ವ ಸಹೋದರ ಎಂ.ಎನ್.ಕೆಂಪೇಗೌಡ, ಕೆರಗೋಡು ಪೊಲೀಸ್ ಠಾಣೆಗೆ ದೂರು ನೀಡಿ, ತಮ್ಮ ಅಣ್ಣ ಮತ್ತು ಆತನ ಕುಟುಂಬ ಹತ್ಯೆ ಮಾಡಿದೆ ಎಂದು ಆರೋಪಿಸಿದ್ದರು. ಈ ಸಂಬಂಧ ಕೆರಗೋಡು ಪೊಲೀಸರು ಕಲಂ: 61(2), 332(2), 103(1), 3(5) ಬಿಎನ್ಎಸ್ ಕಾಯ್ದೆ ಪ್ರಕಾರ ದೂರು ದಾಖಲಿಸಿಕೊಂಡು ಆರೋಪಿಗಳ ವಿರುದ್ಧ ಎಫ್ಐಆರ್ ದಾಖಲಿಸಿದ್ದರು.

ಎಎಸ್ಪಿಗಳಾದ ತಿಮ್ಮಯ್ಯ ಮತ್ತು ಗಂಗಾಧರ ಮೂರ್ತಿ, ಡಿವೈಎಸ್ಪಿ ಲಕ್ಷ್ಮಿ ನಾರಾಯಣಪ್ರಸಾದ್ ಉಸ್ತುವಾರಿಯಲ್ಲಿ, ಕೆರಗೋಡು ಠಾಣೆ ಸಿಪಿಐ ಮಂಜುನಾಥ್, ಎಸ್ಐ ಕಾಶಿನಾಥ್ ಬಗಲಿ, ಶಿವಳ್ಳಿ ಠಾಣೆ ಎಸ್ಐ ರಾಘವೇಂದ್ರ ಕಠಾರಿ ನೇತೃತ್ವದಲ್ಲಿ ಸಿಬ್ಬಂದಿಗಳಾದ ಚಿಕ್ಕಯ್ಯ, ಕೃಷ್ಣ ಕುಮಾರ್, ಮಂಜುನಾಥ್, ಚೇತನ್ ಕುಮಾರ್, ಹೂವಣ್ಣ ವಿನಾಯಕ್ ದೊಡ್ಡಮನಿ, ಮಹಿಳಾ ಸಿಬ್ಬಂದಿಗಳಾದ ಶೃತಿ ಮತ್ತು ಪೂಜಾ ನೇತೃತ್ವದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿತ್ತು.

ನಾಲ್ವರ ಬಂಧನ: ಪ್ರಕರಣದ ಎ1 ಆರೋಪಿ ಮಾಯಪ್ಪನಹಳ್ಳಿ ಗ್ರಾಮದಲ್ಲಿ ಕೊಲೆಯಾದ ಯೋಗೇಶ್‌ನ ಮೊದಲ ಅಣ್ಣ ಎಂ.ಎನ್. ಲಿಂಗರಾಜು (50) ಬಿನ್ ಲೇಟ್ ನಿಂಗೇಗೌಡ, ಈತನ ಎರಡನೇ ಮಗ ಎ3 ಆರೋಪಿ ಭರತ್ ಬಿನ್ ಲಿಂಗರಾಜು (21)ನನ್ನು ಜ.18ರಂದು ರಾತ್ರಿ 10.30ರಲ್ಲಿ ಮಂಡ್ಯ ನಗರದ ಬಿಜಿಎಸ್ ಕಲ್ಯಾಣ ಮಂಟಪದ ಬಳಿ ಹಾಗೂ ಪ್ರಕರಣದ ಎ2 ಆರೋಪಿ ಲಿಂಗರಾಜುವಿನ ಪತ್ನಿ ಹಾಗೂ ಎ4 ಆರೋಪಿ ಲಿಂಗರಾಜುವಿನ ಮೊದಲನೇ ಮಗ ದರ್ಶನ್ (24)ನನ್ನು ಜ.19ರಂದು ಬೆಳಗ್ಗೆ 9 ಗಂಟೆಗೆ ಕೆ.ಎಂ. ದೊಡ್ಡಿ ಬಳಿಯ ತಿಟ್ಟ ಮಾರನಹಳ್ಳಿ ಗ್ರಾಮದಲ್ಲಿ ಬಂಧಿಸಿದ್ದು, ಕೊಲೆಗೆ ಸಹ ಕುಸಿದ ಲಿಂಗರಾಜುವಿನ ಸಂಬಂಧಿ, ಇದೇ ಗ್ರಾಮದ ಓರ್ವ ಮಹಿಳೆ ತಲೆ ಮರೆಸಿ ಕೊಂಡಿದ್ದು, ಆಕೆಯ ಬಂಧ ನಕ್ಕೆ ಬಲೆ ಬೀಸಲಾಗಿದೆ ಎಂದರು.



ಡಾ.ಶೋಭಾರಾಣಿ

ಕೊಲೆಯಾದ ಮತ್ತು ಕೊಲೆ ಮಾಡಿದ ವ್ಯಕ್ತಿಗಳ ತಂದೆ ಲೇ.ನಿಂಗೇಗೌಡರು ಹಲವು ವರ್ಷಗಳ ಹಿಂದೆಯೇ ವಿಧಿವಶರಾಗಿದ್ದು, ಅವರಿಗೆ ಗ್ರಾಮದಲ್ಲಿ 19 ಎಕರೆ ಜಮೀನಿತ್ತು. ಈ ಪೈಕಿ 4 ಎಕರೆ ತಕರಾರು ಜಮೀನಾಗಿದ್ದು, ಉಳಿದ ಜಮೀನನ್ನು ಲಿಂಗರಾಜು ತನ್ನ ಹೆಸರಿಗೆ ಮಾಡಿಸಿಕೊಂಡು ಅದರಲ್ಲಿ ಒಂದಷ್ಟು ಜಮೀನನ್ನು ಪತ್ನಿ ಹೆಸರಿಗೆ ವರ್ಗಾವಣೆ ಮಾಡಿದ್ದ. ನಿಂಗೇಗೌಡರಿಗೆ ಒಟ್ಟು ಮೂವರು ಪುತ್ರರಿದ್ದು, ಲಿಂಗರಾಜು ಮೊದಲನೆಯವನಾದರೇ ಕೆಂಪೇಗೌಡ ಎರಡನೆಯವನು. ತದ ನಂತರ ಹೆಣ್ಣು ಮಕ್ಕಳಿದ್ದು, ಕಡೆಯ ಮಗ ಯೋಗೇಶ್ ಆಗಿದ್ದ. ಆಸ್ತಿಗಾಗಿ ಲಿಂಗರಾಜು ಕೆಂಪೇಗೌಡ, ಯೋಗೇಶ್ ನಡುವೆ ಆಗಾಗ್ಗೆ ಕಲಹ ನಡೆಯುತ್ತಿತ್ತು ಎಂದು ತಿಳಿಸಿದರು.

ಮೂವರ ಪೈಕಿ ಹಿರಿಯಣ್ಣ ಎಲ್ಲಾ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದರೆ ಎರಡನೇಯವರಾದ ಕೆಂಪೇಗೌಡರಿಗೆ ಕಾನೂನು ಜ್ಞಾನ ಕಡಿಮೆ ಇತ್ತು. ಜೊತೆಗೆ ಇವರ ಮಗ ವಿಶೇಷಚೇತನ ನಾಗಿದ್ದ. ಆದರೆ ಕಡೆ ಸಹೋದರ ಯೋಗೇಶ್ ಕಾನೂನು ಜ್ಞಾನ ಹೊಂದಿದವನಾಗಿದ್ದು, ಆಸ್ತಿ ಸಂಬಂಧ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿದ್ದರು. ಇದರಿಂದ ಕುಪಿತಗೊಂಡಿದ್ದ ಲಿಂಗರಾಜು ಹಲವು ಬಾರಿ ಜೀವ ಬೆದರಿಕೆ ಹಾಕಿದ್ದ ಈ ಹಿನ್ನೆಲೆಯಲ್ಲಿ ಯೋಗೇಶ್ ಮನೆ ಸುತ್ತಮುತ್ತ ಸಿಸಿ ಕ್ಯಾಮರಾ ಸಹ ಅಳವಡಿಸಿದ್ದ ಎಂದರು.

ಜೊತೆಗೆ ಸದ್ಯದಲ್ಲೇ ಯೋಗೇಶ್ ಮದುವೆ ಸಹ ಇತ್ತು. ಇದರಿಂದ ಮುಂದೆ ಮತ್ತಷ್ಟು ಸಮಸ್ಯೆಯಾಗಬಹುದೆಂಬುದನ್ನು ಅರಿತ ಲಿಂಗರಾಜು, ತನ್ನ ಮನೆ ಪಕ್ಕದಲ್ಲೇ ಇದ್ದ ಸಹೋದರ ಯೋಗೇಶ್‌ನನ್ನು ಕೊಲೆ ಮಾಡಲೇಬೇಕೆಂಬ ಉದ್ದೇಶದಿಂದ ಹೊಂಚು ಹಾಕಿ ತನ್ನ ಇಡೀ ಕುಟುಂಬ ಕೊಟ್ಟಿಗೆಯಲ್ಲಿ ಆತ ಇರುವಾಗ ಏಕಾ ಏಕಿ ದಾಳಿ ಮಾಡಿ ಭೀಕರವಾಗಿ ಕೊಂದಿದ್ದಾ ರೆಂದು ಎಸ್ಪಿ ತಿಳಿಸಿದ್ದಾರೆ.

ಮಂಡ್ಯ ನಗರದಲ್ಲಿ ಎಐ ಕ್ಯಾಮರಾ ಅಳವಡಿಕೆ ಪ್ರಗತಿಯಲ್ಲಿದೆ: ಹೆಲ್ಮೆಟ್ ಸೇರಿದಂತೆ ಸಂಚಾರಿ ನಿಯಮ ಪಾಲನೆ ಮಾಡದ ವಾಹನ ಸವಾರರಿಗೆ ದಂಡ ವಿಧಿಸುವ ನಿಟ್ಟಿನಲ್ಲಿ ಮಂಡ್ಯ ನಗರದ ಪ್ರಮುಖ ರಸ್ತೆಗಳ 3 ಎಐ ಕ್ಯಾಮರಾವನ್ನು ಅಳವಡಿಸಲು ನಿರ್ಧರಿಸಲಾಗಿದ್ದು, ಈ ಯೋಜನೆ ಪ್ರಗತಿಯಲ್ಲಿದೆ. ಆದರೆ ಈಗಾಗಲೇ ಕ್ಯಾಮರಾ ಚಾಲ್ತಿಯಲ್ಲಿದೆ ಎಂಬುದು ಕೇವಲ ಊಹಾಪೋಹ ಎಂದು ಎಸ್ಪಿ ಶೋಭಾರಾಣಿ ಸ್ಪಷ್ಟಪಡಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಹರಡುತ್ತಿರುವ ಸುದ್ದಿ ಸುಳ್ಳಾಗಿದ್ದು, ಸದ್ಯದಲ್ಲೇ 3 ಕಡೆ ಎಐ ಕ್ಯಾಮರಾ ಅಳವಡಿಸಲಾಗುವುದು. ಜೊತೆಗೆ ಕ್ಯಾಮರಾ ಚಾಲ್ತಿಗೆ ಬರುವ ದಿನಾಂಕವನ್ನು ಮಾಧ್ಯಮಗಳ ಮೂಲಕ ಜನರಿಗೆ ತಿಳಿಸಲಾಗುವುದು ಎಂದು ಹೇಳಿದರು.

ಮಕ್ಕಳಿಗೆ ಅವಿಭಕ್ತ ಕುಟುಂಬದ ಪರಿಕಲ್ಪನೆಯ ಚಿಕ್ಕವಯಸ್ಸಲ್ಲೇ ಪರಿಚಯಿಸಿ

ಅಖಿಲ ಭಾರತ ಟೋಳಿ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಸಲಹೆ

ಮೈಸೂರು, ಜ.19(ಎಸ್‌ಪಿಎನ್)– ಹಿಂದೂಗಳೇ ಒಗ್ಗಟ್ಟಾಗಿ, ನಿಮ್ಮ ಮಕ್ಕಳಿಗೂ ಅವಿಭಕ್ತ ಕುಟುಂಬದ ಪರಿಕಲ್ಪನೆಯನ್ನು ಚಿಕ್ಕವಯಸ್ಸಿನಿಂದಲೇ ಪರಿಚಯಿಸಿ, ಹಿಂದೂ ಸಾಂಸ್ಕೃತಿಕ ಚಟುವಟಿಕೆಗಳಿಂದ ಸದಾ ಸಕ್ರಿಯವಾಗಿರಿ ಎಂದು ಕುಟುಂಬ ಪ್ರಬೋಧನ್, ಅಖಿಲ ಭಾರತ ಟೋಳಿ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಹಿಂದೂ ಸಮುದಾಯಕ್ಕೆ ಕಿವಿಮಾತು ಹೇಳಿದರು.

ಮೈಸೂರು ಹೂಟಗಳ್ಳಿಯ ಸಂತೆಮಾಳದಲ್ಲಿ ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿ ವತಿಯಿಂದ ಭಾನುವಾರ ಏರ್ಪಡಿಸಿದ್ದ ಹಿಂದೂ ಸಮಾಜೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಿಮ್ಮ ಮಕ್ಕಳೊಂದಿಗೆ ಸಮಯ ಕಳೆಯಿರಿ, ಮೊಬೈಲ್, ಟಿವಿ, ಕಂಪ್ಯೂಟರ್‌ಗಳಿಂದ ದೂರವಿರಿ. ನಿಮ್ಮ ನಡವಳಿಕೆಯಿಂದ ನಿಮ್ಮ ಮನೆಯ ಪರಿಸರ ಬದಲಾಗುತ್ತದೆ ಎಂದು ಸಲಹೆ ನೀಡಿದರು.

ಹಿಂದೂ ಧರ್ಮದ ಹಬ್ಬ–ಹರಿದಿನಗಳು ಸೇರಿದಂತೆ ಹಿಂದೂ ಧರ್ಮ ಪರಂಪರೆಗಳನ್ನು ಮುಂದಿನ ಪೀಳಿಗೆಗೂ ಪರಿಚಯಿಸಬೇಕು. ವಿದೇಶಿ ಪರಂಪರೆಗೆ ಮಾರು ಹೋಗುತ್ತಿರುವ ಇಂದಿನ ಪೀಳಿಗೆಗೆ ಸ್ವದೇಶಿ ಪ್ರೇಮ, ಮಾತೃಪ್ರೇಮ ಹಾಗೂ ಕುಟುಂಬದ ಜವಾಬ್ದಾರಿಗಳ ಬಗ್ಗೆ ಅರಿವು ಮೂಡುತ್ತಿಲ್ಲ. ಇದರಿಂದಾಗಿ ಹಿಂದೂ ಧರ್ಮದಲ್ಲಿ ಒಡಕು ಮೂಡುತ್ತಿದೆ ಎಂದು ವಿದೇಶಗಳಲ್ಲಿ ಅತೀ ಹೆಚ್ಚು ಪ್ರಚಾರವಾಗುತ್ತಿರುವುದರ ಬಗ್ಗೆ ಜಾಗೃತರಾಗಿ ಎಂದು ಎಚ್ಚರಿಸಿದರು.



ಹಿಂದೂ ಸಮಾಜೋತ್ಸವದಲ್ಲಿ ಅಖಿಲ ಭಾರತ ಟೋಳಿ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮಾತಾಡುತ್ತಿರುವುದು.

ಒಂದು ಬಡಾವಣೆಯಲ್ಲಿ ನಾವು ನೆಮ್ಮದಿಯಿಂದ ಬದುಕ ಬೇಕಾದರೆ, ಪ್ರತಿಯೊಬ್ಬ ಹಿಂದೂ ಒಂದೇ ಎನ್ನುವ ಭಾವನೆ ಮೂಡಬೇಕು. ಈ ಪರಿಸರ ಸೃಷ್ಟಿಯಾಗಬೇಕಾದರೆ, ಹಿಂದೂ ಪರಂಪರೆಗಳನ್ನು ತಪ್ಪದೇ ಆಚರಣೆ ಮಾಡಬೇಕು. ಹಿಂದೂಗಳಲ್ಲಿ ಸಣ್ಣಪುಟ್ಟ ಭಿನ್ನಾಪ್ರಾಯಗಳನ್ನು ಬೇರೆಯವರು ತಮ್ಮ ಲಾಭಕ್ಕೆ ಉಪಯೋಗಿಸಿಕೊಂಡು ನಮ್ಮ–ನಿಮ್ಮ ನಡುವೆ ಒಡಕು ಮೂಡಿಸುವ ಪಟ್ಟಾಭದ್ರ ಹಿತಾಸಕ್ತಿಗಳು ಹೆಚ್ಚುತ್ತಿವೆ. ಇಂತಹ ಕ್ರಿಯೆಗಳಿಂದ ಹಿಂದೂ ಧರ್ಮಕ್ಕೆ ಆಪತ್ತು ಬರಬಹುದು. ಹಾಗಾಗಿ ಪ್ರತಿಯೊಬ್ಬ ಹಿಂದೂ ನಾವೆಲ್ಲರೂ ಒಂದೇ ಎನ್ನುವ ಮನೋಭಾವ ಬೆಳಸಿಕೊಳ್ಳುವಂತೆ ಕರೆ ನೀಡಿದರು.

ಹಿಂದೂ ಎನ್ನುವ ಭಾವನೆ ಎಲ್ಲರಲ್ಲೂ ಮೂಡಿದರೆ ನಮ್ಮ ಬಡಾವಣೆಯಲ್ಲಿ ನಮ್ಮ ಸಂಸ್ಕೃತಿ, ನಮ್ಮ ಬದುಕು, ನಮ್ಮ ಸಾಂಸ್ಕೃತಿಕ ಪರಿಸರ ಎಲ್ಲವೂ ಒಂದೇ ಎನ್ನುವ ಭಾವನೆ ಮೂಡುತ್ತದೆ ಎಂದು ಹೇಳಿದರು. ಈ ವೇಳೆ ಮಂಡ್ಯದ ಬೇಬಿ ಮಠದ ಡಾ.ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ತುರ್ತು ಸಂದರ್ಭದಲ್ಲಿ ರೋಗಿಗೆ ತ್ವರಿತ ಸ್ಪಂದನೆ ಕುರಿತಾಗಿ ವಿಶೇಷ ಜಾಗೃತಿ

ಮೈಸೂರು, ಜ.19– ಹೃದಯಾಘಾತ, ಪಾರ್ಶ್ವವಾಯು, ಗಂಭೀರ ಅಪಘಾತಗಳಂತಹ ತುರ್ತು ಸಂದರ್ಭಗಳಲ್ಲಿ ತಕ್ಷಣದ ಸ್ಪಂದನೆಯ ಮಹತ್ವದ ಬಗ್ಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

'ತುರ್ತು ಸ್ಪಂದನೆ ಮತ್ತು ಬೇಸಿಕ್ ಲೈಫ್ ಸಪೋರ್ಟ್' ಶೀರ್ಷಿಕೆಯಡಿ ನಡೆದ ಕಾರ್ಯಕ್ರಮದಲ್ಲಿ ಸುಮಾರು 110 ಮಂದಿ ಪಾಲ್ಗೊಂಡು, ತುರ್ತು ಸಂದರ್ಭಗಳಲ್ಲಿ ಕೆಲ ನಿಮಿಷಗಳೊಳಗೆ ಸೂಕ್ತ ನೆರವು ದೊರೆತರೆ ಜೀವ ರಕ್ಷಣೆ ಸಾಧ್ಯ ಎಂಬುದನ್ನು ಪ್ರಾತ್ಯಕ್ಷಿಕೆಯೊಂದಿಗೆ ಮನದಟ್ಟು ಮಾಡಿಕೊಂಡರು.

ಆಸ್ಪತ್ರೆಯ ಸೀನಿಯರ್ ಕನ್ಸಲ್ಟೆಂಟ್ ನ್ಯೂರೋ ಸರ್ಜನ್(ಸೆರೆಬ್ರೋವಾಸ್ಕುಲರ್ & ಎಂಡೋವಾಸ್ಕುಲರ್ ಸರ್ಜರಿ) ಡಾ.ಎ.ಆರ್.ಮಕ್ಸೂದ್ ಅಹಮದ್ ಅವರು, ಅನೇಕ ಜನ ತುರ್ತು ಪರಿಸ್ಥಿತಿಗಳಲ್ಲಿ ಏನು ಮಾಡಬೇಕೆಂದು ತಿಳಿಯದೆ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡುತ್ತಾರೆ. ಪಾರ್ಶ್ವವಾಯುವಿನಿಂದ ಉಂಟಾಗಬಹುದಾದ ತೊಂದರೆಗಳಿಂದ ಪಾರು ಮಾಡುವ ನಿಟ್ಟಿನಲ್ಲಿ 'FAST(ಫಾಸ್ಟ್)' ಸೂತ್ರವನ್ನು ಅನುಸರಿಸಬೇಕು. ಅಂದರೆ ಮುಖ ಸೊಟ್ಟಗಾಗುವುದು(F-Facial deviation), ಕೈಗಳಲ್ಲಿ ದೌರ್ಬಲ್ಯ (A-Arm weakne), ಮಾತನಾಡಲು ತೊಂದರೆ(S-Speech difficulty) ಗುರುತಿಸಿ ಕೂಡಲೇ ತುರ್ತು ಸೇವೆಗೆ ಕರೆ(T-Time to call) ಮಾಡಿ, ಅವರಿಗೆ ವೈದ್ಯಕೀಯ ನೆರವು ಕಲ್ಪಿಸಿಕೊಡಬೇಕು ಎಂದು ತಿಳಿಸಿದರು.



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ 'ತುರ್ತು ಸ್ಪಂದನೆ ಮತ್ತು ಬೇಸಿಕ್ ಲೈಫ್ ಸಪೋರ್ಟ್' ಕಾರ್ಯಕ್ರಮದಲ್ಲಿ ವೈದ್ಯರು ಸಾರ್ವಜನಿಕರಿಗೆ ಅಗತ್ಯ ಸಲಹೆ ನೀಡಿದರು.

ಕನ್ಸಲ್ಟೆಂಟ್ ಇಂಟರ್ವೆನ್ಷನಲ್ ಕಾರ್ಡಿಯಾಲಜಿ ಡಾ.ಎನ್.ಎಂ.ಶರತ್ ಬಾಬು ಮಾತನಾಡಿ ಮನೆ, ಕಚೇರಿ, ಪ್ರಯಾಣದ ಸಮಯದಲ್ಲಿ ಹೃದಯಾಘಾತ ಸಂಭವಿಸುವ ಪ್ರಕರಣಗಳು ಹೆಚ್ಚುತ್ತಿವೆ. ಆ ಸಮಯದಲ್ಲಿ ಹತ್ತಿರ ಇರುವವರಿಗೆ ಪ್ರಾಥಮಿಕ ತುರ್ತು ಚಿಕಿತ್ಸೆಯ ಬಗ್ಗೆ ಅರಿವಿದ್ದರೆ ಹಾಗೂ ಅವರು ಗಾಬರಿಯಾಗದೆ ಸಹಾಯಕ್ಕೆ ಮುಂದಾದರೆ ಜೀವಾಪಾಯ ತಪ್ಪಿಸಬಹುದು. ವೈದ್ಯರು ಬರುವವರೆಗೆ ಅಥವಾ ಆಸ್ಪತ್ರೆ ತಲುಪುವವರೆಗೆ ಆ ವ್ಯಕ್ತಿಯ ಪ್ರಾಣ ಉಳಿಸಲು ತುರ್ತು ಸ್ಪಂದನೆ ಬಹಳ ಮುಖ್ಯ ಎಂದರು.

ಇದೇ ವೇಳೆ ಆಸ್ಪತ್ರೆಯ ತುರ್ತು ಚಿಕಿತ್ಸಾ ತಜ್ಞರಾದ ಡಾ.ಸೈಯದ್ ಮುಶೀರುದ್ದೀನ್, ಡಾ.ಗೌತಮ್ ಚಂದ್ರ, ಡಾ.ರಾಯಲ ಸಗುಣ ದತ್ತ ಮತ್ತು ಡಾ.ಅಮೀನಾ ಹುಸ್ನಾ ಅವರು, ತುರ್ತು ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆ ನೀಡುವ ವಿಧಾನಗಳನ್ನು ಪ್ರಾಯೋಗಿಕವಾಗಿ ತೋರಿಸಿದರು. ಯಾರಾದರೂ ಪ್ರಜ್ಞೆ ತಪ್ಪಿ ಬಿದ್ದಾಗ ಅಥವಾ ಅಪಘಾತವಾದಾಗ ಗಾಬರಿಯಾಗದೆ ಸಿಪಿಆರ್ ಮೂಲಕ ಜೀವ ಉಳಿಸುವುದು ಹೇಗೆ ಎನ್ನುವುದನ್ನು ಎಲ್ಲರಿಗೂ ತಿಳಿಸಿದರು.

ಈ ಸಂದರ್ಭದಲ್ಲಿ ಆಸ್ಪತ್ರೆಯ ತುರ್ತು ಚಿಕಿತ್ಸಾ ತಜ್ಞರ ತಂಡದವರಾದ ಡಾ. ಸೈಯದ್ ಮುಶೀರುದ್ದೀನ್, ಡಾ. ಗೌತಮ್ ಚಂದ್ರ, ಡಾ.ರಾಯಲ ಸಗುಣ ದತ್ತ ಮತ್ತು ಡಾ.ಅಮೀನಾ ಹುಸ್ನಾ ಮತ್ತಿತರರು ಉಪಸ್ಥಿತರಿದ್ದರು.

ಸೂಕ್ತ ಬೆಲೆ ಇದ್ದಾಗ ಮಾತ್ರ ಭತ್ತ ಮಾರಾಟ ಮಾಡಿ

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರದ ಅಧ್ಯಕ್ಷ ಲಿಂಗರಾಜು ಸಲಹೆ

ಮೈಸೂರು, ಜ.19(ಬಿಎಲ್‌ಯು)– ರೈತರು ಭತ್ತವನ್ನು ಸರ್ಕಾರದ ಉಗ್ರಾಣದಲ್ಲಿ ಸಂಗ್ರಹಿಸಿಟ್ಟು ಉತ್ತಮ ಬೆಲೆ ಬಂದಾಗ ಅದನ್ನು ಮಾರಾಟ ಮಾಡಿ ಹೆಚ್ಚು ಲಾಭ ಗಳಿಸಬೇಕು ಎಂದು ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು ಸಲಹೆ ನೀಡಿದರು.

ಮೈಸೂರಿನ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಇಂದು ಬೆಂಗಳೂರಿನ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಆಯೋಜಿಸಿದ್ದ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭತ್ತ ಒಕ್ಕಣೆ ಮಾಡಿದ ನಂತರ ಕಡಿಮೆ ಬೆಲೆ ಇದ್ದರೆ ಯಾವುದೇ ಕಾರಣಕ್ಕೂ ಅದನ್ನು ಮಾರಾಟ ಮಾಡಬಾರದು. ಸರ್ಕಾರದ ಉಗ್ರಾಣದಲ್ಲಿ ಸಂಗ್ರಹಿಸಿಟ್ಟು ಉತ್ತಮ ಬೆಲೆ ಬಂದಾಗ ಮಾರಾಟ ಮಾಡಬೇಕು ಎಂದು ಹೇಳಿದರು.

ಖಾಸಗಿ ಯಂತ್ರಗಳನ್ನು ಬಾಡಿಗೆಗೆ ಪಡೆದು ರೈತರು ಭತ್ತ ಕೊಯ್ಲು ಮಾಡಿಸುತ್ತಾರೆ. ಆದರೆ ಖಾಸಗಿಯವರು ದುಬಾರಿ ಬಾಡಿಗೆ ಸುಲಿಗೆ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಎಫ್‌ಪಿಒ (ರೈತ ಉತ್ಪಾದಕ ಸಂಸ್ಥೆ)ಗಳು ಭತ್ತ ಕೊಯ್ಲು ಯಂತ್ರಗಳಿಗೆ ಕಡಿಮೆ ಬಾಡಿಗೆ ನಿಗದಿ ಮಾಡಿ ಕೊಯ್ಲು ಮಾಡಿಸಬೇಕು. ಇದರಿಂದ ರೈತರಿಗೆ ಪ್ರಯೋಜನವಾಗುತ್ತದೆ ಎಂದು ಲಿಂಗರಾಜು ಆಗ್ರಹಿಸಿದರು.



ಮೈಸೂರಿನ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಸೋಮವಾರ ಬೆಂಗಳೂರಿನ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಆಯೋಜಿಸಿದ್ದ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಜಂಟಿ ನಿರ್ದೇಶಕ ಬಾಬು ಮಾತನಾಡಿದರು.

ಈ ವೇಳೆ ಮಾತನಾಡಿದ ಜಂಟಿ ಕೃಷಿ ನಿರ್ದೇಶಕ ನಾಗರಾಜು ಅವರು, ಕೃಷಿ ಸುಸ್ಥಿರವಾಗಿರಬೇಕು, ಲಾಭದಾಯಿಕವಾಗಿರಬೇಕು ಎಂದು 2024 ನೇ ಸಾಲಿನ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಸಮಗ್ರ ಕೃಷಿ ಯೋಜನೆ ಘೋಷಣೆ ಮಾಡಲಾಗಿದೆ. ಈ ಮೂಲಕ ಹೈನುಗಾರಿಕೆ, ರೇಷ್ಮೆ ಬೆಳೆ, ಮೀನುಗಾರಿಕೆಗೆ ಉತ್ತೇಜನ ನೀಡಲಾಗುತ್ತಿದೆ ಎಂದರು.

ಕಷ್ಟಪಟ್ಟು ಬೆಳೆ ಬೆಳೆದು ಅದನ್ನು ಮಾರಾಟ ಮಾಡಿದರೆ ರೈತರಿಗೆ ಲಾಭ ದೊರೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ವೆಚ್ಚ ಕಡಿಮೆ ಮಾಡಿ, ಹೆಚ್ಚು ಇಳುವರಿ ಬೆಳೆ ತೆಗೆಯಲು ಕೃಷಿ ಇಲಾಖೆ ಕೃಷಿ ವಸ್ತು ಮೌಲ್ಯವರ್ಧನೆಗೆ ಮುಂದಾಗಿದೆ ಎಂದು ನಾಗರಾಜು ತಿಳಿಸಿದರು.

ಮೈಸೂರು ಕೈಗಾರಿಕೆ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಬಾಬು, ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕ ಕೆ.ಸೋಮಶೇಖರ್, ಮೈಸೂರು ರಫ್ತು ಸೌಲಭ್ಯ ಕೇಂದ್ರದ ಉಪ ನಿರ್ದೇಶಕಿ ಎಲ್.ಮೇಘಲಾ, ಕಾರ್ಯಕ್ರಮ ಸಂಯೋಜಕ ಅರವಿಂದ ವೇದಿಕೆಯಲ್ಲಿ ಉಪಸ್ಥಿತರಿದ್ದರು.